ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ ೪

ಪಂಚೋಪನಿಷದಃ

(ದೇವೀಪರವಾದ ಐದು ಉಪನಿಷತ್ತುಗಳು)

ಸರಸ್ವತೀರಹಸ್ಯ, ಸೌಭಾಗ್ಯಲಕ್ಷ್ಮೀ, ಸಾವಿತ್ರೀ,
ದೇವೀ, ಗಾಯತ್ರೀ

ಕನ್ನಡ ಅರ್ಥಾನುವಾದ ವಿವರಣೆಗಳೊಡನೆ.

ಅನುವಾದಕ

ಎಡತೊರೆ ಚಂದ್ರಶೇಖರಶಾಸ್ತ್ರೀ

ಮುದ್ರಣಸ್ಥಾನ

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿತ್ರಭಾನು ಸಂ. ಆಶ್ವಯುಜ ಶುಕ್ಲ

ಪ್ರಥಮಾ

1942

ಮುನ್ನುಡಿ

ಶ್ರೀ ಗಣೇಶಶಾರದಾಗುರುಭ್ಯೋನಮಃ

ತತ್ತ್ವಗಳನ್ನು ತಿಳಿಯಬಯಸುವುದು ಮಾನವನ ಹುಟ್ಟುಗುಣವಾಗಿದೆ. ಆದುದರಿಂಧಲೇ ಜಿಜ್ಞಾಸುವೂ ಉಪಾಸಕನೂ ಹೀಗೆ ಆಶಿಸುತ್ತಿರುತ್ತಾರೆ.

" ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾಮೃತಂ
ಗಮಯ, ಅಸತೋ ಮಾ ಸದ್ಗಮಯ "

ಎಂದರೆ, ಅಜ್ಞಾನವೆಂಬ ಕತ್ತಲೆಯಿಂದ ನನ್ನನ್ನು ತಿಳಿವಳಿಕೆಯ, ಅಪರೋಕ್ಷಾನುಭವದ, ಬೆಳಕಿಗೆ ತಲಪಿಸು. ಬದಲಾಯಿಸುತ್ತಾ ನಾಶವಾಗುವ ಸ್ಥಿತಿಯಿಂದ ಮರಣವಿಕಾರಗಳಿಲ್ಲದೆ ಶಾಶ್ವತವಾದ ಸ್ಥಿತಿಗೆ ನನ್ನನ್ನು ಪಡೆಯಿಸು. ಪರಿಣಾಮಗಳನ್ನು ಪಡೆಯುತ್ತಾ ನಿತ್ಯವಲ್ಲದಿರುವ ಅವಸ್ಥೆಯಿಂದ ನನ್ನನ್ನು ಎಲ್ಲಕ್ಕೂ ಕಾರಣವಾದ, ಅಧಿಷ್ಠಾನವಾದ, ತ್ರಿಕಾಲಾಬಾಧ್ಯವಾದ, ಸದ್ರೂಪವಾದ ತತ್ವಕ್ಕೆ ನಡೆಯಿಸು ಎಂದು ಚಿತ್ರಕಾಶಸ್ವರೂಪನಾದ ಪರಮಾತ್ಮನನ್ನು ಪ್ರಾರ್ಥಿಸುತ್ತಿರುತ್ತಾರೆ.

ಭಾರತಾರ್ಯರ ಸಾಹಿತ್ಯವೃಕ್ಷದಲ್ಲಿ ಉಪನಿಷತ್ತುಗಳು ಉತ್ತಮವಾದ ಪುಷ್ಪಗಳಂತೆಯೂ, ಶ್ರೇಷ್ಠವಾದ ಫಲಗಳಂತೆಯೂ ಇವೆ. ಇವುಗಳಲ್ಲಿ ಈಶ, ಕೇನ, ಛಾಂದೋಗ್ಯ, ಬೃಹದಾರಣ್ಯಕ ಮುಂತಾಧ ಉಪನಿಷತ್ತುಗಳು ವೇದಾಂತತತ್ವಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿ ವಿಸ್ತಾರವಾಗಿ ವಿವರಿಸುತ್ತಿವೆ. ಇವುಗಳಿಗೆ ಅನೇಕ ಮಹನೀಯರಾದ ಆಚಾರ್ಯರು ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ಬರೆದಿರುತ್ತಾರೆ. ಆದುದರಿಂದ ಅವು ಜನರಿಗೆ ಹೆಚ್ಚು ಪರಿಚಿತವಾಗಿವೆ. ಇವಲ್ಲದೆ ಇನ್ನೂ ಅನೇಕ ಉಪನಿಷತ್ತುಗಳಿದ್ದರೂ ಇವಕ್ಕೆ ಭಾಷ್ಯ ವ್ಯಾಖ್ಯಾನಗಳಿಲ್ಲದೆ ಅವುಗಳಷ್ಟು ಪ್ರಚಾರಕ್ಕೆ ಬರದೆ ಇವೆ. ಆದರೂ ಇವುಗಳಲ್ಲೂ ಮೇಲಾದ ಉಪದೇಶಗಳೂ, ಉಪಾಸನೆಯ ಉತ್ತಮವಾದ ರೀತಿನೀತಿಗಳೂ ವಿವರಿಸಲ್ಪಟ್ಟಿವೆ. ಇವುಗಳ ಪರಿಚಯ ವ್ಯಾಸಂಗಗಳಿಂದಲೂ ಜಿಜ್ಞಾಸುಗಳಿಗೂ ಉಪಾಸಕರಿಗೂ ತುಂಬ ಪ್ರಯೋಜನವಾಗುತ್ತದೆ.

ಈಗ ಮುದ್ರಿತವಾಗಿರುವ ಐದು ಉಪನಿಷತ್ತುಗಳು ಸರ್ವಚೈತನ್ಯರೂಪಳೂ, ಆದಿವಿದ್ಯಾರೂಪಳೂ, ಪರಾಶಕ್ತಿಸ್ವರೂಪಳೂ ಆಗಿರುವ ದೇವಿಯ ಸ್ವರೂಪವನ್ನು

ವಿವರಿಸುತ್ತವೆ. ಇವುಗಳಲ್ಲಿ ಸರಸ್ವತೀ ರಹಸ್ಯೋಪನಿಷತ್ತೂ, ಸೌಭಾಗ್ಯಲಕ್ಷ್ಮ್ಯುಪ ನಿಷತ್ತೂ, ಋಗ್ವೇದಕ್ಕೆ ಸಂಬಂಧಿಸಿವೆ. ಸಾವಿತ್ರ್ಯುಪನಿಷತ್ತು ಸಾಮವೇದಕ್ಕೂ, ದೇವ್ಯುಪನಿಷತ್ತು ಅಥರ್ವಣವೇದಕ್ಕೂ ಸೇರಿದುವಾಗಿವೆ. ಗಾಯತ್ರೀಮಂತ್ರವು ವೇದತ್ರಯಸಾರವಾಗಿದೆ ಎಂದು ಹೇಳಿರುವುದರಿಂದ, ಗಾಯತ್ರ್ಯುಪನಿಷತ್ತನ್ನು ಮೂರು ವೇದಗಳಿಗೂ ಸಂಬಂಧಿಸಿದೆ ಎನ್ನಬಹುದು. ಅಲ್ಲದೆ 'ಪರೋರಜಸಿ ಸಾವದೋಂ' ಎಂಬುದು ಗಾಯತ್ರೀಮಂತ್ರದ ನಾಲ್ಕನೆಯ ಪಾದವೆಂದೂ, ಅದು ಅಥರ್ವಣವೇದಕ್ಕೆ ಸೇರಿದುದೆಂದೂ ಹೇಳಿರುವುದನ್ನು ಗಮನಿಸಿದರೆ ಈ ಉಪ ನಿಷತ್ತನ್ನು ನಾಲ್ಕು ವೇದಗಳಿಗೂ ಸಂಬಂಧಿಸಿದುದೆಂದು ಭಾವಿಸಲು ಅಡ್ಡಿ ಇಲ್ಲವು.

ಸಂಸ್ಕೃತಭಾಷೆಯಲ್ಲಿರುವ ಈ ಉಪನಿಷತ್ತುಗಳ ಅರ್ಥದ ತಿಳಿವಳಿಕೆಯೂ, ಉಪಾಸನೆಯ ರೀತಿಗಳ ಪರಿಚಯವೂ ಕನ್ನಡಿಗರಿಗೂ ದೊರೆಯಲೆಂದು, ಪ್ರಜಾ ವತ್ಸಲರೂ ಧಾರ್ಮಿಕರೂ ಆಗಿರುವ ನಮ್ಮನ್ನಾಳುವ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರ** ಆಜ್ಞೆಯನ್ನನುಸರಿಸಿ, ಈ ಉಪನಿಷತ್ತುಗಳನ್ನು ಕನ್ನಡ ಅರ್ಥಾನುವಾದ ವಿವರಣೆ ಗಳೊಡನೆ ಪ್ರಕಟಿಸಲಾಗಿದೆ.

ಎಡತೊರೆ ಚಂದ್ರಶೇಖರಶಾಸ್ತ್ರೀ.

|| ಶ್ರೀಃ ||

||ಋಗ್ವೇದೀಯ ಸರಸ್ವತೀರಹಸ್ಯೋಪನಿಷತ್||

|| ಶ್ರೀರಸ್ತು ||

|| ಶ್ರೀ ಗಣೇಶಶಾರದಾಗುರುಭ್ಯೋನಮಃ ||

|| ಋಗ್ವೇದೀಯ ಸರಸ್ವತೀರಹಸ್ಯೋಪನಿಷತ್ ||

ಋಕ್, ಯಜುಸ್, ಸಾಮ, ಅಥರ್ವನ್ ಎಂಬ ನಾಲ್ಕು ವೇದಗಳಿಗೂ ಅನೇಕ ಉಪನಿಷತ್ತುಗಳಿವೆ. ಅವುಗಳಲ್ಲಿ ಈ ಉಪನಿಷತ್ತು ಋಗ್ವೇದಕ್ಕೆ ಸಂಬಂಧಿಸಿದುದು. ಇದರಲ್ಲಿ ಸರಸ್ವತೀ ದೇವತೆಯ ತತ್ತ್ವವನ್ನು ತಿಳಿಸಿದೆ. ಕ್ಲ್ಪಪ್ತವಾದ ವರ್ಣಸಂಖ್ಯೆ, ಪ್ರಮಾಣಗಳಿಂದ ಕೂಡಿರುವ ವಾಕ್ಯಕ್ಕೆ ಛಂದಸ್ ಎಂದು ಸಂಜ್ಞೆ ಇದೆ. ಛಂದೋಬದ್ಧವಾದ ವೇದಮಂತ್ರಕ್ಕೆ ಋಕ್ ಎಂದು ಹೆಸರು. ಸದ್ಗುರುವಿನ ಸಮೀಪದಲ್ಲಿ ಏಕಾಂತವಾಗಿ ವಿನಯದೊಡನೆ ಕುಳಿತುಕೊಂಡು ಶಿಷ್ಯನು ರಹಸ್ಯ ತತ್ತ್ವ (ಈ ಪ್ರಪಂಚ, ಜೀವರು, ದೇವರು ಇವುಗಳ ಸಂಬಂಧ) ಗಳನ್ನು ಕೇಳಿ ತಿಳಿದುಕೊಳ್ಳುತ್ತಿರುವ ಸ್ಥಿತಿಗೆ ಮತ್ತು ಆಗ ಮಾಡುವ ಉಪದೇಶಗಳಿಗೆ ಉಪನಿಷತ್ ಎಂದು ವ್ಯವಹಾರವಿದೆ. ಹಾಗೆಯೇ ಅಂತಹ ಉಪದೇಶಗಳನ್ನು ತಿಳಿಯಿಸುವ ಗ್ರಂಥಗಳನ್ನೂ ಉಪನಿಷತ್ ಎಂದು ಕರೆಯುತ್ತಾರೆ.

ಜ್ಞಾನಕ್ಕೆ ಅಭಿಮಾನಿ ದೇವತೆಯೂ, ಜ್ಞಾನಪ್ರದಳೂ ಆದ ಮತ್ತು ಚಿಚ್ಛಕ್ತಿ ಸ್ವರೂಪಳೂ ಆಗಿರುವ ದೇವಿಗೆ ಸರಸ್ವತೀ ಎಂದು ಅಭಿಧಾನವಿದೆ. ಅಲ್ಲದೆ ಈ ದೇವಿಯನ್ನು ಸರಸ್ವತೀ ಎಂಬ ಹೆಸರಿನ ನದಿಗೂ ಅಭಿಮಾನಿದೇವತೆ ಎಂದೂ ವರ್ಣಿಸಿದೆ. ಇದರಲ್ಲೂ ಒಂದು ಔಚಿತ್ಯವನ್ನು ಕಾಣಬಹುದು. ನೀರು ಸ್ಥೂಲವಾದ ಹೊರಗಿನ ಕೊಳೆಯನ್ನು ತೊಳೆದು ಶುದ್ಧಿಮಾಡುವಂತೆ, ಉಪನಿಷತ್ತು ಸೂಕ್ಷ್ಮವೂ, ಅನಾದಿಯೂ ಆದ ಒಳಗಿನ ಅಜ್ಞಾನವೆಂಬ ಕೊಳೆಯನ್ನು ತೊಳೆದು ಮನಸ್ಸನ್ನು ನಿರ್ಮಲವನ್ನಾಗಿ ಮಾಡಿ ತತ್ತ್ವಜ್ಞಾನವು ಸ್ಫುರಿಸುವಂತೆ ಮಾಡುತ್ತದೆ.

ಶಾಂತಿಮಂತ್ರವು.

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿಪ್ರತಿಷ್ಠಿತಂ ।

ನನ್ನ ಮಾತು ನನ್ನ ಮನಸ್ಸಿನಲ್ಲಿ ನೆಲಸಿರಲಿ. ನನ್ನ ಮನಸ್ಸು ನನ್ನ ಮಾತಿನಲ್ಲಿ ನೆಲಸಿರಲಿ. ಎಂದರೆ ಪರತತ್ತ್ವಜ್ಞಾನವನ್ನುಂಟುಮಾಡುವ ಈ ಉಪನಿಷದ್ಗ್ರಂಥದ ಪಾರಾಯಣದಲ್ಲಿ ತೊಡಗಿರುವ, ನನ್ನ ವಾಕ್ಕು ಮನಸ್ಸಿನಲ್ಲಿ

ನೆಲಸಿರಲಿ. ಏಕೆಂದರೆ ಜನರ ಮನಸ್ಸಿನಲ್ಲಿ ಯಾವ ಶಬ್ದವನ್ನು ಹೇಳಲು ಇಚ್ಛೆ ಇರುತ್ತದೆಯೋ, ಅದನ್ನೇ ಸಾಮಾನ್ಯವಾಗಿ ಹೇಳುವುದೂ ಕಂಡುಬರುತ್ತಿದೆ. ಹಾಗೆಯೇ ನನ್ನ ಮನಸ್ಸೂ ಆ ಮಾತಿನಲ್ಲಿ ನೆಲಸಿರಲಿ. ಏಕೆಂದರೆ ಜ್ಞಾನವನ್ನು ಯಾವ ಮಾತು ತಿಳಿಸಬಲ್ಲುದೋ ಅದನ್ನೇ ಹೇಳಬೇಕೆಂದು ಇಚ್ಛೆಯೂ ಇರುತ್ತದೆ. ಹೀಗೆ ಪರಸ್ಪರವಾಗಿ ಸಹಕರಿಸುವ ಮನಸ್ಸು ಮತ್ತು ವಾಕ್ಕುಗಳಿಂದಲೇ ತತ್ತ್ವಾರ್ಥವನ್ನು ಸಮಗ್ರವಾಗಿಯೂ ವಿಶದವಾಗಿಯೂ ತಿಳಿಯಲಾಗುವುದು. ಆದುದರಿಂದ ಇವೆರಡರ ಸಹಕಾರದಿಂದ ತತ್ತ್ವಾರ್ಥವನ್ನು ನಾನು ತಿಳಿಯುವಂತಾಗಲಿ ಎಂದು ಭಾವವು.

ಆವಿರಾವೀರ್ಮ ಏಧಿ । ವೇದಸ್ಯಮ ಆಣೀಸ್ಥಃ । ಶ್ರುತಂ ಮೇ ಮಾ ಪ್ರಹಾಸೀಃ। ಅನೇನಾನಾಧೀತೇನ ಅಹೋರಾತ್ರಾನ್ ಸಂದಧಾಮಿ ॥

ಆವಿಃ ಎಂದರೆ ಪ್ರಕಾಶಸ್ವಭಾವವುಳ್ಳ ಜ್ಞಾನಸ್ವರೂಪವಾದ ಆತ್ಮ ಚೈತನ್ಯವು. ಅದು ನನ್ನ ಹೃದಯದಲ್ಲಿ ಸ್ಫುರಿಸುವಂತಾಗಲಿ. ಓ ಆತ್ಮವೇ ನಿನ್ನ ನಿಜಸ್ವರೂಪವನ್ನು ನನಗೆ ಗೋಚರವಾಗುವಂತೆ ಮಾಡು. ಎಂದರೆ ಅವಿದ್ಯೆಯ ಮುಸುಕನ್ನು ತೆಗೆದುಹಾಕಿ ಪ್ರಕಟವಾಗು. ಓ ವಾಙ್ಮನಸ್ಸುಗಳೇ, ನನಗೆ ತತ್ತ್ವಜ್ಞಾನವನ್ನು ಉಂಟುಮಾಡಬಲ್ಲ ಉಪನಿಷದ್ವಾಕ್ಯದಿಂದ ಈ ವೇದದ ತತ್ತ್ವಾರ್ಥವನ್ನು ನನಗೆ ಸ್ಫುರಿಸುವಂತೆ ಮಾಡ ಬಲ್ಲವರಾಗಿರಿ. ನಾನು ಕೇಳಿರುವ ಶಬ್ದಾರ್ಥಗಳು ನನ್ನನ್ನು ಬಿಟ್ಟು ಆಗಲದಿರಲಿ. ಈ ತಿಳಿವಳಿಕೆಯು ನಡೆವಳಿಕೆಯನ್ನು ಮೇಲ್ಪಡಿಸುತ್ತಿರಲಿ. ಈ ಅಧ್ಯಯನದೊಡನೆ ನಾನು ಹಗಲು ರಾತ್ರಿಗಳನ್ನು ಕೂಡಿಸಿರುತ್ತೇನೆ, ಎಂದರೆ ನಾನು ಯಾವಾಗಲೂ ಎಡೆ ಬಿಡದೆ, ಹಗಲಿನಲ್ಲೂ ರಾತ್ರಿಯಲ್ಲೂ ಒಂದು ಕ್ಷಣವನ್ನೂ ಬೇರೆ ಕೆಲಸವನ್ನು ಮಾಡು ವುದರಲ್ಲಿ ವ್ಯರ್ಥವಾಗಿ ಕಳೆಯದೆ, ಈ ಅಧ್ಯಯನ ಅರ್ಥಧ್ಯಾನಗಳಲ್ಲೇ ಆಸಕ್ತವಾ ಗಿರುವಂತೆ ಮಾಡಿರುತ್ತೇನೆ.

ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾ ಮವತು । ತದ್ವಕ್ತಾರಮವತು । ಅವತು ಮಾಂ । ಅವತು ವಕ್ತಾರಂ ಅವತು ವಕ್ತಾರಂ ॥

॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಪರಮಾರ್ಥತತ್ತ್ವವನ್ನು ಮನಸ್ಸಿನಿಂದ ವಿಚಾರಿಸಿ ತಿಳಿದು ಮಾತಿನಿಂದ ಹೇಳುತ್ತಿರುತ್ತೇನೆ. ಋತಂ ಎಂದರೆ ಮಾನಸಿಕವಾದ ಸತ್ಯವು. ಸತ್ಯಂ ಎಂದರೆ ವಾಚಿಕವಾದ ಸತ್ಯವು. ನಾನು ಮನಸ್ಸಿನಲ್ಲೂ ಮಾತಿನಲ್ಲೂ ಸತ್ಯವನ್ನೇ ಹೇಳು ತ್ತೇನೆ. ಆ ಪಾರಮಾರ್ಥಿಕ ಸತ್ಯವಾದ ಬ್ರಹ್ಮತತ್ತ್ವವು ನನ್ನನ್ನು ಸಮ್ಯಕ್

ಜ್ಞಾನವನ್ನು ಉಂಟುಮಾಡೋಣದರಿಂದ ಕಾಪಾಡಲಿ. ಹಾಗೆಯೇ ನನ್ನ ಗುರುವನ್ನೂ ತತ್ತ್ವವನ್ನು ನನಗೆ ಬೋಧಿಸುವಷ್ಟು ಸಾಮರ್ಥ್ಯವುಳ್ಳವನನ್ನಾಗಿ ಮಾಡಿ ಕಾಪಾಡಲಿ. ಈ ಪ್ರಕಾರವಾಗಿ ಸಾಧನಕಾಲದಲ್ಲಿ ಹೇಗೋ ಹಾಗೆ ಫಲಕಾಲದಲ್ಲೂ ಎಂದರೆ ಅಧ್ಯಯನ ಉಪದೇಶಗಳು ಮುಗಿದ ಮೇಲೂ ಶಿಷ್ಯನನ್ನು ಅವನ ಅಜ್ಞಾನವನ್ನು ಹೋಗಲಾಡಿಸಿ ಕಾಪಾಡಲಿ. ಗುರುವನ್ನು ತಿಳುವಳಿಕೆಯ ನಂದಾದೀಪವನ್ನು ನಂದದಂತೆ ಉಜ್ವಲವಾಗಿ ಕಾಪಾಡಿ ಮುಂದಕ್ಕೆ ಶಿಷ್ಯನ ಮೂಲಕ ಸಾಗಿಸುವಂತಾದುದರಿಂದ ಉಂಟಾಗುವ ಸಂತೋಷವನ್ನು ಕೊಟ್ಟು ಕಾಪಾಡಲಿ. ಈ ಅಭಿಪ್ರಾಯದ ಪ್ರಾಮುಖ್ಯವನ್ನು ಸೂಚಿಸುವುದಕ್ಕೋಸ್ಕರ 'ಅವತು ಮಾಂ, ಅವತು ವಕ್ತಾರಂ' ಎಂದು ಎರಡನೆಯ ಆವೃತ್ತಿಯೂ ಹೇಳಿದೆ. ಕಡೆಯಲ್ಲಿ ಅವತು ವಕ್ತಾರಂ ಎಂದು ಎರಡುಸಲ ಹೇಳಿರುವುದು ಈ ಉಪನಿಷತ್ತಿನ ಶಾಂತಿಮಂತ್ರವು ಮುಗಿದುದನ್ನು ತಿಳಿಸುತ್ತದೆ.

ಉಪನಿಷತ್.

ಓಂ ಋಷಯೋ ಹ ವೈ ಭಗವಂತಮಾಶ್ವಲಾಯನಂ
ಸಂಪೂಜ್ಯ ಪಪ್ರಚ್ಛುಃ ||

ಋಷಿಗಳು ಷಡ್ಗುಣೈಶ್ವರ್ಯಶಾಲಿಯಾದ ಅಶ್ವಲಾಯನ ಮಹರ್ಷಿಯನ್ನು ಪೂಜಿಸಿ, ಗೌರವಿಸಿ ಪ್ರಶ್ನೆ ಮಾಡಿದರು.

ಕೇನೋಪಾಯೇನ ತತ್ ಜ್ಞಾನಂ ತತ್ಪದಾರ್ಥಾವಭಾಸಕಂ |
ಯದುಪಾಸನಯಾ ತತ್ತ್ವಂ ಜಾನಾಸಿ ಭಗವನ್ ವದ ||

ಓ ಮಹಾಮಹಿಮನಾದ ಮಹರ್ಷಿಯೇ, ಆ ಸತ್ಯವಾದ ಪರಮಾರ್ಥತತ್ತ್ವವನ್ನು ತಿಳಿಸುವ ಜ್ಞಾನವು ಯಾವ ಸಾಧನದಿಂದ ಉಂಟಾಗುತ್ತದೆ? ಯಾವ ಉಪಾಸನೆಯಿಂದ ನೀನು ಆ ನಿತ್ಯವಸ್ತುವಿನ ತತ್ತ್ವ ಸ್ವರೂಪವನ್ನು ತಿಳಿದಿರುವನಾದೆ? ಅದನ್ನು ನಮಗೆ ತಿಳಿಸುವವನಾಗು.

ಸರಸ್ವತೀದಶಶ್ಲೋಕ್ಯಾ ಸಋಚಾ ಬೀಜಮಿಶ್ರಯಾ |
ಸ್ತುತ್ವಾ ಜಪ್ತ್ವಾ ಪರಾಂ ಸಿದ್ಧಿಮಲಭನ್ ಮುನಿಪುಂಗವಾಃ||

ಶ್ರೀ ಸರಸ್ವತೀದೇವಿಯ ತತ್ತ್ವವನ್ನು ತಿಳಿಸುವ ಋಙ್ಮಂತ್ರಗಳಿಂದ ಕೂಡಿರುವ ಬೀಜ ಶಕ್ತಿ ಕೀಲಕಗಳಿಂದ ಸಹಿತವಾಗಿರುವ, ಹತ್ತು ಶ್ಲೋಕಗಳುಳ್ಳ, ಈ ಉಪನಿಷದ್ಗ್ರಂಥವನ್ನು ಋಷಿಗಳಲ್ಲಿ ಉತ್ತಮರಾದವರು ಸ್ತೋತ್ರಮಾಡಿ ಜಪಮಾಡಿ ಉತ್ತಮವಾದ ಫಲಸಿದ್ಧಿಯನ್ನು ಪಡೆದರು ಎಂದು ಅಶ್ವಲಾಯನನು ಹೇಳಿದನು.

ಋಷಯ ಊಚುಃ —

ಕಥಂ ಸಾರಸ್ವತಪ್ರಾಪ್ತಿಃ ಕೇನ ಧ್ಯಾನೇನ ಸುವ್ರತ ।
ಮಹಾಸರಸ್ವತೀ ಯೇನ ತುಷ್ಟಾ ಭಗವತೀ ವದ ॥

ಋಷಿಗಳು ಕೇಳಿದರು— ನೀತಿನಿಯಮಗಳನ್ನು ಚನ್ನಾಗಿ ಪಾಲಿಸುವ ಅಶ್ವಲಾಯನ ಮಹರ್ಷಿಯೇ, ಸರಸ್ವತೀದೇವಿಯ ತತ್ತ್ವಜ್ಞಾನದ ಲಾಭವು ಯಾವ ಧ್ಯಾನ ಉಪಾಸನೆಯಿಂದ ಹೇಗೆ ಉಂಟಾಗುತ್ತದೆ? ಯಾವ ಜಪ ಧ್ಯಾನದಿಂದ ಆ ಸರಸ್ವತೀ ದೇವಿಯು ಸಂತುಷ್ಟಳಾಗುತ್ತಾಳೆ? ಅದನ್ನು ದಯವಿಟ್ಟು ನಮಗೆ ತಿಳಿಯಹೇಳು.

ಸಹೋವಾಚಾಶ್ವಲಾಯನಃ । ಅಸ್ಯ ಶ್ರೀ ಸರಸ್ವತೀದಶ ಶ್ಲೋಕೀಮಹಾಮಂತ್ರಸ್ಯ ಅಹಮಾಶ್ವಲಾಯನಋಷಿಃ । ಅನಷ್ಟುಪ್‌ಛಂದಃ । ಶ್ರೀ ವಾಗೀಶ್ವರೀ ದೇವತಾ । ಯದ್ವಾಗಿತಿ ಬೀಜಂ । ದೇವೀಂ ವಾಚಮಿತಿ ಶಕ್ತಿಃ । ಪ್ರಣೋ ದೇವೀತಿ ಕೀಲಕಂ । ವಿನಿಯೋಗಸ್ತತ್ಪ್ರೀತ್ಯರ್ಥೇ । ಶ್ರದ್ಧಾ ಮೇಧಾ ಪ್ರಜ್ಞಾ ಧಾರಣಾ ವಾಗ್ದೇವತಾ ಮಹಾಸರಸ್ವತೀತ್ಯೇತೈರಂಗನ್ಯಾಸಃ ॥

ಆ ಅಶ್ವಲಾಯನ ಮಹರ್ಷಿಯು ಹೇಳಿದನು. ಈ ಸರಸ್ವತೀದೇವಿಯ ದಶ ಶ್ಲೋಕೀ ಎಂದು ಪ್ರಸಿದ್ಧವಾಗಿರುವ ಶ್ರೇಷ್ಠವಾದ ಮಂತ್ರಕ್ಕೆ ಅಶ್ವಲಾಯನನೆಂಬ ಹೆಸರುಳ್ಳ ನಾನೇ ಋಷಿಯು, ಎಂದರೆ, ಮೊದಲು ಮನಗಂಡು ಪ್ರಚಾರಕ್ಕೆ ತಂದ ವನು. ಈ ಮಂತ್ರವು ಅನುಷ್ಟುಪ್ ಛಂದಸ್ಸಿನಲ್ಲಿ ಎಂದರೆ ಎಂಟು ಅಕ್ಷರಗಳುಳ್ಳ ನಾಲ್ಕು ಪಾದಗಳುಳ್ಳದ್ದಾಗಿ ಇದೆ. ಈ ಮಂತ್ರದಿಂದ ಉಪಾಸನೆ ಮಾಡಬೇಕಾದ ದೇವತೆಯು ಸರಸ್ವತೀದೇವಿಯು. ಆ ದೇವಿಯು ಎಲ್ಲ ವಾಙ್ಮಯಕ್ಕೂ ಅಭಿಮಾನಿ ದೇವತೆಯಾದ ಪ್ರಭುವಾಗಿದಾಳೆ. 'ಯದ್ವಾಗ್ವದಂತೀ' ಎಂದು ಪ್ರಾರಂಭವಾಗಿರುವ ಮಂತ್ರವೇ ಈ ದಶಶ್ಲೋಕೀ ಮಂತ್ರಕ್ಕೆ ಬೀಜವಾಗಿದೆ. 'ದೇವೀಂ ವಾಚಂ' ಎಂದು ಮೊದಲಾಗಿರುವ ಮಂತ್ರವೇ ಇದಕ್ಕೆ ಶಕ್ತಿಯಾಗಿದೆ. 'ಪ್ರಣೋದೇವೀ' ಎಂಬ ಋಙ್ಮಂತ್ರವೇ ಇದಕ್ಕೆ ಕೀಲಕವಾಗಿದೆ, ಎಂದು ಧ್ಯಾನಿಸಬೇಕು. ಆ ಮಹಾ ಸರಸ್ವತೀದೇವಿಯ ಸಂತೋಷಾನುಗ್ರಹಗಳನ್ನು ಪಡೆಯುವುದಕ್ಕೋಸ್ಕರ ಈ ದಶ ಶ್ಲೋಕೀ ಮಂತ್ರವನ್ನು ವಿನಿಯೋಗಿಸಬೇಕು. ಶ್ರದ್ಧಾ, ಮೇಧಾ, ಪ್ರಜ್ಞಾ, ಧಾರಣಾ, ವಾಗ್ದೇವತಾ, ಮಹಾಸರಸ್ವತೀ ಎಂಬ ನಾಮಗಳಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಬೇಕು.

ನೀಹಾರಹಾರಘನಸಾರಸುಧಾಕರಾಭಾಂ
ಕಲ್ಯಾಣದಾಂ ಕನಕಚಂಪಕದಾಮಭೂಷಾಂ ।
ಉತ್ತುಂಗಪೀನಕುಚಕುಂಭಮನೋಹರಾಂಗೀಂ
ವಾಣೀಂ ನಮಾಮಿ ಮನಸಾ ವಚಸಾಂ ವಿಭೂತ್ಯೈ ॥

ಆಮೇಲೆ ಉಪಾಸ್ಯದೇವತೆಯ ಧ್ಯಾನವನ್ನು ಹೀಗೆ ಮಾಡಬೇಕು. ಮಂಜು, ಹೂಮಾಲೆ, ಪಚ್ಚಕರ್ಪೂರ, ಅಮೃತಕಿರಣವುಳ್ಳ ಚಂದ್ರ ಇವರಿಗೆ ಸಮಾನವಾದ ಕಾಂತಿಯುಳ್ಳ, ಮಂಗಳಗಳನ್ನು ಅನುಗ್ರಹಿಸುವ, ಸುವರ್ಣಮಯವಾದ ಸಂಪಿಗೆ ಹೂವುಗಳ ಮಾಲಿಕೆಯಿಂದ ಅಲಂಕರಿಸಿಕೊಂಡಿರುವ, ಎತ್ತರವಾಗಿ ತುಂಬಿಕೊಂಡು ದುಂಡಗಿರುವ ಸ್ತನಗಳಿಂದ ಮನೋಹರವಾದ ಅವಯವಗಳುಳ್ಳ, ಅಖಿಲವಾಗ್ರೂಪಳಾದ ಸರಸ್ವತೀದೇವಿಯನ್ನು ಒಳ್ಳೆಯಮಾತುಗಳ ಸಂಪತ್ತಿಗೋಸ್ಕರ, ಉತ್ತಮವಾದ ಭಾಷಾಶೈಲಿಯನ್ನು ಮತ್ತು ಜ್ಞಾನವನ್ನು ಪಡೆಯುವುದಕ್ಕಾಗಿ ಏಕಾಗ್ರಮನಸ್ಸಿನಿಂದ ಭಕ್ತಿಯೊಡನೆ ನಮಸ್ಕರಿಸುತ್ತೇನೆ.

ಓಂ ಪ್ರಣೋ ದೇವೀತ್ಯಸ್ಯ ಮಂತ್ರಸ್ಯ, ಭರದ್ವಾಜಋಷಿಃ ।
ಗಾಯತ್ರೀಛಂದಃ । ಶ್ರೀ ಸರಸ್ವತೀ ದೇವತಾ । ಪ್ರಣವೇನ
ಬೀಜ ಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ ॥
ಮಂತ್ರೇಣ ನ್ಯಾಸಃ ॥

ಓಂ ಪ್ರಣೋದೇವೀ ಎಂದು ಪ್ರಾರಂಭವಾಗಿರುವ ಮಂತ್ರಕ್ಕೆ ಭರದ್ವಾಜನು ಋಷಿಯು. ಛಂದಸ್ಸು ಗಾಯತ್ರೀಲಕ್ಷಣವುಳ್ಳದು. ಉಪಾಸ್ಯದೇವತೆಯು ಸರಸ್ವತೀ ದೇವಿಯು. ಪ್ರಣವವನ್ನೇ ಇದರ ಬೀಜ ಶಕ್ತಿ ಕೀಲಕಗಳನ್ನಾಗಿ ಉಪಯೋಗಿಸಬೇಕು. ಇಷ್ಟಾರ್ಥವನ್ನು ಪಡೆಯಲು ಇದನ್ನು ಉಪಯೋಗಿಸಬಹುದು. ಈ ಮಂತ್ರದಿಂದಲೇ ಕರನ್ಯಾಸ ಅಂಗನ್ಯಾಸಗಳನ್ನು ಮಾಡಬೇಕು

ಯಾ ವೇದಾಂತಾರ್ಥತತ್ತ್ವೈಕಸ್ವರೂಪಾ ಪರಮಾರ್ಥತಃ ।
ನಾಮರೂಪಾತ್ಮನಾ ವ್ಯಕ್ತಾ ಸಾ ಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವು—ಯಾವ ಸರಸ್ವತೀದೇವಿಯು ನಾಲ್ಕು ವೇದಗಳ ಕಡೆಯಭಾಗವಾದ ಉಪನಿಷತ್ತುಗಳಲ್ಲಿ ವಿವರಿಸಿರುವ ಪಾರಮಾರ್ಥಿಕವಾದ ಸತ್ಯದ ದೃಷ್ಟಿಯಿಂದ ಅವ್ಯಕ್ತವಾಗಿರುವ ಪರತತ್ತ್ವವೇ ಮುಖ್ಯಸ್ವರೂಪವಾಗಿ ಉಳ್ಳವಳೋ, ಯಾರು ಈ ಪ್ರಪಂಚದಲ್ಲಿ ಕಾಣಬರುತ್ತಿರುವ ನಾಮ-ಹೆಸರು, ಮತ್ತು ರೂಪ-ಆಕಾರ, ಇವುಗಳ ರೂಪಗಳಲ್ಲಿ ವ್ಯಕ್ತವಾಗಿ ಮನಸ್ಸು ಮತ್ತು ಇಂದ್ರಿಯಗಳಿಗೆ ಗೋಚರಳಾಗಿದಾಳೋ, ಅಂಥ ಸರಸ್ವತೀದೇವಿಯು ನನ್ನನ್ನು ಕಾಪಾಡಲಿ.

ಓಂ ಪ್ರಣೋ ದೇವೀ ಸರಸ್ವತೀ ವಾಜೇಭಿರ್ವಾಜಿನೀವತೀ ।
ಧೀನಾಮವಿತ್ರ್ಯವತು ॥೧॥

ಧ್ಯಾನಮಂತ್ರದ ಅರ್ಥವು— ಓಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾಗಿರುವ, ದೇವೀ=ಸ್ವಪ್ರಕಾಶಸ್ವರೂಪಳಾಗಿರುವ ಸರಸ್ವತಿಯು, ವಾಜೇಭಿಃ=ಕರ್ಮಗಳಲ್ಲಿ ಸಮರ್ಪಿಸಿದ ಹವಿಸ್ಸುಗಳಿಂದ, ಸಂತುಷ್ಟಳಾಗಿ, ವಾಜಿನೀವತೀ=ಕರ್ಮವನ್ನು ಆಚರಿಸಿದವರಿಗೂ ಉಪಾಸಕರಿಗೂ ಅನುಗ್ರಹಿಸಬೇಕಾಗಿರುವ ಇಷ್ಟಾರ್ಥಗಳಿಂದ ಕೂಡಿದವಳಾಗಿ, ನಮ್ಮ ಬುದ್ಧಿಗಳನ್ನು ಒಳ್ಳೆಯ ವಿಷಯಗಳಲ್ಲಿಯೇ ಪ್ರವರ್ತಿಸುವಂತೆ ಮಾಡುವುದರಿಂದ ಕಾಪಾಡುವವಳಾಗಿ ನಮ್ಮನ್ನು ರಕ್ಷಿಸಲಿ. "ಚಿದಾನಂದಮಯೀಂ ವಾಣೀಂ ವಂದೇ ಚಂದ್ರಕಲಾಧರಾಂ । ನೈರ್ಮಲ್ಯತಾರತಮ್ಯೇನ ಬಿಂಬಿತಾಂ ಚಿತ್ತಭಿತ್ತಿಷು" ಎಂದು ಸರಸ್ವತಿಯ ರೂಪವನ್ನು ವರ್ಣಿಸಿದೆ.

ಆನೋ ದಿವ ಇತಿ ಮಂತ್ರಸ್ಯ ಅತ್ರಿ ಋಷಿಃ । ತ್ರಿಷ್ಟುಪ್‌ಛಂದಃ ।
ಸರಸ್ವತೀ ದೇವತಾ । ಹ್ರೀಮಿತಿ ಬೀಜಶಕ್ತಿಕೀಲಕಂ ।
ಇಷ್ಟಾರ್ಥೇ ವಿನಿಯೋಗಃ ॥ ಮಂತ್ರೇಣ ನ್ಯಾಸಃ ॥

ಆನೋ ದಿವಃ ಎಂದು ಪ್ರಾರಂಭವಾಗಿರುವ ಮಂತ್ರಕ್ಕೆ ಅತ್ರಿಯೇ ಋಷಿಯು. ಈ ಮಂತ್ರದ ಛಂದಸ್ಸು ತ್ರಿಷ್ಟುಪ್‌ಛಂದಸ್ಸಿನ ಲಕ್ಷಣ ಉಳ್ಳದು. ಎಂದರೆ ಹನ್ನೊಂದು ಅಕ್ಷರಗಳುಳ್ಳ ನಾಲ್ಕು ಪಾದಗಳಿಂದ ಕೂಡಿದೆ. ಉಪಾಸ್ಯ ದೇವತೆಯು ಸರಸ್ವತಿಯು. ಹ್ರೀಂಕಾರವೆಂಬ ಮಂತ್ರವರ್ಣವೇ ಇದರ ಬೀಜ ಶಕ್ತಿ ಕೀಲಕಗಳೆಂದು ಭಾವಿಸಿ ಧ್ಯಾನಿಸಬೇಕು. ಇಷ್ಟಾರ್ಥವನ್ನು ಪಡೆಯಲು ಇದನ್ನು ಉಪಯೋಗಿಸಬಹುದು. ಈ ಮಂತ್ರದ ಭಾಗಗಳಿಂದಲೇ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಂಡು ಜಪಿಸಬೇಕು.

ಯಾ ಸಾಂಗೋಪಾಂಗವೇದೇಷು ಚತುರ್ಷ್ವೇಕೈವ ಗೀಯತೇ ।
ಅದ್ವೈತಾ ಬ್ರಹ್ಮಣಶ್ಶಕ್ತಿಸ್ಸಾ ಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರಾರ್ಥವು— ಯಾವ ಸರಸ್ವತೀದೇವಿಯು ಶಿಕ್ಷಾ ವ್ಯಾಕರಣ ಛಂದಸ್ಸು ನಿರುಕ್ತ ಜ್ಯೋತಿಷ ಕಲ್ಪ ಎಂಬ ಆರು ಅಂಗಗಳಿಂದಲೂ ಪುರಾಣ ನ್ಯಾಯ ಮೀಮಾಂಸಾ ಧರ್ಮಶಾಸ್ತ್ರಗಳೆಂಬ ನಾಲ್ಕು ಉಪಾಂಗಗಳಿಂದಲೂ ಕೂಡಿರುವ ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕು ವೇದಗಳಲ್ಲೂ ಮುಖ್ಯವಾಗಿ ಪ್ರಾಧಾನ್ಯದಿಂದ ನಿರೂಪಿಸಲ್ಪಟ್ಟಿರುತ್ತಾಳೋ ಅಂಥಾ ಒಬ್ಬಳೇ ಆದ ಪರಬ್ರಹ್ಮನ ಶಕ್ತಿಸ್ವರೂಪಳಾದ ಆ ತಾಯಿಯು ನನ್ನನ್ನು ರಕ್ಷಿಸಲಿ.

ಹ್ರೀಂ, ಆನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾ ಗಂತು ಯಜ್ಞಂ । ಹವಂ ದೇವೀ ಜುಜುಷಾಣಾ ಘೃತಾಚೀ ಶಗ್ಮಾನ್ನೋ ವಾಚಮುಶತೀ ಶೃಣೋತು ॥೨॥

ಹ್ರೀಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾದ ಈ ಸರಸ್ವತೀದೇವಿಯು ಪೂಜಿಸಿ ಧ್ಯಾನಿಸಲ್ಪಟ್ಟವಳಾಗಿ ಪ್ರಕಾಶಮಯವಾದ ಅವಳ ಲೋಕದಿಂದ ನಮ್ಮ ಈ ಯಜ್ಞವನ್ನು ಕುರಿತು ಬರುವವಳಾಗಲಿ. ಅವಳ ಆ ಲೋಕವು ಆಕಾಶದಂತೆ ದೊಡ್ಡದೂ ಕಾರ್ಮೋಡದಂತೆ ಪೂರ್ಣವೂ ಆದುದು. ಉಪಾಸಕರ ಕೋರಿಕೆಗಳನ್ನು ಸಲ್ಲಿಸುವ ಸಾಮರ್ಥ್ಯವನ್ನು ಇದರಿಂದ ಸೂಚಿಸಿದೆ. ನಮ್ಮ ಈ ಆಹ್ವಾನವನ್ನೂ ಸ್ತೋತ್ರವಾಕ್ಯಗಳನ್ನೂ ಅಂಗೀಕರಿಸಿದವಳಾಗಿ ನಮ್ಮ ಕೋರಿಕೆಗಳನ್ನು ಸಲ್ಲಿಸುವವಳಾಗಿ ನಮಗೆ ಸುಖವನ್ನು ಅನುಗ್ರಹಿಸುವವಳಾಗಿ, ನಮ್ಮ ಪ್ರಾರ್ಥನೆಯ ವಾಕ್ಯಗಳನ್ನು ಅಕ್ಕರೆಯಿಂದ ಲಾಲಿಸಲಿ.

ಪಾವಕಾನ ಇತಿ ಮಂತ್ರಸ್ಯ ಮಧುಚ್ಛಂದಾ ಋಷಿಃ । ಗಾಯತ್ರೀ ಛಂದಃ । ಸರಸ್ವತೀ ದೇವತಾ । ಶ್ರೀಮಿತಿ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಪಾವಕಾನಃ ಎಂದು ಪ್ರಾರಂಭವಾಗಿರುವ ಮಂತ್ರಕ್ಕೆ ಮಧುಚ್ಛಂದಸನೇ ಋಷಿಯು. ಇದರ ಛಂದಸ್ಸು ಗಾಯತ್ರೀಲಕ್ಷಣವುಳ್ಳದು. ಉಪಾಸ್ಯದೇವತೆಯು ಸರಸ್ವತಿಯು. ಶ್ರೀಂ ಎಂಬ ಮಂತ್ರವರ್ಣದಿಂದ ಇದರ ಬೀಜಶಕ್ತಿ ಕೀಲಕಗಳನ್ನಾಗಿ ಭಾವಿಸಬೇಕು. ಇಷ್ಟಾರ್ಥವನ್ನು ಪಡೆಯಲು ಈ ಮಂತ್ರವನ್ನು ಉಪಯೋಗಿಸಬಹುದು. ಈ ಮಂತ್ರದ ಭಾಗಗಳಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಳ್ಳಬೇಕು.

**ಯಾ ವರ್ಣಪದವಾಕ್ಯಾರ್ಥಸ್ವರೂಪೇಣೈವ ವರ್ತತೇ ।
ಅನಾದಿನಿಧನಾನಂತಾ ಸಾ ಮಾಂ ಪಾತು ಸರಸ್ವತೀ ॥**

ಧ್ಯಾನಶ್ಲೋಕ ಮಂತ್ರಾರ್ಥವು—ಯಾವ ಸರಸ್ವತೀದೇವಿಯು ವರ್ಣಗಳು ಎಂದರೆ ಅಕಾರಾದಿಯಾಗಿ ಹಕಾರಾಂತವಾದ ಅಕ್ಷರಗಳು, ಅವುಗಳಿಂದ ಏರ್ಪಡುವ ಪದಗಳು, ಮತ್ತು ಅವುಗಳಿಂದ ಉಂಟಾಗುವ ವಾಕ್ಯಗಳು, ಇವುಗಳ ಅರ್ಥಗಳು, ಎಂಬ ಈ ಸ್ವರೂಪದಿಂದಲೇ ಇರುತ್ತಾಳೋ, ಯಾರು ಆದ್ಯಂತಗಳಿಲ್ಲದವಳೋ ಎಂದರೆ ಉತ್ಪತ್ತಿ ನಾಶಗಳಿಲ್ಲದವಳೋ ಯಾರು ಅಪರಿಚ್ಛಿನ್ನಳೋ ಎಂದರೆ ಯಾವ ಅಳತೆಗೂ ಒಳಪಡದವಳೋ ಅಂಥಾ ಸರಸ್ವತಿಯು ನನ್ನನ್ನು ಕಾಪಾಡಲಿ.

ಶ್ರೀಂ, ಪಾವಕಾನಃ ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾ ವಸುಃ ॥೩॥

ಧ್ಯಾನಮಂತ್ರಾರ್ಥವು— ಶ್ರೀಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾದ ಯಾವ ಸರಸ್ವತಿಯು ನಮ್ಮ ಅಜ್ಞಾನವೆಂಬ ದೋಷಗಳನ್ನು ಹೋಗಲಾಡಿಸಿ ನಮ್ಮನ್ನು ಶುದ್ಧರನ್ನಾಗಿ ಮಾಡಿ ಬೆಳಗಿಸುತ್ತಾಳೋ ಅಂಥಾ ದೇವಿಯು, ನಾವು ಪೂಜಾ ಮುಂತಾದ ಕರ್ಮಗಳಲ್ಲಿ ಸಮರ್ಪಿಸಿದ ಹವಿಸ್ಸುಗಳಿಂದ ಎಂದರೆ ಹಾಲು ಹಣ್ಣು ಅನ್ನ ಇವುಗಳಿಂದ ಸಂತುಷ್ಟಳಾಗಿ ನಮಗೆ ಅನುಗ್ರಹಿಸಬೇಕಾದ ಪುರುಷಾರ್ಥಗಳು ಮತ್ತು ಅವಕ್ಕೆ ಅನುಕೂಲವಾದ ವ್ಯಾಪಾರಗಳುಳ್ಳವಳಾಗಿ ನಮ್ಮ ಈ ಪೂಜಾ ಉಪಾಸನೆಗಳನ್ನು ಅಕ್ಕರೆಯಿಂದ ಅಂಗೀಕರಿಸಲಿ. ಮತ್ತು ನಮ್ಮ ಈ ಕಾರ್ಯನಿರ್ವಾಹಕ್ಕೆ ನೆರವಾಗಲಿ. ಈ ಸರಸ್ವತೀದೇವಿಗೆ ಎರಡುಬಗೆಯ ರೂಪವಿಶೇಷಗಳಿವೆ. ಒಂದು ದೇವತಾರೂಪವು. ಇನ್ನೊಂದು ನದಿಯ ರೂಪವು. ಮೊದಲನೆಯ ರೂಪವನ್ನು ಈ ಮಂತ್ರದಲ್ಲೂ ಇದರ ಮುಂದಿನ ಮಂತ್ರದಲ್ಲೂ ವರ್ಣಿಸಿದೆ.

ಚೋದಯಿತ್ರೀತಿ ಮಂತ್ರಸ್ಯ ಮಧುಚ್ಛಂದಾ ಋಷಿಃ ।
ಗಾಯತ್ರೀಛಂದಃ । ಸರಸ್ವತೀ ದೇವತಾ । ಬ್ಲೂಮಿತಿ
ಬೀಜಶಕ್ತಿಕೀಲಕಂ । ಮಂತ್ರೇಣ ನ್ಯಾಸಃ ॥

ಚೋದಯಿತ್ರೀ ಎಂದು ಪ್ರಾರಂಭವಾಗುವ ಮಂತ್ರಕ್ಕೆ ಮಧುಚ್ಛಂದಸನೇ ಋಷಿಯು. ಇದರ ಛಂದಸ್ಸು ಗಾಯತ್ರೀಲಕ್ಷಣವುಳ್ಳದು. ಉಪಾಸ್ಯದೇವತೆಯು ಸರಸ್ವತೀದೇವಿಯು. ಬ್ಲೂಂ ಎಂಬ ಮಂತ್ರವರ್ಣದಿಂದ ಬೀಜಶಕ್ತಿಕೀಲಕಗಳನ್ನು ಭಾವಿಸಬೇಕು. ಈ ಮಂತ್ರದ ಭಾಗಗಳಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಳ್ಳಬೇಕು.

ಅಧ್ಯಾತ್ಮಮಧಿದೈವಂ ಚ ದೇವಾನಾಂ ಸಮ್ಯಗೀಶ್ವರೀ ।
ಪ್ರತ್ಯಗಾಸ್ತೇ ವದಂತೀ ಯಾ ಸಾ ಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಕ್ಕೆ ಅರ್ಥವು ಹೀಗಿದೆ— ಯಾರು ದೇವತೆಗಳಿಗೂ ಅವರ ಆತ್ಮಸ್ವರೂಪ ವಿಷಯದಲ್ಲೂ ಮತ್ತು ಅವರ ದೇವತ್ವದ ವಿಷಯದಲ್ಲೂ ನಿಜತತ್ತ್ವವನ್ನು ತಿಳಿಸುವವಳಾಗಿಯೂ, ಎಲ್ಲರಿಗೂ ಪ್ರತ್ಯಗಾತ್ಮಚೈತನ್ಯಸ್ವರೂಪಳಾಗಿಯೂ ಇದಾಳೆಯೋ ಅಂಥಾ ಸರಸ್ವತೀದೇವಿಯು ನನ್ನನ್ನು ಕಾಪಾಡಲಿ.

ಬ್ಲೂಂ, ಚೋದಯಿತ್ರೀ ಸೂನೃತಾನಾಂ ಚೇತಂತೀ ಸು
ಮತೀನಾಂ । ಯಜ್ಞಂ ದಧೇ ಸರಸ್ವತೀ ॥೪॥

ಧ್ಯಾನಮಂತ್ರದ ಅರ್ಥವು ಹೀಗಿದೆ—ಬ್ಲೂಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾದ ಯಾವ ಸರಸ್ವತಿಯು ನಮ್ಮಲ್ಲಿ ಪ್ರಿಯವೂ ಹಿತವೂ ಆಗಿರುವ ಮಾತುಗಳನ್ನು ಪ್ರೇರಿಸಿ ಹೊರಹೊಮ್ಮಿಸುತ್ತಾಳೋ, ಒಳ್ಳೆಯದಾದ ಧಾರ್ಮಿಕಬುದ್ಧಿಗಳನ್ನು ಸ್ಫುರಿಸುವಂತೆ ಮಾಡುತ್ತಾಳೋ, ಅಂಥಾ ಸರಸ್ವತೀದೇವಿಯು ನಾವು ಆಚರಿಸುತ್ತಿರುವ ಮತ್ತು ಆಚರಿಸಬೇಕಾದ ಅರ್ಚನೆ ಜಪ ಧ್ಯಾನ ಮುಂತಾದ ಧಾರ್ಮಿಕವಾದ ಕರ್ಮಗಳು ನಮಗೆ ಸ್ಫುರಿಸುವಂತೆ ಮಾಡಿ ಅನುಗ್ರಹಿಸುತ್ತಾಳೆ. ಹೀಗೆ ಸರಸ್ವತಿಯ ದೇವತಾರೂಪವನ್ನು ವಿವರಿಸಿ ಮುಂದಿನ ಮಂತ್ರದಲ್ಲಿ ಅವಳ ನದೀರೂಪವನ್ನೂ ವಿವರಿಸಿದೆ.

ಮಹೋ ಅರ್ಣೇತಿ ಮಂತ್ರಸ್ಯ, ಮಧುಚ್ಛಂದಾ ಋಷಿಃ ॥
ಗಾಯತ್ರೀಛಂದಃ । ಸರಸ್ವತೀ ದೇವತಾ । ಸೌರಿತಿ ಬೀಜ
ಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ ।
ಮಂತ್ರೇಣ ನ್ಯಾಸಃ ॥

ಮಹೋಅರ್ಣ ಎಂದು ಪ್ರಾರಂಭವಾಗುವ ಋಙ್ಮಂತ್ರಕ್ಕೆ ಮಧುಚ್ಛಂದಸ್ ಎಂಬಾತನೇ ಋಷಿಯು. ಈ ಮಂತ್ರದ ಛಂದಸ್ಸು ಗಾಯತ್ರೀ ಲಕ್ಷಣವುಳ್ಳದು. ಉಪಾಸ್ಯಳಾದ ದೇವತೆಯು ಸರಸ್ವತೀದೇವಿಯು. ಸೌಃ ಎಂಬ ಮಂತ್ರವರ್ಣದಿಂದ ಬೀಜಶಕ್ತಿಕೀಲಕಗಳನ್ನು ಭಾವಿಸಿ ಧ್ಯಾನಿಸಬೇಕು. ನಮಗೆ ಬೇಕಾದ ಕೋರಿಕೆಗಳನ್ನು ನೆರವೇರಿಸಿಕೊಳ್ಳುವುದರಲ್ಲಿ ಈ ಮಂತ್ರವನ್ನು ಉಪಯೋಗಿಸಿಕೊಳ್ಳಬಹುದು. ಈ ಮಂತ್ರದ ಭಾಗಗಳಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಳ್ಳಬೇಕು.

ಅಂತರ್ಯಾಮ್ಯಾತ್ಮನಾ ವಿಶ್ವಂ ತ್ರೈಲೋಕ್ಯಂ ಯಾ ನಿಯಚ್ಛತಿ ।
ರುದ್ರಾದಿತ್ಯಾದಿರೂಪಸ್ಥಾ ಸಾಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವನ್ನು ಹೀಗೆ ವಿವರಿಸಿದೆ— ಯಾವ ದೇವಿಯು ಸ್ವರ್ಗಮರ್ತ್ಯಪಾತಾಳವೆಂಬ ಮೂರುಲೋಕಗಳನ್ನೂ ಅಲ್ಲಿರುವ ಜೀವಾತ್ಮರಿಗೆ ಅಂತರ್ಯಾಮಿಯ ಸ್ವರೂಪದಿಂದ ಇರುತ್ತಾ ಅವರು ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗದಲ್ಲಿರುವಂತೆ ನಿಯಮಿಸುತ್ತಾಳೋ ಮತ್ತು ಯಾರು ರುದ್ರ ಆದಿತ್ಯ ಮುಂತಾದ ದೇವತೆಗಳ ಮುಖಂಡರ ವಿಶೇಷರೂಪದಲ್ಲೂ ತೋರುತ್ತಾಳೋ ಅಂಥಾ ಸರಸ್ವತೀದೇವಿಯು ನನ್ನನ್ನು ಕಾಪಾಡಲಿ.

ಸೌಃ, ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ ।
ಧಿಯೋ ವಿಶ್ವಾ ವಿರಾಜತಿ ॥೫॥

ಧ್ಯಾನಮಂತ್ರಾರ್ಥವನ್ನು ಹೀಗೆ ವಿವರಿಸಲಾಗಿದೆ— ಸೌಃ ಎಂಬ ವರ್ಣಮಂತ್ರ ದಿಂದ ಧ್ಯಾನಿಸಬೇಕಾದ ಈ ಸರಸ್ವತಿಯು ಹೆಚ್ಚಾದ ನೀರನ್ನೂ ಪ್ರವಾಹರೂಪದಲ್ಲಿ ಹರಿಯುವಂತೆ ಮಾಡಿ ತನ್ನ ನದೀರೂಪವನ್ನು ತಿಳಿಸುತ್ತಾಳೆ. ಹಾಗೆಯೇ ತನ್ನ ದೇವತಾರೂಪದಲ್ಲಿ ಎಲ್ಲ ಜನರ ಬುದ್ಧಿಗಳನ್ನೂ ಅತಿಶಯವಾಗಿ ಉಜ್ವಲಿಸುವಂತೆ ಮಾಡುತ್ತಾಳೆ.

ಚತ್ವಾರಿ ವಾಗಿತಿ ಮಂತ್ರಸ್ಯ ಉಚಥ್ಯಪುತ್ರಋಷಿಃ । ತ್ರಿಷ್ಟುಪ್ ಛಂದಃ ।
ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿ ಕೀಲಕಂ । ಮಂತ್ರೇಣ ನ್ಯಾಸಃ ॥

ಚತ್ವಾರಿ ವಾಕ್ ಎಂದು ಪ್ರಾರಂಭವಾಗುವ ಋಙ್ಮಂತ್ರಕ್ಕೆ ಉಚಥ್ಯಪುತ್ರನೇ (ಉಚಥ್ಯ ಋಷಿಯ ಮಗ ದೀರ್ಘತಮಸ್) ಋಷಿಯು. ಇದರ ಛಂದಸ್ಸು ತ್ರಿಷ್ಟುಪ್ ಎಂಬ ವೃತ್ತದ ಲಕ್ಷಣವುಳ್ಳದು. ಈ ಮಂತ್ರದಿಂದ ಉಪಾಸ್ಯವಾದ ದೇವತೆಯು ಸರಸ್ವತೀದೇವಿಯು. ಐಂ ಎಂಬ ಮಂತ್ರವರ್ಣದಿಂದ ಇದರ ಬೀಜ ಶಕ್ತಿಕೀಲಕಗಳನ್ನು ಭಾವಿಸಿ ಧ್ಯಾನಿಸಬೇಕು. ಈ ಮಂತ್ರದ ಭಾಗಗಳಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಳ್ಳಬೇಕು.

ಯಾ ಪ್ರತ್ಯಗ್ದೃಷ್ಟಿಭಿರ್ಜೀವೈರ್ವ್ಯಜ್ಯಮಾನಾನುಭೂಯತೇ ।
ವ್ಯಾಪಿನೀ ಜ್ಞಪ್ತಿರೂಪೈಕಾ ಸಾಮಾಂಪಾತು ಸರಸ್ವತೀ ॥

ಧ್ಯಾನಶ್ಲೋಕ ಮಂತ್ರಾರ್ಥವನ್ನು ಹೀಗೆ ವಿವರಿಸಿದೆ— ಯಾವ ಸರಸ್ವತೀ ದೇವಿಯು ಪ್ರತ್ಯಗಾತ್ಮನ ಕಡೆಗೆ ಹಿಂತಿರುಗಿರುವ ದೃಷ್ಟಿಯುಳ್ಳ ಪ್ರತ್ಯಾಹಾರವೆಂಬ ಯೋಗಾಂಗದಲ್ಲಿ ಸಿದ್ಧರಾದ ಜೀವರಿಂದ ಲಕ್ಷಣಾ ಅಥವಾ ವ್ಯಂಜನಾವೃತ್ತಿಯ ಮೂಲಕ ವಾಗಿ ಅಪರೋಕ್ಷಾನುಭವದ ರೂಪದಲ್ಲಿ ಸಾಕ್ಷಾತ್ಕರಿಸಿಕೊಳ್ಳಲ್ಪಡುತ್ತಾಳೋ, ಯಾರು ಎಲ್ಲೆಡೆಗಳಲ್ಲೂ ವ್ಯಾಪಿಸಿರುತ್ತಾಳೋ ಮತ್ತು ಯಾರ ಸ್ವರೂಪವು ಶುದ್ಧಜ್ಞಾನವೇ ಆಗಿದೆಯೋ ಅಂಥ ಸರಸ್ವತೀದೇವಿಯು ನನ್ನನ್ನು ಕಾಪಾಡಲಿ.

ಐಂ, ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ
ಯೇ ಮನೀಷಿಣಃ । ಗುಹಾತ್ರೀಣಿ ನಿಹಿತಾ ನೇಂಗಯಂತಿ
ತುರೀಯಂ ವಾಚೋ ಮನುಷ್ಯಾ ವದಂತಿ ॥೬॥

ಧ್ಯಾನಮಂತ್ರಾರ್ಥವನ್ನು ಹೀಗೆ ವ್ಯಾಖ್ಯಾನಮಾಡಿದೆ— ಐಂ ಎಂಬ ವರ್ಣ ಮಂತ್ರದಿಂದ ಉಪಾಸ್ಯಳಾದ ಈ ಸರಸ್ವತೀದೇವಿಯು ಎಲ್ಲಬಗೆಯ ವಾಙ್ಮಯರೂಪಳು. ಈ ವಾಙ್ಮಯದಲ್ಲಿರುವ ಪದಗಳು ನಾಲ್ಕುಬಗೆಯವುಗಳಾಗಿವೆ ಎಂದು ನಾದಬ್ರಹ್ಮದ ಮತ್ತು ಶಬ್ದಬ್ರಹ್ಮದ ಸ್ವರೂಪವನ್ನು ತಿಳಿದಿರುವ ಜ್ಞಾನಿಗಳು ವಿವರಿಸುತ್ತಾರೆ. ಈ

ನಾದ ಮತ್ತು ಶಬ್ದಸ್ವರೂಪಗಳಲ್ಲಿ ಮೂರು ಬಗೆಯವು ಬುದ್ಧಿಸೂಕ್ಷ್ಮದ ಅಂತರಾಳದಲ್ಲಿ ಅವ್ಯಕ್ತರೂಪದಲ್ಲಿ ಇಡಲ್ಪಟ್ಟಿವೆ ಎಂದರೆ ವ್ಯಕ್ತರೂಪದಲ್ಲಿ ಶ್ರವಣೇಂದ್ರಿಯಕ್ಕೆ ಗೋಚರವಾಗದೆ, ಯೋಗಸಿದ್ಧಿಯನ್ನು ಪಡೆದಿರುವ ಮನಸ್ಸಿಗೆ ಮಾತ್ರ ಗೋಚರ ವಾಗುವಂಥವುಗಳಾಗಿ ಇವೆ. ಅವು ವ್ಯವಹಾರದಲ್ಲಿ ಉಪಯೋಗವನ್ನು ಪಡೆಯುತ್ತಾ ಗೋಚರವಾಗದೆ ಇವೆ. ಆದುದರಿಂದ ಈ ವಾಕ್ತತ್ತ್ವದ ನಾಲ್ಕನೆಯ ಬಗೆಯ ಶಬ್ದ ರೂಪವನ್ನು ಮಾತ್ರ ಜನರು ತಮ್ಮ ದಿನಗಟ್ಟಲೆಯ ವ್ಯವಹಾರದಲ್ಲಿ ಉಪಯೋಗಿಸು ತ್ತಿದಾರೆ

ಈ ನಾಲ್ಕು ಬಗೆಗಳು ಪ್ರಣವದಿಂದ ಕೂಡಿದ ವ್ಯಾಹೃತಿಸ್ವರೂಪಗಳಾಗಿವೆ ಎಂದು ವೈದಿಕರು ಹೇಳುತ್ತಾರೆ. ನಾಮ, ಆಖ್ಯಾತ, ಉಪಸರ್ಗ, ನಿಪಾತರೂಪಗಳಾ ಗಿವೆ ಎಂದು ವ್ಯಾಕರಣಶಾಸ್ತ್ರಜ್ಞರು ಹೇಳುತ್ತಾರೆ. ಮಂತ್ರ, ಕಲ್ಪ, ಬ್ರಾಹ್ಮಣ, ಲೌಕಿಕೀ ಎಂದು ಯಾಜ್ಞಿಕರು ಹೇಳುತ್ತಾರೆ. ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ರೂಪಗಳನ್ನು ತಾಳುತ್ತವೆ ಎಂದು ಯೋಗಿಗಳು ವಿವರಿಸುತ್ತಾರೆ. ಯೋಗಿಗಳ ಈ ವಿವರಣೆಯನ್ನು ಈ ಪದ್ಯವು ಹೆಚ್ಚು ವಿಶದಪಡಿಸುತ್ತದೆ.

“ ಮೂಲಾಧಾರಾತ್ಪ್ರಥಮಮುದಿತೋ ಯಸ್ತುತಾರಃ ಪರಾಖ್ಯಃ
ಪಶ್ಚಾತ್ಪಶ್ಯಂತ್ಯಥ ಹೃದಯಗೋ ಬುದ್ಧಿಯುಙ್ಮಧ್ಯಮಾಖ್ಯಃ ।
ವಕ್ತ್ರೇ ವೈಖರ್ಯಥ ರುರುದಿಷೋರಸ್ಯ ಜಂತೋಸ್ಸುಷುಮ್ನಾ
ಬದ್ಧಸ್ತಸ್ಮಾದ್ಭವತಿ ಪವನಪ್ರೇರಿತೋ ವರ್ಣಸಂಘಃ ॥ ”

ಎಂದರೆ ಜೀವನ ಪ್ರಯತ್ನವಿಶೇಷವು ಮೊದಲು ನಾಭಿಯ ಪ್ರದೇಶದಲ್ಲಿ ಉಂಟಾದಾಗ ಪರಾ ಎಂತಲೂ, ಹೃದಯದೇಶವನ್ನು ಏರಿದಾಗ ಪಶ್ಯಂತೀ ಎಂದೂ, ಬುದ್ಧಿಯೊಡನೆ ಕೂಡಿದಮೇಲೆ ಮಧ್ಯಮಾ ಎಂಬದಾಗಿಯೂ, ಅಳುವುದು ಮೊದಲಾದ ಕ್ರಿಯೆಗಳಿಂದ ವ್ಯಕ್ತವಾಗಿ ವೈಖರೀ ಎಂದೂ, ವ್ಯವಹಾರವನ್ನು ಪಡೆಯುತ್ತದೆ. ಅದೇ ಕಡೆಗೆ ಕತ್ತಿನಿಂದ ತುಟಿಯವರಿಗೆ ಇರುವ ಉಚ್ಚಾರಣಸ್ಥಾನಗಳಲ್ಲಿ ಸೇರಿ ವರ್ಣರೂಪ ವಾಗಿ ಮಾರ್ಪಡುತ್ತವೆ. ಇದೇ ಭಾಷೆ ಅಥವಾ ಮಾತು ಎನ್ನಿಸಿಕೊಳ್ಳುತ್ತಿದೆ. ಈ ಅಂಶವನ್ನೇ—

“ ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಂ ।
ತಿರ್ಯಂಚೋಽಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಂ ॥ ”

ಎಂಬ ಶ್ಲೋಕದಲ್ಲಿ ವಾಕ್ತತ್ತ್ವವು ನಾನಾ ಭಾಷೆಗಳ ರೂಪವಾಗಿ ಮಾರ್ಪಟ್ಟು ವ್ಯವಹಾರಕ್ಕೆ ಒದಗುತ್ತದೆ ಎಂದು ವಿವರಿಸಿದೆ.

ಯದ್ವಾಗ್ವದಂತೀತಿ ಮಂತ್ರಸ್ಯ, ಭಾರ್ಗವ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಕ್ಲೀಮಿತಿ ಬೀಜಶಕ್ತಿಕೀಲಕಂ । ಮಂತ್ರೇಣನ್ಯಾಸಃ ॥

ಯದ್ವಾಗ್ವದಂತೀ ಎಂದು ಪ್ರಾರಂಭವಾಗುವ ಮಂತ್ರಕ್ಕೆ ಭಾರ್ಗವನೇ ಋಷಿಯು. ಛಂದಸ್ಸು ತ್ರಿಷ್ಟುಪ್ ಲಕ್ಷಣವುಳ್ಳದು. ಸರಸ್ವತಿಯೇ ಉಪಾಸ್ಯಳಾದ ದೇವತೆಯು. ಕ್ಲೀಂ ಎಂಬ ಮಂತ್ರವರ್ಣದಿಂದ ಬೀಜಶಕ್ತಿಕೀಲಕಗಳನ್ನು ಭಾವಿಸಬೇಕು. ಈ ಮಂತ್ರಭಾಗಗಳಿಂದಲೇ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಂಡು ಜಪಿಸಬೇಕು.

ನಾಮಜಾತ್ಯಾದಿಭಿರ್ಭೇದೈರಷ್ಟಧಾ ಯಾ ವಿಕಲ್ಪಿತಾ ।
ನಿರ್ವಿಕಲ್ಪಾತ್ಮನಾವ್ಯಕ್ತಾ ಸಾಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವು ಹೀಗಿದೆ— ಯಾವ ಸರಸ್ವತೀದೇವಿಯು ಪರಾ, ಪಶ್ಯಂತೀ, ಮಧ್ಯಮಾ, ವೈಖರೀ, ನಾಮ, ಜಾತಿ, ಗುಣ, ಕ್ರಿಯಾ ಎಂಬ ಎಂಟು ರೂಪಗಳುಳ್ಳ ವಾಕ್ತತ್ತ್ವ, ಭಾಷಾರೂಪಗಳಲ್ಲಿ ತೋರುತ್ತಾಳೋ, ಪರತತ್ತ್ವ ರೂಪದಲ್ಲಿ ಅವ್ಯಕ್ತಳೂ ನಿರ್ವಿಕಲ್ಪಸ್ವರೂಪಳೂ ಆಗಿದಾಳೋ ಅಂಥ ದೇವಿಯು ನನ್ನನ್ನು ಕಾಪಾಡಲಿ.

ಕ್ಲೀಂ, ಯದ್ವಾಗ್ವದಂತ್ಯವಿಚೇತನಾನಿ ರಾಷ್ಟ್ರೀ ದೇವಾನಾಂ
ನಿಷಸಾದ ಮಂದ್ರಾ । ಚತಸ್ರ ಊರ್ಜಂ ದುದುಹೇ ಪಯಾಂಸಿ
ಕ್ವಸ್ವಿದಸ್ಯಾಃ ಪರಮಂ ಜಗಾಮ ॥೭॥

ಧ್ಯಾನಮಂತ್ರಾರ್ಥವು ಹೀಗಿದೆ— ಕ್ಲೀಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾಗಿ ಪ್ರಕಾಶಸ್ವರೂಪಳಾದ ಸರಸ್ವತೀದೇವಿಯು ವಾಕ್ತತ್ತ್ವರೂಪದಲ್ಲಿ ಮೊದಲು ಅವ್ಯಕ್ತವಾಗಿದ್ದರೂ ಪಶುಪಕ್ಷಿ ಮುಂತಾದುವುಗಳಲ್ಲಿ ಸ್ವಲ್ಪ ವಿಕಾಸವನ್ನು ಹೊಂದಿ, ಕಡೆಗೆ ದೇವತೆಗಳಲ್ಲೂ ಮನುಷ್ಯರಲ್ಲೂ ವಿಕಾಸಕ್ರಮದಲ್ಲಿ ಭಾಷಾರೂಪವನ್ನೂ, ವ್ಯಕ್ತಸ್ವರೂಪವನ್ನೂ ಪಡೆಯುತ್ತಾ ದೇವತೆಗಳೇ ಮುಂತಾದವರಿಗೆ ಹೆಚ್ಚಿನ ಸುಖವನ್ನುಂಟುಮಾಡುತ್ತಾ ಬೆಳೆದು, ಮುಂದುವರಿದ ಹಾಗೆಲ್ಲ ಹೊಸಹೊಸ ಪದಾರ್ಥಗಳನ್ನು ತಿಳಿಸುತ್ತಾ ಇರುತ್ತಾಳೆ. ಆ ಸರಸ್ವತಿಯೇ ನಮ್ಮ ಈ ಕರ್ಮದಲ್ಲೂ ದಯಮಾಡಿ ಇರುತ್ತಾಳೆ. ಇವಳ ಪ್ರಭಾವದಿಂದ ನಾಲ್ಕು ದಿಕ್ಕುಗಳುಳ್ಳ ಈ ಪ್ರಪಂಚದಲ್ಲೆಲ್ಲ ವ್ಯವಹಾರವು ಸುಗಮವಾಗಿ ನೆರವೇರುತ್ತಾ ನೀರು ಹಾಲು ಹಣ್ಣು ಅನ್ನ ಮುಂತಾದ ಜೀವನ ಸಾಧನಗಳು ಎಲ್ಲರಿಗೂ ದೊರೆಯುವಂತಾಗುತ್ತಿವೆ. ಈ ದೇವಿಯು ಪರತತ್ತ್ವರೂಪದಲ್ಲಿ ಎಲ್ಲರಿಗೂ ಗೋಚರವಾಗುವುದಿಲ್ಲ. ಆದರೂ ಸೂಕ್ಷ್ಮದರ್ಶಿಗಳೂ ವಿವೇಚನಶೀಲರೂ ಆಗಿರುವ ಜ್ಞಾನಿಗಳಿಗೆ ಗೋಚರವಾಗುವಳು.

ದೇವೀಂ ವಾಚಮಿತಿ ಮಂತ್ರಸ್ಯ, ಭಾರ್ಗವ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಸೌರಿತಿ ಬೀಜಶಕ್ತಿಕೀಲಕಂ । ಮಂತ್ರೇಣ ನ್ಯಾಸಃ ॥

ದೇವೀಂ ವಾಚಂ ಎಂದು ಪ್ರಾರಂಭವಾಗಿರುವ ಮಂತ್ರಕ್ಕೆ ಭಾರ್ಗವನೇ ಋಷಿಯು. ಛಂದಸ್ಸು ತ್ರಿಷ್ಟುಪ್ ಲಕ್ಷಣವುಳ್ಳುದು. ಸರಸ್ವತಿಯೇ ಉಪಾಸ್ಯ ದೇವಿಯು. ಸೌಃ ಎಂಬ ಮಂತ್ರವರ್ಣದಿಂದ ಬೀಜ ಶಕ್ತಿ ಕೀಲಕಗಳನ್ನು ಭಾವಿಸ ಬೇಕು. ಮಂತ್ರದಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಂಡು ಜಪಧ್ಯಾನ ಗಳನ್ನು ಆಚರಿಸಬೇಕು.

ವ್ಯಕ್ತಾವ್ಯಕ್ತಗಿರಸ್ಸರ್ವಾಃ ವೇದಾದ್ಯಾ ವ್ಯಾಹರಂತಿ ಯಾಂ ।
ಸರ್ವಕಾಮದುಘಾ ಧೇನುಸ್ಸಾ ಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವನ್ನು ಹೀಗೆ ವಿವರಿಸಬಹುದು— ಅವ್ಯಕ್ತ ಮತ್ತು ವ್ಯಕ್ತರೂಪಗಳುಳ್ಳ ವಾಕ್ಕುಗಳು ವೇದಗಳೇ ಮುಂತಾದ ವ್ಯಕ್ತವಾದ ಭಾಷಾ ರೂಪಗಳನ್ನು ಹೊಂದಿದವುಗಳಾಗಿ ಯಾವ ಸರಸ್ವತೀದೇವಿಯ ತತ್ತ್ವವನ್ನು ವರ್ಣಿಸಿ, ವಿವರಿಸಿ ನಿರೂಪಿಸುತ್ತಿವೆಯೋ, ಕರುವಿನೊಡನಿರುವ ಹಸುವಿನಂತೆ ಯಾವ ದೇವಿಯು ಉಪಾಸಕರ ಎಲ್ಲ ಇಷ್ಟಾರ್ಥಗಳನ್ನೂ ಸಲ್ಲಿಸುತ್ತಿರುತ್ತಾಳೋ, ಅಂಥಾ ಸರಸ್ವತೀ ದೇವಿಯು ನನ್ನನ್ನು ಕಾಪಾಡಲಿ. ಈ ಮಂತ್ರಗಳಲ್ಲಿ ಪ್ರಾರ್ಥಿಸಿರುವ ಕಾಪಾಡು ವಿಕೆಯು ಜನರಲ್ಲಿ ಒಳ್ಳೆಯ ಧಾರ್ಮಿಕವಾದ ಬುದ್ಧಿಯನ್ನುಂಟುಮಾಡುವುದೇ ಆಗಿದೆ ಎಂಬ ಅಂಶವನ್ನು "ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್ । ಯಂತು ರಕ್ಷಿತುಮಿಚ್ಛಂತಿ ಸದ್ಬುದ್ಧ್ಯಾ ಯೋಜಯಂತಿ ತಂ ॥" ಎಂಬ ಶ್ಲೋಕವು ತಿಳಿಸುತ್ತದೆ.

ಸೌಃ, ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ । ಸಾನೋಮಂದ್ರೇಷಮೂರ್ಜಂ ದುಹಾನಾ ಧೇನುರ್ವಾಗಸ್ಮಾನುಪಸುಷ್ಟುತೈತು ॥೮॥

ಧ್ಯಾನಕ್ಕೆ ಉಪಯೋಗಿಸುವ ಋಙ್ಮಂತ್ರದ ಅರ್ಥವನ್ನು ಹೀಗೆ ವಿವರಿಸ ಬಹುದು. ಸೌಃ ಎಂಬ ವರ್ಣಮಂತ್ರದಿಂದ ಉಪಾಸ್ಯಳಾಗಿರುವ ಸರಸ್ವತೀದೇವಿಯು ಅಖಿಲವಾಙ್ಮಯಕ್ಕೂ ಅಭಿಮಾನಿನಿಯಾದ ದೇವತೆಯಾಗಿದಾಳೆ. ಈ ವಾಕ್ತತ್ವಕ್ಕೆ ಅವ್ಯಕ್ತ, ಅಲ್ಪವ್ಯಕ್ತ, ಸುವ್ಯಕ್ತ ಎಂಬ ರೂಪಗಳು ಅದರ ಪ್ರಾರಂಭ ಮತ್ತು ವಿಕಾಸ ಕ್ರಮಗಳಲ್ಲಿ ಉಂಟಾಗಿರುತ್ತವೆ. ಈ ಅವ್ಯಕ್ತರೂಪಕ್ಕೆ ಪರಾ ಎಂದು ಹೆಸರಿದೆ. ಅಲ್ಪವ್ಯಕ್ತವಾದ ಪಶ್ಯಂತೀ ಮಧ್ಯಮಾರೂಪಗಳಲ್ಲಿ ಆ ವಾಕ್ತತ್ತ್ವವು ಧ್ವನಿರೂಪವನ್ನು ತಾಳುತ್ತದೆ. ಅದರಲ್ಲೂ ಈ ಧ್ವನಿಯ ಪಶ್ಯಂತೀ ರೂಪವನ್ನು ಸೂಕ್ಷ್ಮದರ್ಶಿಗಳಾದ

ಯೋಗಿಗಳೂ ವಿವೇಚನಶೀಲರಾದ ಜ್ಞಾನಿಗಳೂ ಮನಗಾಣಬಲ್ಲರು. ಇದರ ಮಧ್ಯಮಾರೂಪವನ್ನು ಜನರು ಆಲೈಸಿ ಶ್ರವಣೇಂದ್ರಿಯದಿಂದಲೂ ತಿಳಿಯಬಹುದು. ಕಡೆಗೆ ಸುವ್ಯಕ್ತವಾದ ಶಬ್ದರೂಪಧ್ವನಿಯು ಕಂಠ ಮುಂತಾದ ಉಚ್ಚಾರಣಸ್ಥಾನಗಳಲ್ಲಿ ವರ್ಣರೂಪವನ್ನು ಪಡೆದು ಭಾಷಾರೂಪದಲ್ಲಿ ಎಲ್ಲರ ವ್ಯವಹಾರಕ್ಕೂ ಜೀವನಕ್ಕೂ ಸಾಧನವಾಗುತ್ತದೆ.

ಸ್ವಪ್ರಕಾಶರೂಪಳಾದ ಸರಸ್ವತೀದೇವಿಯ ಸುವ್ಯಕ್ತವಾದ ಭಾಷಾರೂಪವನ್ನು ಎಂದರೆ ವರ್ಣ ಪದ ವಾಕ್ಯಗಳ ರೂಪವನ್ನು ಮೊದಲು ದೇವತೆಗಳು ಉಂಟುಮಾಡಿ, ಮಾನವರಲ್ಲಿಯೂ ರೂಢಿಗೆ ಬರುವಂತೆ ಮಾಡಿದರು. ಈ ವಾಕ್ತತ್ತ್ವದ ಅಲ್ಪವ್ಯಕ್ತ ರೂಪಗಳಾದ ನಾದ, ಧ್ವನಿಶಬ್ದಗಳಲ್ಲಿ ಧ್ವನಿಶಬ್ದಗಳನ್ನು ಪಶುಪಕ್ಷಿಗಳು ವ್ಯಕ್ತಗೊಳಿಸುತ್ತಿವೆ. ಹೀಗೆ ವಾಕ್ತತ್ತ್ವವು ನಾನಾಬಗೆಯ ರೂಪಗಳುಳ್ಳದ್ದಾಗಿದೆ. ಇಂತಹ ವಾಙ್ಮಯಾಭಿಮಾನಿನಿಯಾದ ಸರಸ್ವತೀದೇವಿಯು ನಮ್ಮ ಈ ಸ್ತೋತ್ರವಾಕ್ಯಗಳಿಂದ ಸಂತುಷ್ಟಳಾಗಿ ನಮ್ಮ ಅನ್ನ ಮತ್ತು ಹಾಲು ತುಪ್ಪ ಮುಂತಾದ ರಸಪದಾರ್ಥಗಳನ್ನು ಧಾರಾಳವಾಗಿ ದೊರೆಯುವಂತೆ ಮಾಡುತ್ತಾ ಕರೆಯುವ ಹಸುವಿನಂತೆ ಹೆಚ್ಚುಸುಖವುಳ್ಳವರನ್ನಾಗಿ ಮಾಡುತ್ತಾ ನಮ್ಮನ್ನು ಪಡೆಯಲಿ.

ಉತತ್ವ ಇತಿ ಮಂತ್ರಸ್ಯ, ಬೃಹಸ್ಪತಿ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಸಮಿತಿ ಬೀಜಶಕ್ತಿಕೀಲಕಂ । ಮಂತ್ರೇಣ ನ್ಯಾಸಃ ॥

ಉತತ್ವಃ ಎಂದು ಪ್ರಾರಂಭವಾಗಿರುವ ಮಂತ್ರಕ್ಕೆ ಬೃಹಸ್ಪತಿದೇವನೇ ಋಷಿಯು. ಛಂದಸ್ಸು ತ್ರಿಷ್ಟುಪ್ ಲಕ್ಷಣವುಳ್ಳದು. ಸರಸ್ವತಿಯೇ ಉಪಾಸ್ಯ ದೇವತೆಯು. ಸಂ ಎಂಬ ಮಂತ್ರವರ್ಣದಿಂದ ಬೀಜಶಕ್ತಿಕೀಲಕಗಳನ್ನು ಭಾವಿಸಬೇಕು. ಮಂತ್ರದಿಂದ ಕರನ್ಯಾಸ ಅಂಗನ್ಯಾಸಗಳನ್ನು ಆಚರಿಸಬೇಕು.

ಯಾಂ ವಿದಿತ್ವಾಖಿಲಂ ಬಂಧಂ ನಿರ್ಮಥ್ಯಾಖಿಲವರ್ತ್ಮನಾ ।
ಯೋಗೀ ಯಾತಿ ಪರಂ ಸ್ಥಾನಂ ಸಾ ಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವನ್ನು ಹೀಗೆ ವಿವರಿಸಬಹುದು— ಯಾವ ಸರಸ್ವತೀದೇವಿಯನ್ನು ಎಂದರೆ ಮೇಲೆ ವರ್ಣಿಸಿರುವ ಈ ದೇವಿಯ ಸಗುಣರೂಪವನ್ನೂ ಮತ್ತು ಪರತತ್ತ್ವಸ್ವರೂಪವನ್ನೂ ತಿಳಿದು ಯೋಗದಲ್ಲಿ ಸಿದ್ಧನಾದ ಜ್ಞಾನಿಯು ಎಲ್ಲ ಮಾರ್ಗಗಳಿಂದಲೂ ಎಂದರೆ ಜ್ಞಾನೇಂದ್ರಿಯ ಕರ್ಮೇಂದ್ರಿಯ ಮನಸ್ಸುಗಳ ಮೂಲಕವಾಗಿ ನಮಗೆ ಬಂದು ಸೇರಿರುವ ಬಂಧಂ ತೊಡಕಿನ ದುಃಖವನ್ನು ಎಂದರೆ ಅಹಂಕಾರ ಮಮಕಾರ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ವಾಸ್ತವವಲ್ಲದ ಬರಿಯ ತೋರಿಕೆಯ ತೊಡಕುಗಳನ್ನು ನಿರ್ಮೂಲವಾಗಿ

ನಾಶಮಾಡಿ ಉತ್ತಮವಾದ ನಿತ್ಯಸುಖದ ಸ್ಥಿತಿಯನ್ನು ಸಚ್ಚಿದಾನಂದಸ್ವರೂಪದ ಸಾಕ್ಷಾತ್ಕಾರದಲ್ಲಿರುವಿಕೆಯನ್ನು ಪಡೆದಿರುತ್ತಾನೋ, ಅಂತಹ ಸರಸ್ವತೀದೇವಿಯು ಅಂಥ ತಿಳುವಳಿಕೆಯನ್ನು ದಯಪಾಲಿಸಿ ಕಾಪಾಡಲಿ.

ಸಂ, ಉತತ್ವಃ ಪಶ್ಯನ್ನದದರ್ಶ ವಾಚಮುತತ್ವಶ್ಶೃಣ್ವನ್ನ ಶೃಣೋತ್ಯೇನಾಂ ।
ಉತೋ ತ್ವಸ್ಮೈ ತನ್ವಂ ವಿಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥೯॥

ಧ್ಯಾನಮಂತ್ರದ ಅರ್ಥವು ಹೀಗಿದೆ—ಸಂ ಎಂಬ ವರ್ಣಮಂತ್ರದಿಂದ ಸರಸ್ವತೀ ದೇವಿಯನ್ನು ಧ್ಯಾನಿಸಬೇಕು. ಒಬ್ಬನು ಆಲೋಚಿಸಿದರೂ ಈ ಸರಸ್ವತೀ ತತ್ತ್ವವು ಎದುರಿಗಿದ್ದರೂ ಸೂಕ್ಷ್ಮದರ್ಶನದಿಂದ ವಿವೇಚಿಸಿ ತಿಳಿಯಲು ತಕ್ಕ ಸಾಮರ್ಥ್ಯವಿಲ್ಲದ ವನಾದುದರಿಂದ ಆ ವಾಕ್ತತ್ತ್ವವನ್ನು ತಿಳಿಯಲಾರನು. ಹಾಗೆಯೇ ಇನ್ನೂ ಒಬ್ಬನು ಆ ವಾಕ್ತತ್ತ್ವದ ಸ್ವರೂಪವನ್ನು ಕೇಳಿದರೂ ಕೇಳಲಾರದವನಾಗಿರುತ್ತಾನೆ. ವೇದ ಗಳಲ್ಲಿ ವಿವರಿಸಿರುವ ತತ್ತ್ವಾರ್ಥಗಳನ್ನು ತಿಳಿಯಬಲ್ಲವನಿಗೆ ಸರಸ್ವತಿಯು ಪರಮಾರ್ಥ ತತ್ತ್ವವು ಗೋಚರವಾಗುವುದು. ಏಕೆಂದರೆ, ಒಳ್ಳೆಯ ವಸ್ತ್ರಗಳಿಂದ ಅಲಂಕರಿಸಿ ಕೊಂಡಿರುವ ಪ್ರೇಮದಿಂದ ತುಂಬಿರುವ ಇಚ್ಛೆಯುಳ್ಳ ಪತ್ನಿಯು ತನ್ನ ಪತಿಗೆ ತನ್ನ ಸ್ವರೂಪವನ್ನು ತಿಳಿಸಲು ಅನುಕೂಲಳಾಗಿರುವಂತೆ ಸರಸ್ವತೀದೇವಿಯು ಉಪಾಸಕನ ವಿಷಯದಲ್ಲಿ ಅನುಗ್ರಹವುಳ್ಳವಳಾಗಿ ಇರುತ್ತಾಳೆ.

ಅಂಬಿತಮ ಇತಿ ಮಂತ್ರಸ್ಯ, ಗೃತ್ಸಮದ ಋಷಿಃ । ಅನುಷ್ಟುಪ್ ಛಂದಃ ।
ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿ ಕೀಲಕಂ । ಮಂತ್ರೇಣ ನ್ಯಾಸಃ ॥

ಅಂಬಿತಮೆ ಎಂದು ಪ್ರಾರಂಭವಾಗುವ ಮಂತ್ರಕ್ಕೆ ಗೃತ್ಸಮದನೇ ಋಷಿಯು. ಛಂದಸ್ಸು ಅನುಷ್ಟುಪ್ ಲಕ್ಷಣವುಳ್ಳುದು ಎಂದರೆ ಎಂಟು ಅಕ್ಷರಗಳುಳ್ಳ ನಾಲ್ಕು ಪಾದಗಳುಳ್ಳ ವೃತ್ತಕ್ಕೆ ಅನುಷ್ಟುಪ್ ಎಂದು ಹೆಸರು. ಸರಸ್ವತಿಯೇ ಈ ಮಂತ್ರ ದಿಂದ ಉಪಾಸ್ಯಳಾದ ದೇವತೆಯು. ಐಂ ಎಂಬ ವರ್ಣಮಂತ್ರದಿಂದ ಬೀಜಶಕ್ತಿ ಕೀಲಕಗಳನ್ನು ಭಾವಿಸಬೇಕು. ಮಂತ್ರದಿಂದ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಂಡು ಜಪಿಸಬೇಕು.

ನಾಮರೂಪಾತ್ಮಕಂ ಸರ್ವಂ ಯಸ್ಯಾಮಾವೇಶ್ಯತಾಂ ಪುನಃ ।
ಧ್ಯಾಯಂತಿ ಬ್ರಹ್ಮರೂಪೈಕಾ ಸಾಮಾಂ ಪಾತು ಸರಸ್ವತೀ ॥

ಧ್ಯಾನಶ್ಲೋಕಮಂತ್ರದ ಅರ್ಥವನ್ನು ಹೀಗೆ ವಿವರಿಸಿದೆ —ಈ ಕಾರ್ಯ ಪ್ರಪಂಚ ವೆಲ್ಲವೂ ಕಡೆಗೆ ಹೆಸರು ಮತ್ತು ಆಕಾರ ಇವುಗಳಲ್ಲಿ ಪರ್ಯವಸಾನ ಹೊಂದುವುದರಿಂದ ನಾಮರೂಪಗಳೇ ಸ್ವರೂಪವಾಗಿ ಉಳ್ಳದ್ದಾಗಿದೆ. ಇಂತಹ ಪ್ರಪಂಚವನ್ನು

ಸರಸ್ವತಿಯ ಪರತತ್ತ್ವವಾದ, ಎಲ್ಲಕ್ಕೂ ಕಾರಣವಾಗಿರುವ ಅಧಿಷ್ಠಾನಬ್ರಹ್ಮತತ್ತ್ವದಲ್ಲಿ ವಿಲಾಪನಮಾಡಿ ಅಡಗಿಸಿ ಯೋಗಸಿದ್ಧಿಯನ್ನು ಪಡೆದಿರುವ ಜ್ಞಾನಿಗಳು ಪುನಃ ಆ ದೇವಿಯ ಆ ಪರತತ್ತ್ವಸ್ವರೂಪವನ್ನೇ ಧ್ಯಾನಮಾಡುತ್ತಿರುತ್ತಾರೆ. ಹೀಗೆ ಸರ್ವಪ್ರಪಂಚಕ್ಕೂ ಅಧಿಷ್ಠಾನಕಾರಣವಾದ ಪರಬ್ರಹ್ಮಸ್ವರೂಪಳಾಗಿರುವುದರಿಂದ ಅದ್ವಿತೀಯಳಾದ ಆ ದೇವಿಯು ನನ್ನನ್ನು ಕಾಪಾಡಲಿ.

ಐಂ, ಅಂಬಿತಮೇ ನದೀತಮೇ ದೇವಿತಮೇ ಸರಸ್ವತಿ ।
ಅಪ್ರಶಸ್ತಾ ಇವಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥೧೦॥

ಧ್ಯಾನಮಂತ್ರದ ಅರ್ಥವನ್ನು ಹೀಗೆ ವ್ಯಾಖ್ಯಾನ ಮಾಡಿದೆ. ಐಂ ಎಂಬ ವರ್ಣಮಂತ್ರದಿಂದ ಉಪಾಸ್ಯಳಾದ, ತಾಯಿಯರಲ್ಲಿ ಉತ್ತಮಳೂ, ನದಿಗಳಲ್ಲಿ ಶ್ರೇಷ್ಠಳೂ, ಪ್ರಕಾಶದಂತೆ ಸ್ಫುರಿಸುವ ಸ್ವಭಾವವುಳ್ಳ, ದೇವತೆಗಳಲ್ಲಿ ಮೇಲಾದವಳೂ ಆಗಿರುವ ಸರಸ್ವತೀದೇವಿಯೇ, ನಾವು ಸಮೃದ್ಧಿಯಿಲ್ಲದೆ ಪ್ರಾಶಸ್ತ್ಯ (ಮೇಲ್ಮೆ) ವಿಲ್ಲದವರ ಹಾಗಿದೇವೆ. ಓ ತಾಯಿಯೇ, ನಮಗೆ ಸಮೃದ್ಧಿಯನ್ನೂ ಮೇಲ್ಮೆಯನ್ನೂ ಉಂಟುಮಾಡಿ ನಮ್ಮನ್ನು ಅನುಗ್ರಹಿಸು.

ಚತುರ್ಮುಖಮುಖಾಂಭೋಜವನಹಂಸವಧೂರ್ಮಮ । * (ಕಲ
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥

ನಾಲ್ಕು ಮುಖಗಳುಳ್ಳ ಬ್ರಹ್ಮನ ಕಮಲದಂತಿರುವ ಮುಖಗಳೆಂಬ ಅರಣ್ಯಕ್ಕೆ ಹೆಣ್ಣುಹಂಸೆಯ ಹಾಗಿರುವ, ಶುದ್ಧವಾದ ಬಿಳಿಯ ಕಾಂತಿಯುಳ್ಳ ಸರಸ್ವತೀದೇವಿಯು ನನ್ನ ಮನಸ್ಸಿನಲ್ಲಿ ಯಾವಾಗಲೂ ಸಂತೋಷದಿಂದ ಇರಲಿ.

ನಮಸ್ತೇ ಶಾರದೇ ದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ॥

ಕಾಶ್ಮೀರಪುರದಲ್ಲಿ ನೆಲಸಿರುವ, ಶರತ್ಕಾಲದ ನವಮಿಯಲ್ಲಿ ದೇವತೆಗಳಿಂದ ಉಪದೇಶಿಸಿ ಪ್ರಚಾರಪಡಿಸಿದುದರಿಂದ ಶಾರದಾ ಎಂದು ಪ್ರಸಿದ್ಧಳಾಗಿರುವ, ಚಿತ್ಪ್ರಕಾಶ ರೂಪಳಾದ ಸರಸ್ವತೀದೇವಿಯೇ ನಿನಗೆ ನಮಸ್ಕಾರವು. ನನಗೆ ತಿಳಿವಳಿಕೆಯನ್ನು ಅನುಗ್ರಹಿಸೆಂದು ಸರ್ವದಾ ನಿನ್ನನ್ನು ಪ್ರಾರ್ಥಿಸುತ್ತೇನೆ.

ಅಕ್ಷಸೂತ್ರಾಂಕುಶಧರಾ ಪಾಶಪುಸ್ತಕಧಾರಿಣೀ ।
ಮುಕ್ತಾಹಾರಸಮಾಯುಕ್ತಾ ವಾಚಿ ತಿಷ್ಠತು ಮೇ ಸದಾ ॥

ಜಪಸರ, ಅಂಕುಶ, ಪಾಶ, ಪುಸ್ತಕಗಳನ್ನು ಕೈಗಳಲ್ಲಿ ಧರಿಸಿರುವ, ಮುತ್ತಿನ ಹಾರದಿಂದ ಅಲಂಕರಿಸಿಕೊಂಡಿರುವ ಸರಸ್ವತೀದೇವಿಯು ನನ್ನ ಮಾತಿನಲ್ಲಿ ಯಾವಾಗಲೂ ನೆಲಸಿರಲಿ.

ಕಂಬುಕಂಠೀ ಸುತಾಮ್ರೋಷ್ಠೀ ಸರ್ವಾಭರಣಭೂಷಿತಾ ।
ಮಹಾಸರಸ್ವತೀ ದೇವೀ ಜಿಹ್ವಾಗ್ರೇ ಸಂನಿವೇಶ್ಯತಾಂ ॥

ಶಂಖದಂತೆ ದುಂಡಾಗಿ ತುಂಬಿಕೊಂಡಿರುವ ನಿರ್ಮಲವಾದ ಕತ್ತು, ಅಚ್ಚ ಕೆಂಪಾದ ತುಟಿಗಳು ಇವುಗಳುಳ್ಳ ಎಲ್ಲ ಬಗೆಯ ಒಡವೆಗಳಿಂದ ಶೃಂಗರಿಸಿಕೊಂಡಿರುವ ಜ್ಞಾನಜ್ಯೋತಿಸ್ಸ್ವರೂಪಳಾದ ಮಹಾಸರಸ್ವತೀದೇವಿಯು ನನ್ನ ನಾಲಗೆಯ ತುದಿಯಲ್ಲಿ ಚೆನ್ನಾಗಿ ನೆಲಸಿರಲಿ.

ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ ।
ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ ॥

ಯಾವ ಈ ಸರಸ್ವತೀದೇವಿಯು ಗುರೂಪದೇಶ ಶ್ರುತಿವಾಕ್ಯಗಳಲ್ಲಿ ಅಚಲವಾದ ನಂಬಿಕೆಯ ಸ್ವರೂಪಳೂ, ತಿಳಿಸಿದ ವಿಷಯಗಳನ್ನು ಮರೆಯದೆ ಇಟ್ಟುಕೊಳ್ಳುವ ಶಕ್ತಿರೂಪಳೂ, ವಾಙ್ಮಯಕ್ಕೆಲ್ಲ ಅಭಿಮಾನಿನಿಯಾದ ದೇವತೆಯೂ, ಸ್ಫುರಣಸ್ವಭಾವವುಳ್ಳ ಚಿತ್‌ಜ್ಯೋತಿಸ್ಸ್ವರೂಪಳೂ, ಚತುರ್ಮುಖಬ್ರಹ್ಮನಲ್ಲಿ ಪ್ರೇಮಪೂರ್ಣಳಾದ ಪತ್ನಿಯೂ, ಭಕ್ತಿಯಿಂದ ಆರಾಧಿಸುವ ಉಪಾಸಕರ ನಾಲಿಗೆಯ ತುದಿಯಲ್ಲಿ ನೆಲಸಿರುವವಳೂ, ಶಮ ದಮ ಉಪರತಿ ತಿತಿಕ್ಷಾ ಶ್ರದ್ಧಾ ಸಮಾಧಾನಗಳೆಂಬ ಗುಣಗಳನ್ನು ಅನುಗ್ರಹಿಸುವವಳೂ ಆಗಿರುತ್ತಾಳೆ.

ನಮಾಮಿ ಯಾಮಿನೀನಾಥರೇಖಾಲಂಕೃತಕುಂತಲಾಂ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಂ ॥

ರಾತ್ರಿಗೆ ಒಡೆಯನಾದ ಚಂದ್ರನ ರೇಖೆಯಿಂದ ಎಂದರೆ ದ್ವಿತೀಯಾ ಚಂದ್ರನಿಂದ ಅಲಂಕರಿಸಿರುವ ಕೇಶಪಾಶವುಳ್ಳ, ದುರ್ಗಾಸಪ್ತಶತಿಯಲ್ಲಿ ವರ್ಣಿಸಿರುವಂತೆ ಭವಾನೀ ಸ್ವರೂಪಳಾದ, ಕರ್ತೃತ್ವಭೋಕ್ತೃತ್ವ ಜನನಮರಣ ಸಂಕಟಗಳಿಂದ ತುಂಬಿರುವ ಈ ಸಂಸಾರದ ತಾಪದ ದುಃಖವನ್ನು ನಿವಾರಿಸುವುದರಲ್ಲಿ ಅಮೃತನದಿಯಂತೆ ಸಮರ್ಥಳಾದ, ಸರಸ್ವತೀದೇವಿಯನ್ನು ನಮಸ್ಕರಿಸುತ್ತೇನೆ.

ಯಃ ಕವಿತ್ವಂ ನಿರಾತಂಕಂ ಭುಕ್ತಿಮುಕ್ತೀ ಚ ವಾಂಛತಿ ।
ಸೋಽಭ್ಯರ್ಚ್ಯೈನಾಂ ದಶಶ್ಲೋಕ್ಯಾ ನಿತ್ಯಂ ಸ್ತೌತಿ ಸರಸ್ವತೀಂ ॥

ಯಾವ ಉಪಾಸಕನು ಕಾವ್ಯರಚನಶಕ್ತಿಯನ್ನೂ, ಆತಂಕವಿಲ್ಲದೆ ಭೋಗಮೋಕ್ಷಗಳನ್ನೂ ಅಪೇಕ್ಷಿಸುತ್ತಾನೋ ಅಂಥವನು ಈ ಸರಸ್ವತಿಯನ್ನು ಈ ದಶಶ್ಲೋಕೀ ಮಂತ್ರದಿಂದ ಪೂಜಿಸಿ ಪ್ರತಿನಿತ್ಯದಲ್ಲೂ ಸ್ತೋತ್ರಮಾಡುತ್ತಾನೆ.

ತಸ್ಯೈವಂ ಸ್ತುವತೋ ನಿತ್ಯಂ ಸಮಭ್ಯರ್ಚ್ಯ ಸರಸ್ವತೀಂ ।
ಭಕ್ತಿಶ್ರದ್ಧಾಭಿಯುಕ್ತಸ್ಯ ಷಾಣ್ಮಾಸಾತ್ಪ್ರತ್ಯಯೋ ಭವೇತ್ ॥

ಈ ಪ್ರಕಾರವಾಗಿ ಪ್ರತಿನಿತ್ಯವೂ ಸರಸ್ವತಿಯನ್ನು ಪೂಜಿಸಿ ಸ್ತೋತ್ರಮಾಡುತ್ತಿರುವ, ನಂಬಿಕೆ ವಿಶ್ವಾಸಗಳಿಂದ ತುಂಬಿರುವ, ಅಂಥಾ ಉಪಾಸಕನಿಗೆ ಆರುತಿಂಗಳಲ್ಲಿ ಮಂತ್ರಸಿದ್ಧಿಯ ಗುರುತು ಉಂಟಾಗುವುದು.

ತತಃ ಪ್ರವರ್ತತೇ ವಾಣೀ ಸ್ವೇಚ್ಛಯಾ ಲಲಿತಾಕ್ಷರಾ ।
ಗದ್ಯಪದ್ಯಾತ್ಮಕೈಃ ಶಬ್ದೈರಪ್ರಮೇಯೈರ್ವಿವಕ್ಷಿತೈಃ ॥

ಆಮೇಲೆ ಅಂಥ ಭಕ್ತನು ವರ್ಣಿಸಿ ಹೇಳಬೇಕೆಂದು ಅಪೇಕ್ಷಿಸುವ, ಇತರರಿಗೆ ತೋರದೆ ಇರುವ, ಗದ್ಯಪದ್ಯರೂಪವಾದ ಶಬ್ದಗಳಿಂದ, ಇಂಪಾದ ವರ್ಣಗಳುಳ್ಳ ವಾಣಿಯು ಧಾರಾಳವಾಗಿ ಅವನಿಂದ ಹೊರಡುತ್ತದೆ.

ಅಶ್ರುತೋ ಬುಧ್ಯತೇ ಗ್ರಂಥಃ ಪ್ರಾಯಸ್ಸಾರಸ್ವತಃ ಕವಿಃ ।
ಇತ್ಯೇವಂ ನಿಶ್ಚಯಂ ವಿಪ್ರಾಸ್ಸಾ ಹೋವಾಚ ಸರಸ್ವತೀ ॥

ಹೊಸಗ್ರಂಥಗಳು ಅವನಿಗೆ ತಿಳಿದುಬರುತ್ತವೆ. ಪ್ರಾಯಶಃ ಅವನು ಸರಸ್ವತಿಯ ವರಕವಿಯೇ ಆಗುತ್ತಾನೆ. ವೈದಿಕಧರ್ಮನಿಷ್ಠರಾದ ಓ ಋಷಿಗಳೇ ಹೀಗೆಂಬ ನಿಶ್ಚಯವನ್ನು ನೀವು ತಿಳಿಯಿರಿ ಎಂದು ಆ ಸರಸ್ವತಿಯು ಆ ಋಷಿಗಳಿಗೆ ಉಪದೇಶ ಮಾಡಿದಳು ಮತ್ತು ಮುಂದುವರಿದು ಹೀಗೆ ಹೇಳಿದಳು.

ಆತ್ಮವಿದ್ಯಾ ಮಯಾ ಲಬ್ಧಾ ಬ್ರಹ್ಮಣೈವ ಸನಾತನೀ ।
ಬ್ರಹ್ಮತ್ವಂ ಮೇ ಸದಾನಿತ್ಯಂ ಸಚ್ಚಿದಾನಂದರೂಪತಃ ॥

ಯಾವಕಾಲದಲ್ಲೂ ನಾಶವಾಗದೆ ಶಾಶ್ವತವಾಗಿರುವ ಆತ್ಮವಿದ್ಯೆಯನ್ನು ನಾನು ಬ್ರಹ್ಮನಿಂದ ಸಾಕ್ಷಾತ್ತಾಗಿ ಪಡೆದೆನು. ಸಚ್ಚಿದಾನಂದರೂಪದಲ್ಲಿ ನನಗೆ ಬ್ರಹ್ಮಸ್ವರೂಪವಾಗಿರುವಿಕೆಯು ಯಾವಾಗಲೂ ನಿತ್ಯವಾಗಿ ಇದ್ದೇ ಇರುವುದು.

ಪ್ರಕೃತಿತ್ವಂ ತತಃ ಸೃಷ್ಟಂ ಸತ್ತ್ವಾದಿಗುಣಸಾಮ್ಯತಃ ।
ಸತ್ಯೇವಾಭಾತಿ ಚಿಚ್ಛಾಯಾ ದರ್ಪಣೇ ಪ್ರತಿಬಿಂಬವತ್ ॥

ಸೃಷ್ಟಿಯಲ್ಲಿ ಜನ್ಮವನ್ನು ಪಡೆಯಲಿರುವ ಜೀವರ ಕರ್ಮಾನುಸಾರವಾಗಿ ಸತ್ತ್ವ ರಜಸ್ಸು ತಮಸ್ಸುಗಳೆಂಬ ಮೂರು ಗುಣಗಳು ಒಂದೇ ಸಮನಾಗಿರುವಿಕೆಗೆ ಪ್ರಕೃತಿ ಎಂದೂ, ಪ್ರಳಯವೆಂದೂ ವ್ಯವಹಾರವಿದೆ. ಆ ಪ್ರಕೃತಿಯಲ್ಲಿ ಗುಣಗಳ ಹೆಚ್ಚು ಕಡಿಮೆಯಾಗುವಿಕೆಯಿಂದ ಸೃಷ್ಟಿಯು ಮುಂದುವರಿಯುವುದು. ಕನ್ನಡಿಯಲ್ಲಿ ಪ್ರತಿಬಿಂಬವು ಹೇಗೋ ಹಾಗೆ, ಆ ಪ್ರಕೃತಿಯಲ್ಲಿ ಬ್ರಹ್ಮಚೈತನ್ಯದ ಪ್ರತಿಬಿಂಬವು ತೋರುತ್ತದೆ. ಈ ಪ್ರಕೃತಿಗೇ ಮೂಲಾವಿದ್ಯೆ ಎಂದು ವ್ಯವಹಾರವಿದೆ.

ತೇನ ಚಿತ್ಪ್ರತಿಬಿಂಬೇನ ತ್ರಿವಿಧಾ ಭಾತಿ ಸಾ ಪುನಃ ।
ಪ್ರಕೃತ್ಯವಚ್ಛಿನ್ನತಯಾ ಪುರುಷತ್ವಂ ಪುನಶ್ಚ ಮೇ ॥

ಹೀಗೆ ಆ ಚೈತನ್ಯದ ಪ್ರತಿಬಿಂಬಿಸುವಿಕೆಯಿಂದ ಆ ಪ್ರಕೃತಿಯು ಆ ಮೂರು ಗುಣಗಳ ಪೈಕಿ ಒಂದೊಂದುಗುಣದ ಪ್ರಾಧಾನ್ಯವನ್ನನುಸರಿಸಿ ಮೂರುಬಗೆಯಾಗಿ ತೋರುತ್ತದೆ. ಆ ಪ್ರಕೃತಿಯ ಪರಿಮಿತಿಗೆ ಒಳಪಟ್ಟಿರುವಿಕೆಯಿಂದ ನನಗೆ ಪುರುಷತ್ವವು ಎಂದರೆ ಶರೀರಗಳಲ್ಲಿ ತೋರುವಿಕೆ ಎಂಬ ಜೀವತ್ವವು ಪುನಃ ಪುನಃ ಉಂಟಾಗುತ್ತಿರುತ್ತದೆ.

ಶುದ್ಧಸತ್ತ್ವಪ್ರಧಾನಾಯಾಂ ಮಾಯಾಯಾಂ ಬಿಂಬಿತೋ ಹ್ಯಜಃ ।
ಸತ್ತ್ವಪ್ರಧಾನಾ ಪ್ರಕೃತಿರ್ಮಾಯೇತಿ ಪ್ರತಿಪಾದ್ಯತೇ ॥

ಶುದ್ಧಸತ್ತ್ವಗುಣವು ಮುಂದಾಗಿರುವ ಮಾಯೆಯಲ್ಲಿ ಸ್ವತಃ ಜನನಾದಿ ವಿಕಾರಗಳಿಲ್ಲದ ಚೈತನ್ಯವು ಪ್ರತಿಫಲಿಸಿ ತೋರುತ್ತದೆ. ಸತ್ತ್ವಗುಣವು ಮುಂದಾಗಿರುವ ರಜಸ್ತಮೋಗುಣಗಳು ಹಿಂದಾಗಿರುವ ಈ ಪ್ರಕೃತಿಯೇ ಮಾಯೆ ಎಂದು ವ್ಯವಹಾರವನ್ನು ಪಡೆಯುತ್ತದೆ. ಹೀಗೆ ಮಾಯೆಯಲ್ಲಿ ತೋರಿ ಕೊಂಡಿರುವ ಚೈತನ್ಯಕ್ಕೇ ಈಶ್ವರನೆಂದು ವ್ಯವಹಾರವಿದೆ.

ಸಾ ಮಾಯಾ ಸ್ವವಶೋಪಾಧಿಸ್ಸರ್ವಜ್ಞಸ್ಯೇಶ್ವರಸ್ಯ ಹಿ ।
ವಶ್ಯಮಾಯತ್ವಮೇಕತ್ವಂ ಸರ್ವಜ್ಞತ್ವಂ ಚ ತಸ್ಯ ತು ॥

ಆ ಮಾಯೆಯು ಸರ್ವಜ್ಞನಾದ ಈಶ್ವರನಿಗೆ ಸ್ವಾಧೀನವಾಗಿರುವ ಉಪಾಧಿಯಾಗಿರುತ್ತದೆ. ಮಾಯೆಯನ್ನು ಸ್ವಾಧೀನಪಡಿಸಿಕೊಂಡಿರುವಿಕೆಯೂ, ಒಂದೇ ಆದ ಅದ್ವಿತೀಯವಸ್ತುವಾಗಿರುವಿಕೆಯೂ, ಎಲ್ಲವನ್ನೂ ತಿಳಿಯುಬಲ್ಲಶಕ್ತಿಯೂ ಆ ಚೈತನ್ಯಕ್ಕೆ ಮಾತ್ರ ಇರುತ್ತದೆ.

ಸಾತ್ತ್ವಿಕತ್ವಾತ್ಸಮಷ್ಟಿತ್ವಾತ್ಸಾಕ್ಷಿತ್ವಾಜ್ಜಗತಾಮಪಿ ।
ಜಗತ್ಕರ್ತುಮಕರ್ತುಂ ವಾ ಚಾನ್ಯಥಾ ಕರ್ತುಮೀಶತೇ ॥

ಶುದ್ಧಸತ್ತ್ವಸ್ವರೂಪವಾಗಿರುವುದರಿಂದಲೂ ಎಲ್ಲ ಜೀವಚೈತನ್ಯಗಳ ಸಮಷ್ಟಿ ರೂಪವಾಗಿರುವುದರಿಂದಲೂ, ಎಲ್ಲ ಪ್ರಪಂಚಗಳ ವ್ಯವಹಾರಗಳಿಗೆ ಸಾಕ್ಷಿರೂಪವಾಗಿ ರುವುದರಿಂದಲೂ, ಆ ಬ್ರಹ್ಮಚೈತನ್ಯವು ಈ ಮಾಯಾಶಕ್ತಿಸಂಬಂಧದಿಂದ ಈ ಪ್ರಪಂಚವೆಲ್ಲವನ್ನೂ ಸೃಷ್ಟಿಸಲೂ, ಸೃಜಿಸದೆ ಇರಲೂ, ಮಾರ್ಪಡಿಸಲೂ ಸಹ ಸಮರ್ಥವಾಗಿರುತ್ತದೆ.

ಯಸ್ಸ ಈಶ್ವರ ಇತ್ಯುಕ್ತಸ್ಸರ್ವಜ್ಞತ್ವಾದಿಗುಣೈಃ ।
ಶಕ್ತಿದ್ವಯಂ ಹಿ ಮಾಯಾಯಾ ವಿಕ್ಷೇಪಾವೃತಿರೂಪಕಂ ॥

ಇಂಥಾ ಮಾಯೆಯಲ್ಲಿ ಪ್ರತಿಬಿಂಬಿಸಿ ಸರ್ವಜ್ಞತ್ವ ಮುಂತಾದ ಗುಣಗಳಿಂದ ಕೂಡಿರುವ ಬ್ರಹ್ಮಚೈತನ್ಯವನ್ನೇ ಈಶ್ವರನೆಂದು ವ್ಯವಹರಿಸುತ್ತಾರೆ. ಈ ಈಶ್ವರನ ಉಪಾಧಿಯಾಗಿರುವ ಮಾಯೆಗೆ ವಿಕ್ಷೇಪಶಕ್ತಿ ಆವರಣಶಕ್ತಿ ಎಂದು ಎರಡು ಬಗೆಯ ಶಕ್ತಿಗಳಿವೆ. ಈ ಆವರಣಶಕ್ತಿಯು ಮುಸುಕಿನಂತಿರುತ್ತಾ ವಸ್ತುಗಳ ನಿಜಸ್ವರೂಪವನ್ನು ತಿಳಿಯಲಾಗದಂತೆ ಮಾಡುತ್ತದೆ.

ವಿಕ್ಷೇಪಶಕ್ತಿರ್ಲಿಂಗಾದಿ ಬ್ರಹ್ಮಾಂಡಾಂತಂ ಜಗತ್ಸೃಜೇತ್ ।

ಈ ವಿಕ್ಷೇಪಶಕ್ತಿಯು ಸೂಕ್ಷ್ಮಶರೀರ ಮೊದಲುಗೊಂಡು ಬ್ರಹ್ಮಾಂಡದವರೆಗಿನ ಎಲ್ಲ ಸ್ಥೂಲಪ್ರಪಂಚವನ್ನೂ ಸೃಷ್ಟಿಸಿ ತೋರುತ್ತಿರುವಂತೆ ಮಾಡುತ್ತದೆ.

ಅಂತರ್ದೃಗ್ದೃಶ್ಯಯೋರ್ಭೇದಂ ಬಹಿಶ್ಚ ಬ್ರಹ್ಮಸರ್ಗಯೋಃ ।
ಆವೃಣೋತ್ಯಪರಾ ಶಕ್ತಿಸ್ಸಾ ಸಂಸಾರಸ್ಯ ಕಾರಣಂ ॥

ಈ ಆವರಣಶಕ್ತಿಯು ಶರೀರಗಳೊಳಗೆ ದೃಕ್ ಎಂದರೆ ನೋಡುವ ಜೀವನು, ದೃಶ್ಯ ಎಂದರೆ ಕಾಣಬರುತ್ತಿರುವ ಈ ಪ್ರಪಂಚ, ಇವೆರಡಕ್ಕೂ ಇರುವ ಭೇದವನ್ನೂ ಹೊರಗಡೆಯಲ್ಲಿ ಈಪ್ರಪಂಚಕ್ಕೂ ಬ್ರಹ್ಮಚೈತನ್ಯಕ್ಕೂ ಇರುವ ಭೇದವನ್ನೂ ತೋರದಂತೆ ಮಾಡಿರುವ ಶಕ್ತಿಯೇ ಆಗಿದೆ. ಇದು ಎಲ್ಲಕ್ಕಿಂತ ಹೆಚ್ಚು ಸಾಮರ್ಥ್ಯವುಳ್ಳದು. ಇದಕ್ಕೇ ಆವರಣಶಕ್ತಿ ಎಂದು ಹೆಸರು. ಇದೇ ಈ ಸಂಸಾರಕ್ಕೆ ಎಂದರೆ ಕರ್ಮಾಚರಣೆ, ಫಲಾನುಭವ, ಜನನ, ಮರಣ ಇವುಗಳ ಚಕ್ರದಲ್ಲಿ ಜೀವರು ಅಹಂಕಾರ ಮಮಕಾರಗಳಿಂದ ಸುತ್ತುತ್ತಿರುವಿಕೆಗೆ ಕಾರಣವಾಗಿರುತ್ತದೆ.

ಸಾಕ್ಷಿಣಃ ಪುರತೋ ಭಾತಂ ಲಿಂಗದೇಹೇನ ಸಂಯುತಂ ।
ಚಿತಿಚ್ಛಾಯಾಸಮಾವೇಶಾ ಜ್ಜೀವಸ್ಸ್ಯಾದ್ವ್ಯಾವಹಾರಿಕಃ ।

ಇಲ್ಲಿಂದ ಮುಂದಿನ ಹದಿನಾರು ಶ್ಲೋಕಗಳು ಶ್ರೀ ಶಂಕರಾಚಾರ್ಯರು ರಚಿಸಿದು ದೆಂದು ಪ್ರಸಿದ್ಧವಾಗಿರುವ ಮತ್ತು ಮುದ್ರಿತವಾಗಿರುರ ದೃಗ್ದೃಶ್ಯವಿವೇಕ ಅಥವಾ ವಾಕ್ಯಸುಧಾ ಎಂಬ ಗ್ರಂಥದಲ್ಲಿಯೂ ಬರುತ್ತವೆ. ಅಲ್ಲಿ ಇವು ಹದಿಮೂರನೆಯ ಶ್ಲೋಕದಿಂದ ಮೂವತ್ತೊಂದನೆಯ ಶ್ಲೋಕದವರಿಗೂ ವ್ಯಾಪಿಸಿವೆ. ಈ ಶ್ಲೋಕಗಳ ಮಧ್ಯದಲ್ಲಿ ಎರಡು ಶ್ಲೋಕಗಳು ಮಾತ್ರ ಈ ಉಪನಿಷತ್ತಿನಲ್ಲಿಲ್ಲದವಾಗಿವೆ. ದೃಗ್ದೃಶ್ಯ ವಿವೇಕದಲ್ಲಿ ಒಟ್ಟು ನಲವತ್ತಾರು ಶ್ಲೋಕಗಳಿವೆ. ವೇದಾಂತವನ್ನು ತಿಳಿಯಬಯಸು ವವರಿಗೆ ಈ ಗ್ರಂಥವು ತುಂಬ ಉಪಕಾರಕವಾಗಿದೆ. ಇದು ಸಂಗ್ರಹವೂ ವಿಶದವೂ ಸಮಗ್ರವೂ ಆಗಿರುವ ಒಂದು ವೇದಾಂತಪ್ರಕರಣಗ್ರಂಥವಾಗಿದೆ.

ಈ ಮೇಲೆ ಹೇಳಿದ ಆವರಣಶಕ್ತಿ ಮತ್ತು ವಿಕ್ಷೇಪಶಕ್ತಿಗಳಿಂದ ಕೂಡಿದ ಮಾಯೆಗೇ ಮೂಲಾವಿದ್ಯೆ, ಭಾವರೂಪಾಜ್ಞಾನ ಎಂದು ವ್ಯವಹಾರವಿದೆ. ಪ್ರತಿ ಯೊಬ್ಬ ವ್ಯಕ್ತಿಗೂ ಅಥವಾ ಜೀವರಿಗೂ ಸಂಬಂಧಿಸಿರುವ ಇದರ ಭಾಗಕ್ಕೆ ಲಿಂಗವೆಂದು ಹೇಳಿದೆ. ಈ ಲಿಂಗವು ಸಾಕ್ಷಿಯಾದ ಚಿತ್ತಿನ ಎದುರಿಗೆ ತೋರುತ್ತದೆ. ಅದರಲ್ಲಿ ಚಿತ್ ಚೈತನ್ಯದ ಪ್ರತಿಬಿಂಬವು ಮೂಡುತ್ತದೆ. ಆಮೇಲೆ ಸೂಕ್ಷ್ಮ ಮತ್ತು ಸ್ಥೂಲ ದೇಹಗಳೊಡನೆ ಅಭಿಮಾನಿಕ ಸಂಬಂಧ ಎಂದರೆ ನಾನು, ನನ್ನದು ಎಂಬ ಅಭಿಮಾನ ದಿಂದ ಸಂಬಂಧವನ್ನು ಪಡೆಯುತ್ತದೆ. ಹೀಗೆ ಸಂಬದ್ಧವಾದ ಚೈತನ್ಯಕ್ಕೇ ಜೀವ ನೆಂದು ವ್ಯವಹಾರವಿದೆ. ಈ ಜೀವನು ಈ ಪ್ರಪಂಚದಲ್ಲಿ, ಈ ಸಂಸಾರದಲ್ಲಿ ತೊಡಗಿ ರುತ್ತಾ ವ್ಯಾವಹಾರಿಕಜೀವನೆನಿಸಿಕೊಳ್ಳುತ್ತಾನೆ.

ಅಸ್ಯ ಜೀವತ್ವಮಾರೋಪಾತ್ಸಾಕ್ಷಿಣ್ಯಪ್ಯವಭಾಸತೆ ।
ಆವೃತೌ ತು ವಿನಷ್ಟಾಯಾಂ ಭೇದೇ ಯಾ*ತೇ ಪ್ರಯಾತಿ ತತ್*॥(ಭಾ)

ಇವನ ಜೀವತ್ವವು ಸಾಕ್ಷಿಚೈತನ್ಯದಲ್ಲೂ ಭ್ರಾಂತಿಯಿಂದಲೂ, ಸಾನ್ನಿಧ್ಯ ದಿಂದಲೂ ತೋರುತ್ತದೆ. ಒಂದು ವಸ್ತುವಿನಲ್ಲಿ ಇಲ್ಲದ ಧರ್ಮವನ್ನು ಅದರಲ್ಲಿರುವಂತೆ ತಿಳಿಯುವಿಕೆಗೆ ಆರೋಪವೆಂದು ವ್ಯವಹಾರವಿದೆ. ಈ ಆವರಣವು, ಭ್ರಾಂತಿರೂಪ ವಾದ ಈ ಮುಸುಕು, ಜ್ಞಾನದಿಂದ ನಷ್ಟವಾದರೆ, ಭೇದವು ಎಂದರೆ ಚೈತನ್ಯವು ನಿತ್ಯ ಜ್ಞಾನಸ್ವರೂಪವಾದುದು, ಮಾಯೆಯು ಅನಿತ್ಯವೂ ತೋರಿಕೆಯ ರೂಪವುಳ್ಳುದೂ ಆಗಿದೆ ಎಂಬ ವಿವೇಚನೆಯು, ಸ್ಫುರಿಸಿದ ಕೂಡಲೇ ಆ ಅಜ್ಞಾನದ ಮುಸುಕೂ, ಆ ಭ್ರಾಂತಿಯ ಆರೋಪವೂ ನಷ್ಟವಾಗುತ್ತದೆ.

ತಥಾ ಸರ್ಗಬ್ರಹ್ಮಣೋಶ್ಚ ಭೇದಮಾವೃತ್ಯ ತಿಷ್ಠತಿ ।
ಯಾ ಶಕ್ತಿಸ್ತದ್ವಶಾದ್ಬ್ರಹ್ಮ ವಿಕೃತತ್ವೇನ ಭಾಸತೇ ॥

ಹಾಗೆಯೇ ಈ ಮಾಯಾಶಕ್ತಿಯ ಪ್ರಭಾವದಿಂದ ಈ ಪ್ರಪಂಚ ಮತ್ತು ಬ್ರಹ್ಮ ಇವಕ್ಕೂ ಇರುವ ವ್ಯತ್ಯಾಸವು, ವಿಶೇಷವು ಮರೆಯಾಗಿ ಇರುತ್ತದೆ. ಈ ಶಕ್ತಿಯ ಮಹಿಮೆಯಿಂದ ಬ್ರಹ್ಮವೂ ಪ್ರಪಂಚರೂಪವನ್ನು ಹೊಂದಿ ಮಾರ್ಪಡುತ್ತಿರುವಂತೆ ತೋರುತ್ತದೆ. ಹೀಗೆ ನಿರ್ವಿಕಾರಿಯೂ ನಿರ್ಗುಣವೂ ನಿರಾಕಾರವೂ ಆದ ಶುದ್ಧ ಬ್ರಹ್ಮಚೈತನ್ಯವೂ, ವಿಕಾರಿಯೂ ಸಗುಣವೂ ಸಾಕಾರವೂ ಆಗಿ, ಜೀವರು, ಪ್ರಪಂಚ, ಸಂಸಾರಗಳಂತೆ ತೋರುತ್ತಿರುತ್ತದೆ.

ಅತ್ರಾಪ್ಯಾವೃತಿನಾಶೇನ ವಿಭಾತಿ ಬ್ರಹ್ಮಸರ್ಗಯೋಃ ।
ಭೇದಸ್ತಯೋರ್ವಿಕಾರಸ್ಸ್ಯಾತ್ಸರ್ಗೇ ನ ಬ್ರಹ್ಮಣಿ ಕ್ವಚಿತ್ ॥

ಇಲ್ಲಿಯೂ ಆವರಣವು ನಷ್ಟವಾಗುವುದರಿಂದ ಪ್ರಪಂಚ ಮತ್ತು ಬ್ರಹ್ಮ ಇವಕ್ಕೆ ಇರುವ ಭೇದವು ಗೊತ್ತಾಗುತ್ತದೆ. ಈ ತೋರುವಿಕೆಯ ವಿಕಾರವು ಅನಿತ್ಯವೂ ಜನ್ಯವೂ ಆದುದರಿಂದ ಪ್ರಪಂಚದಲ್ಲಿದೆಯೇ ಹೊರತು ನಿತ್ಯವಾದ ಜ್ಞಾನಸ್ವರೂಪ ವಾದ ಬ್ರಹ್ಮನಲ್ಲಿ ಎಲ್ಲಿಯೂ ಯಾವಾಗಲೂ ಇರುವುದಲ್ಲವು.

ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಂ ।
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋ ದ್ವಯಂ ॥

ಪ್ರತಿಯೊಂದು ಪದಾರ್ಥದಲ್ಲೂ ಐದು ಅಂಶಗಳು ತೋರುತ್ತವೆ. ಅಸ್ತಿ=ಇರುವಿಕೆಯು, ಇದೆ ಇದೆ ಎಂಬ ಪ್ರತೀತಿಗೆ ಗೋಚರವಾಗಿರುವಿಕೆಯು; ಭಾತಿ=ತೋರುವಿಕೆಯು, ತಿಳಿವಳಿಕೆಗೆ ವಿಷಯವಾಗುವಿಕೆಯು: ಪ್ರಿಯಂ=ಬೇಕೆನ್ನಿಸುವಿಕೆಯು, ಆಕರ್ಷಿಸುವಿಕೆಯು: ರೂಪಂ–ಆಕಾರಗಳು, ನಾಮ=ಹೆಸರುಗಳು. ಈ ಐದರ ಪೈಕಿ ಮೊದಲಿನ ಮೂರು ಬ್ರಹ್ಮಚೈತನ್ಯದ ವಿಶೇಷಧರ್ಮಗಳಾಗಿವೆ. ಉಳಿದ ಎರಡು ಈ ಪ್ರಪಂಚದ ವಿಶೇಷಧರ್ಮಗಳಾಗಿವೆ.

ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನಂದತತ್ಪರಃ ।
ಸಮಾಧಿಂ ಸರ್ವದಾ ಕುರ್ಯಾದ್ಧೃದಯೇವಾಥವಾ ಬಹಿಃ ॥

ಆದುದರಿಂದ ಉಪಾಸಕರೂ ತತ್ತ್ವವನ್ನು ತಿಳಿಯಬಯಸುವವರೂ ಈ ಅನಿತ್ಯವಾದ ಕಲ್ಪಿತವಾದ ಮತ್ತು ಬದಲಾಯಿಸುವ ನಾಮರೂಪಗಳನ್ನು ಉದಾಸೀನ ಮಾಡಿ, ಅವು ಮುಖ್ಯವಲ್ಲವೆಂದು ತಿಳಿದು, ಅವನ್ನು ಮೀರಿ ಉಳಿದ ಮೂರು ಅಂಶಗಳಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಆ ಮೂರರಲ್ಲಿ ಅಸ್ತಿ ಎಂಬುದು ಸದಂಶವನ್ನೂ, ಭಾತಿ ಎಂಬುದು ಚಿದಂಶವನ್ನೂ, ಪ್ರಿಯಂ ಎಂಬುದು ಆನಂದಾಂಶ ವನ್ನೂ ತಿಳಿಸುತ್ತದೆ. ಆದುದರಿಂದ ಬ್ರಹ್ಮತತ್ತ್ವವು ಸಚ್ಚಿದಾನಂದರೂಪವಾದುದೆಂದು

ಸಿದ್ಧಾಂತಮಾಡಿರುತ್ತಾರೆ. ಈ ಸಚ್ಚಿದಾನಂದ ಬ್ರಹ್ಮತತ್ತ್ವದಲ್ಲಿ ಉಪಾಸಕನು ಆದರವುಳ್ಳವನಾಗಿ ಧ್ಯಾನಮಾಡಬೇಕು. ಹೀಗೆ ಈ ತತ್ತ್ವವನ್ನು ಒಳಗೆ ಹೃದಯದಲ್ಲಾಗಲಿ, ಹೊರಗೆ ನಾಮರೂಪಗಳುಳ್ಳ ಸಗುಣಮೂರ್ತಿಯಲ್ಲಾಗಲೀ ಉಪಾಸನೆಯನ್ನು ಮಾಡುತ್ತಾ, ಮನಸ್ಸನ್ನು ಏಕಾಗ್ರವಾಗಿ ಮಾಡಿ, ಸಮಾಧಿಯನ್ನು ಪಡೆಯಬೇಕು. ಉಪಾಸಕನು ಈ ಸಮಾಧಿಸ್ಥಿತಿಯನ್ನು ಪಡೆಯಲು ಯಾವಾಗಲೂ ಅಭ್ಯಾಸಮಾಡುತ್ತಿರಬೇಕು.

ಸವಿಕಲ್ಪೋ ನಿರ್ವಿಕಲ್ಪಸ್ಸಮಾಧಿರ್ದ್ವಿವಿಧೋ ಹೃದಿ ।
ದೃಶ್ಯಶಬ್ದಾನುವೇಧೇನ ಸವಿಕಲ್ಪಃ ಪುನರ್ದ್ವಿಧಾ ॥

ಈ ಸಮಾಧಿಯು ಸವಿಕಲ್ಪವೆಂದೂ ನಿರ್ವಿಕಲ್ಪವೆಂದೂ ಎರಡು ಬಗೆಯಾಗಿದೆ. ಈ ಸವಿಕಲ್ಪಸಮಾಧಿಯಲ್ಲೂ ದೃಶ್ಯವಸ್ತುಸಹಿತವೆಂದೂ ಶಬ್ದಸಹಿತವೆಂದೂ ಎರಡು ಬಗೆಯು ಇದೆ. ಈ ದೃಶ್ಯ ಮತ್ತು ಶಬ್ದ ಇವುಗಳನ್ನು ಉದಾಸೀನಮಾಡಿ ಆವೆರಡನ್ನೂ ಅಪೇಕ್ಷಿಸದೆ ಇರುವ ಸಮಾಧಿಗೆ ನಿರ್ವಿಕಲ್ಪಸಮಾಧಿ ಎಂದು ಹೆಸರು.

ಕಾಮಾದ್ಯಾಶ್ಚಿತ್ತಗಾ ದೃಶ್ಯಾಸ್ತತ್ಸಾಕ್ಷಿತ್ವೇನ ಚೇತನಂ ।
ಧ್ಯಾಯೇದ್ದೃಶ್ಯಾನುವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥

ಮನಸ್ಸಿನಲ್ಲಿ ಉಂಟಾಗುತ್ತಲೂ ಮರೆಯಾಗುತ್ತಲೂ ಇರುವ ಇಚ್ಛಾಮುಂತಾದ ವೃತ್ತಿಗಳು ದೃಶ್ಯಗಳು. ಈ ದೃಶ್ಯಗಳಿಗೆ ಸಾಕ್ಷಿಯಾಗಿರುವುದು ಚೈತನ್ಯವು. ಇದರಲ್ಲಿ ಮನಸ್ಸನ್ನು ಏಕಾಗ್ರವಾಗಿ ನೆಲಸುವಂತೆ ಮಾಡಿರುವ ಸ್ಥಿತಿಗೆ ಸವಿಕಲ್ಪ ಸಮಾಧಿ ಎಂದು ವ್ಯವಹಾರವು.

ಅಸಂಗಸ್ಸಚ್ಚಿದಾನಂದಸ್ಸ್ವಪ್ರಭೋ ದ್ವೈತವರ್ಜಿತಃ ।
ಅಸ್ಮೀತಿ ಶಬ್ದವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥

ಈ ಜೀವಚೈತನ್ಯವು ಅದರ ವಾಸ್ತವಸ್ವರೂಪದಲ್ಲಿ ಈ ದೃಶ್ಯಗಳೊಡನೆ ನಾನು ನನ್ನದು ಎಂಬ ಸಂಬಂಧವುಳ್ಳುದಲ್ಲವು, ಮತ್ತೇನೆಂದರೆ ಅದು ಸಚ್ಚಿದಾನಂದಸ್ವರೂಪವಾದುದು, ಸ್ವಯಂಪ್ರಕಾಶಮಾನವಾದುದು ಎಂದರೆ ಅದನ್ನು ತಿಳಿಯಲು ಮತ್ತೊಂದು ಪ್ರಕಾಶಕಸಾಮಗ್ರಿಯ ಸಹಾಯವು ಬೇಕಿಲ್ಲದೆ ತನಗೆ ತಾನೇ ತಿಳಿದುಬರುವಂತಹುದು. ಮತ್ತು ಅದು ಪಾರಮಾರ್ಥಿಕಸ್ಥಿತಿಯಲ್ಲಿ ಎರಡನೆಯ ವಾಸ್ತವಪದಾರ್ಥವಿಲ್ಲದ್ದಾಗಿರುವುದು ಎಂದು, ಇಂತಹ ಚೈತನ್ಯವೇ ನಾನಾಗಿದೇನೆ, ಎಂದು ಉಪಾಸನೆಮಾಡುವುದು ಶಬ್ದಸಹಿತವಾದ ಸವಿಕಲ್ಪಸಮಾಧಿ ಎನಿಸುವುದು. ಈ ಎರಡು ಸಮಾಧಿಗಳಲ್ಲೂ

ದೃಕ್=ನೋಡುವ ಚೇತನ, ದೃಶ್ಯ=ನೋಡಿಸಿಕೊಳ್ಳುವ ವಸ್ತು, ದರ್ಶನ=ನೋಡುವಿಕೆ ಎಂಬ ತ್ರಿಪುಟಿಯು ತೋರುತ್ತದೆ. ಆದುದರಿಂದ ಇವೆರಡಕ್ಕೂ ಸವಿಕಲ್ಪ ಸಮಾಧಿ ಎಂದು ವ್ಯವಹಾರವಿದೆ.

ಸ್ವಾನುಭೂತಿರಸಾವೇಶಾತ್ ದೃಶ್ಯ ಶಬ್ದಾವುಪೇಕ್ಷ್ಯತು ।
ನಿರ್ವಿಕಲ್ಪಸಮಾಧಿಸ್ಸ್ಯಾನ್ನಿವಾತಸ್ಥಿತದೀಪವತ್ ।
ಹೃದಿ ವಾ ಬಾಹ್ಯದೇಶೇಽಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ ॥
ಸಮಾಧಿರಾದ್ಯಸ್ಸನ್ಮಾತ್ರಾ ನ್ನಾಮರೂಪಪೃಥಕ್ಕೃತಿಃ ।
ಸ್ತಬ್ಧೀಭಾವೋ ರಸಾಸ್ವಾದಾತ್ತೃತೀಯಃ ಪೂರ್ವವನ್ಮತಃ ॥

ಈ ಸವಿಕಲ್ಪಸಮಾಧಿಯಲ್ಲಿ ಸಿದ್ಧಿಯಾದಮೇಲೆ ಎಂದರೆ ಮನಸ್ಸಿಗೆ ಈ ಎರಡು ಬಗೆಯ ಸ್ಥಿತಿಯಲ್ಲಿ ಅಚಲವಾಗಿ ನೆಲೆಸಿರುವ ಶಕ್ತಿಯು ಬಂದಮೇಲೆ ಇವೆರಡನ್ನೂ ಮೀರಿ, ದಾಟಿ, ನಿರ್ವಿಕಲ್ಪಸಮಾಧಿಗೆ ಉಪಾಸಕನು ತಲಪುತ್ತಾನೆ. ಅಲ್ಲಿ ಮನಸ್ಸು ಗಾಳಿ ಇಲ್ಲದ ಪ್ರದೇಶದಲ್ಲಿರುವ ದೀಪದ ಜ್ವಾಲೆಯಂತೆ ಅಚಂಚಲವಾಗಿ ಏಕಾಗ್ರವಾಗಿರುತ್ತದೆ. ಆಗ ದೃಗ್ವಸ್ತುವು ಎಂದರೆ ನೋಡುವ ಚೈತನ್ಯವು ದೃಶ್ಯವಸ್ತು ಮತ್ತು ಅದನ್ನು ಹೇಳುವ ಶಬ್ದಗಳ ಅಪೇಕ್ಷೆ ಇಲ್ಲದೆ ಸ್ವಸ್ವರೂಪವನ್ನು ತೀವ್ರವಾಗಿ ಗಾಢವಾಗಿ ಅನುಭವಿಸುತ್ತಾ ಆನಂದಪರವಶನಾಗಿರುವ ಸ್ಥಿತಿಯು ಉಂಟಾಗುತ್ತದೆ. ಇದಕ್ಕೆ ನಿರ್ವಿಕಲ್ಪಸಮಾಧಿ ಎಂದು ಹೆಸರು.

ಈ ಮೂರುಬಗೆಯ ಸಮಾಧಿಗಳೂ ಉಪಾಸಕನಿಗೆ ತನ್ನ ಶರೀರದೊಳಗಡೆಯಲ್ಲಿ ಸಾಧಿಸಬಹುದಾದಂತಹವು. ಇವುಗಳಂತೆಯೇ ದೇಹದ ಹೊರಗೆ ಪ್ರಪಂಚದಲ್ಲೂ ಯಾವುದಾದರೊಂದು ಸುಗುಣಸಾಕಾರಮೂರ್ತಿಯನ್ನು ಎಂದರೆ ದೇವರ ವಿಗ್ರಹ, ಸಾಲಿಗ್ರಾಮ, ಅಥವಾ ಲಿಂಗ ಮುಂತಾದ ಪ್ರತೀಕವನ್ನಾಗಲೀ ಅದನ್ನು ಹೇಳುವ ಶಬ್ದವನ್ನಾಗಲೀ ಅವಲಂಬಿಸಿ ಮನಸ್ಸನ್ನು ಅದರಲ್ಲಿಯೇ ಏಕಾಗ್ರವಾಗಿ ನಿಲ್ಲಿಸುವುದಕ್ಕೂ ಸವಿಕಲ್ಪಸಮಾಧಿ ಎಂದು ಹೆಸರು.

ಹೀಗೆ ಉಪಾಸಕನು ತನ್ನ ಹೃದಯದಲ್ಲಿ ಹೇಗೋ ಹಾಗೆ, ಹೊರಗಿನ ಪ್ರಪಂಚದಲ್ಲೂ ಯಾವುದಾದರೊಂದು ವಸ್ತುವಿನಲ್ಲಿ ಮನಸ್ಸನ್ನು ನೆಲಸುವಂತೆ ಅಭ್ಯಾಸದಿಂದ ಸಾಧಿಸುವುವಕ್ಕೆ ಮೊದಲನೆಯ ಸವಿಕಲ್ಪಸಮಾಧಿ ಎಂದು ಹೆಸರು. ಆ ಸಮಾಧಿ ಸ್ಥಿತಿಯಲ್ಲಿಯೇ ಕ್ರಮವಾಗಿ ನಾಮರೂಪಗಳನ್ನು ಎಂದರೆ ಶಿವ ವಿಷ್ಣು ದೇವೀ

ಮುಂತಾದ ಹೆಸರುಗಳನ್ನೂ ದೇವೀ, ಶಕ್ತಿ, ಮುಂತಾದ ಸ್ತ್ರೀತ್ವ, ಶಿವ, ವಿಷ್ಣು, ಮುಂತಾದ ಪುಂಸ್ತ್ವ, ಹರಿಹರ, ಅರ್ಧನಾರೀಶ್ವರ, ಮುಂತಾದ ಸಂಯುಕ್ತತ್ವ, ರೂಪಗಳನ್ನೂ ವಿವೇಚನೆಯಿಂದ ಬೇರ್ಪಡಿಸಿ, ದಾಟಿ, ಅವೆಲ್ಲವುಗಳಲ್ಲೂ ಸಮವಾಗಿ ವ್ಯಾಪಿಸಿ ಒಳಗೂ ಹೊರಗೂ ಇರುವ ಬ್ರಹ್ಮಚೈತನ್ಯದ ಸ್ವರೂಪವನ್ನು ಧ್ಯಾನಿಸುತ್ತಿರುವುದಕ್ಕೆ ಎರಡನೆಯ ಸವಿಕಲ್ಪಸಮಾಧಿ ಎನ್ನಬಹುದು.

ಈ ಸಮಾಧಿಸ್ಥಿತಿಯಲ್ಲೂ ಉಪಾಸಕನಾದ ಜ್ಞಾನಿಯು ಸಚ್ಚಿದಾನಂದಸ್ವರೂಪವಾದ ಬ್ರಹ್ಮಚೈತನ್ಯವನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತಾ, ಕಡೆಗೆ ಆ ಆನಂದಾನುಭವದ ಅತಿಶಯದಲ್ಲಿ ಜ್ಞಾತೃ ಜ್ಞೇಯ ಜ್ಞಾನ ಎಂಬ ತ್ರಿಪುಟಿಯನ್ನೂ ಮೀರಿ, ಅದೇ ತಾನಾಗಿರುವಂತೆಯೂ, ತಾನೇ ಅದಾಗಿರುವಂತೆಯೂ, ಅಪರೋಕ್ಷಾನುಭವದಿಂದ ಸಾಕ್ಷಾತ್ಕರಿಸುತ್ತಾನೆ. ಇಂತಹ ಸ್ಥಿತಿಗೆ ನಿರ್ವಿಕಲ್ಪಸಮಾಧಿ ಎನ್ನಬಹುದು. ಆಗ ಉಪಾಸಕನು 'ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ' ಎಂದು ಭಗವದ್ಗೀತೆಯಲ್ಲಿ ವರ್ಣಿಸಿರುವ ಯೋಗಸಿದ್ಧಿಯಲ್ಲಿರುತ್ತಾನೆ.

ಏತೈಸ್ಸಮಾಧಿಭಿಷ್ಷಡ್ಭಿರ್ನಯೇತ್ಕಾಲಂ ನಿರಂತರಂ ||

ಈ ಮೇಲೆ ವಿವರಿಸಿರುವ ಆರುಬಗೆಯ ಸಮಾಧಿಗಳಲ್ಲಿ ಉಪಾಸಕರು ತಮ್ಮ ತಮ್ಮ ಯೋಗ್ಯತೆ ಶಕ್ತಿಗಳಿಗೂ, ತಾವು ಪಡೆದಿರುವ ಸಂಸ್ಕೃತಿಯ ಅಂತಸ್ತಿಗೂ ತಕ್ಕಂತಹುದನ್ನು ಆರಿಸಿಕೊಂಡು, ಅದನ್ನು ನಿರಂತರವಾಗಿ ಅಭ್ಯಾಸಮಾಡುತ್ತಾ ಮುಂದುವರಿಯುತ್ತಿರಬೇಕು.

ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ ।
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಪರಾಮೃತಂ ||

ಈ ದೇಹದಲ್ಲಿ ಉಪಾಸಕನಿಗೆ ನಾನು ನನ್ನದು ಎಂಬ ಅಭಿಮಾನವೂ ಸಡಿಲವಾಗುತ್ತಾ ಕಡೆಗೆ ನಷ್ಟವಾಗುತ್ತದೆ. ಆಗ ಶ್ರೇಷ್ಠವಾದ ಆತ್ಮಸ್ವರೂಪವು, ಜೀವಾತ್ಮರೂ ಪರಮಾತ್ಮನೂ ಸಚ್ಚಿದಾನಂದಸ್ವರೂಪದಲ್ಲಿ ಅಭಿನ್ನರು, ಎಂಬ ತತ್ತ್ವವು ಅಪರೋಕ್ಷಾನುಭವದ ಸಾಕ್ಷಾತ್ಕಾರವಾಗುತ್ತದೆ. ಅಂತಹ ಉತ್ತಮಸ್ಥಿತಿಯನ್ನು ಪಡೆದಮೇಲೆ ಜೀವನ್ಮುಕ್ತಸ್ಥಿತಿಯು ಉಂಟಾಗುವುದು. ಆಗ ಮನಸ್ಸು ಯಾವ ವಿಷಯದಲ್ಲಿ ಹೇಗೆ ಇದ್ದರೂ ಆಗ ಅವುಗಳಲ್ಲೆಲ್ಲ ನಿತ್ಯಸುಖಾನುಭವವೇ ಆಗಿರುತ್ತದೆಯೇ ಹೊರತು ದುಃಖಾನುಭವವಾಗುವುದಿಲ್ಲ. ಇಂತಹ ಯೋಗಿಯು ಗುಣತ್ರಯವನ್ನು ಮೀರಿ, ವಿಧಿ ನಿಷೇಧಗಳನ್ನು ದಾಟಿದವನಾಗಿರುತ್ತಾನೆ.

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

ಆಗ ಉಪಾಸಕನ, ಜ್ಞಾನಿಯ ಹೃದಯದಲ್ಲಿ ಇದುವರಿಗೂ ಪ್ರಬಲವಾಗಿರುತ್ತಿದ್ದ ಚಿದಚಿದ್ಗ್ರಂಥಿಯು, ಎಂದರೆ ಚಿದ್ರೂಪನಾದ ಜೀವನೂ, ಅ ಚಿದ್ರೂಪವಾದ ಜಡವಾದ ಶರೀರ ಮುಂತಾದ ಪ್ರಪಂಚವೂ, ಇವೆರಡೂ ಸೇರಿಕೊಂಡಿರುವಿಕೆಯು, ಜ್ಞಾನದಿಂದ, ವಿವೇಚನೆಯಿಂದ, ನಿತ್ಯಾನಿತ್ಯ ವಿವೇಕದಿಂದ, ಸುಖದುಃಖವಿವೇಚನೆಯಿಂದ ಬಿಚ್ಚಿಹೋಗುತ್ತದೆ. ಎಲ್ಲ ಬಗೆಯ ಸಂದೇಹಗಳೂ ನಷ್ಟವಾಗುತ್ತವೆ. ಅಂಥವನ ಕರ್ಮಗಳೆಲ್ಲವೂ ನಷ್ಟವಾಗುತ್ತವೆ, ಎಂದರೆ ಅಂತಹ ಕರ್ಮಗಳು ಜ್ಞಾನಿಗಳಲ್ಲದವರಿಗೆ ಹೇಗೆ ಸುಖದುಃಖಗಳೆಂಬ ಫಲಗಳನ್ನು ಉಂಟುಮಾಡುತ್ತವೋ ಹಾಗೆ, ಜ್ಞಾನಿಯಾದವನಿಗೆ ಉಂಟುಮಾಡಲಾರವು. ಏಕೆಂದರೆ ತತ್ತ್ವಜ್ಞಾನವಿಲ್ಲದ ನಮ್ಮಂತಹವರು ಅನಿತ್ಯವಾದುದನ್ನು ನಿತ್ಯವೆಂದೂ, ಅಸುಖಕರವಾದುದನ್ನು ಸುಖಕರವೆಂದೂ, ಭ್ರಾಂತಿಯಿಂದ ನಂಬಿ ಕರ್ಮಗಳನ್ನು, ಅದರಲ್ಲೂ ವಿಶೇಷವಾಗಿ, ಕಾಮ್ಯ ಕರ್ಮಗಳನ್ನೂ ಮಾಡುತ್ತಾ ಫಲಸಿದ್ಧಿಯಾದರೆ ಅಹಂಕಾರದಿಂದ ಮೆರೆಯುತ್ತಲೂ, ಫಲಿಸದೇ ಹೋದರೆ ದುಃಖದಿಂದ ತಗ್ಗುತ್ತಲೂ ಇರುತ್ತೇವೆ. ಆದರೆ ವೇದಾಂತ ವಿಚಾರದಿಂದ, ಉಪನಿಷತ್ತಿನಲ್ಲಿ ಹೇಳಿರುವ ತತ್ತ್ವವನ್ನು ತಿಳಿಯುವುದರಿಂದ, ಅನಿತ್ಯವೂ ಸಾತಿಶಯವೂ ದೋಷದುಃಖಮಿಶ್ರಿತವೂ ಆಗಿರುವ ಐಹಿಕ ಆಮುಷ್ಮಿಕ ಫಲಗಳಲ್ಲಿ ರಾಗವನ್ನೂ, ಅದಕ್ಕೆ ಅಡ್ಡಿಬಂದರೆ ದ್ವೇಷ ಮುಂತಾದುವನ್ನೂ ಬಿಡುತ್ತೇವೆ. ಈ ತಿಳುವಳಿಕೆಯಿಂದ ನಿಷ್ಕಾಮಕರ್ಮಾಚರಣೆಯು ಸ್ವಾಭಾವಿಕವಾಗಿ ಉಂಟಾಗುತ್ತದೆ. ಅದರಿಂದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳು ನಷ್ಟವಾಗುತ್ತವೆ. ಆಗ ವೈರಾಗ್ಯವು ಉಂಟಾಗುತ್ತದೆ. ಹೀಗೆ ಜ್ಞಾನ ವೈರಾಗ್ಯಗಳಿಂದ ನಮ್ಮ ಕರ್ಮಗಳು ಹುರಿದ ಬೀಜಗಳಂತೆ ಮೊಳಕೆಯಾಗದೆ ನಷ್ಟವಾದಂತಾಗುತ್ತವೆ. ಪ್ರಾರಬ್ಧಕರ್ಮದ ಫಲವು ಈ ದೇಹವಿರುವವರೆಗೆ ಅನುಭವಿಸಿ ಮುಗಿದುಹೋಗುತ್ತದೆ. ಮುಂದಿನ ದೇಹಕ್ಕೆ ಕಾರಣವಾಗಬಹುದಾಗಿದ್ದ ಇತರ ಕರ್ಮಗಳೆಲ್ಲವೂ ಜ್ಞಾನದಿಂದ ನಷ್ಟವಾಗಿ, ವಿದೇಹಕೈವಲ್ಯವೆಂಬ ಮೋಕ್ಷವಾಗುತ್ತದೆ ಎಂದು ತಾತ್ಪರ್ಯವು. ಆದುದರಿಂದ ಈ ಜಗತ್ತಿನಲ್ಲಿರುವ ಮೇಲಾದ ಕೀಳಾದ ಎಲ್ಲ ಪದಾರ್ಥಗಳಲ್ಲೂ ಒಂದೇ ಸಮನಾಗಿರುವ, ಅವೆಲ್ಲದರಲ್ಲೂ ಅವನ್ನೂ ಮೀರಿ ಎಲ್ಲೆಡೆಯಲ್ಲೂ ವ್ಯಾಪಿಸಿರುವ, ಪರಬ್ರಹ್ಮಚೈತನ್ಯವೆಂಬ ತತ್ತ್ವವನ್ನೂ ಸಾಕ್ಷಾತ್ಕರಿಸಿಕೊಂಡಮೇಲೆ, ಆ ಪರತತ್ತ್ವವೂ ಜೀವನೂ ಪಾರಮಾರ್ಥಿಕವಾಗಿ ಸಚ್ಚಿದಾನಂದ ರೂಪದಲ್ಲಿ ಅಭಿನ್ನರು ಎಂಬ ಜೀವಬ್ರಹ್ಮೈಕ್ಯವನ್ನು ಅಪರೋಕ್ಷಾನುಭವದಿಂದ ಸಾಕ್ಷಾತ್ಕರಿಸಿಕೊಂಡಮೇಲೆ, ಅಲ್ಲಿಯೇ ಆಗಲೇ ಸಂಸಾರ ದುಃಖದಿಂದ ಬಿಡುಗಡೆ ಎಂಬ ಮೋಕ್ಷವಾಗುತ್ತದೆ ಎಂಬುದು ಭಾವವು.

ಮಯಿ ಜೀವತ್ವಮೀಶತ್ವಂ ಕಲ್ಪಿತಂ ವಸ್ತುತೋ ನಹಿ ।
ಇತಿ ಯಸ್ತು ವಿಜಾನಾತಿ ಸ ಮುಕ್ತೋ ನಾತ್ರಸಂಶಯಃ ॥

॥ ಇತ್ಯುಪನಿಷತ್ ॥

ಸರಸ್ವತೀದೇವಿಯು ವೇದಾಂತತತ್ತ್ವವನ್ನು ಹೀಗೆ ವಿವರಿಸಿ, ಕಡೆಗೆ ಮುಖ್ಯವಾದ ಅಂಶವನ್ನು ತಿಳಿಸಿ ಮುಗಿಸುತ್ತಾಳೆ. ಓ ಋಷಿಗಳಿರಾ, ನನ್ನಲ್ಲಿಯೇ ಜೀವತ್ವವೂ ಈಶ್ವರತ್ವವೂ ಸಮವಾಗಿ ಕಲ್ಪಿತವಾಗಿವೆ. ಇವೆರಡೂ ಸಮವಾಗಿ ಅವಾಸ್ತವವಾದಂತಹವು. ಜೀವನಮೇಲೆ ಅಧಿಕಾರ ಮಾಡುತ್ತಿರುವ ಅವಿದ್ಯೆಯೂ, ಅಜ್ಞಾನವೂ, ಈಶ್ವರನಿಗೆ ಅಧೀನವಾಗಿ ಸೃಷ್ಟ್ಯಾದಿಗಳನ್ನು ನೆರವೇರಿಸುತ್ತಿರುವ ಮಾಯೆಯೂ ಪರತತ್ತ್ವದ ಅಜ್ಞಾನದಿಂದ ಕಲ್ಪಿತವಾಗಿವೆ. ಜ್ಞಾನದಿಂದ ಅವು ನಷ್ಟವಾಗಿ ಜೀವಚೈತನ್ಯವೂ ಈಶ್ವರಚೈತನ್ಯವೂ ಸಚ್ಚಿದಾನಂದರೂಪದಲ್ಲಿ ಏಕವಾಗಿ, ಪರಬ್ರಹ್ಮರೂಪವಾಗಿ, ಎಂದಿನಂತೆ ಉಳಿದಿರುವಿಕೆಯೇ ಮೋಕ್ಷವು. ಹೀಗೆಂಬ ತಿಳಿವಳಿಕೆಯನ್ನು ಯಾರು ವೇದಾಂತವಿಚಾರ ಉಪಾಸನೆಗಳಿಂದ ಅಪರೋಕ್ಷಾನುಭವದಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೋ ಅಂಥವರು ಮುಕ್ತರಾಗುತ್ತಾರೆ.

ಪರತತ್ತ್ವದ ಉಪದೇಶವು ಹೀಗೆ ಮುಗಿದುದು.

ಓಂ ವಾಙ್ಮೇ ಮನಸಿ ಇತಿ ಶಾಂತಿಃ ॥

ಓಂ ವಾಙ್ಮೆ ಮನಸಿ ಎಂಬ ಶಾಂತಿಪಾಠವನ್ನು ನಿರ್ವಿಘ್ನವಾಗಿ ಸಿದ್ಧಿಯನ್ನು ಪಡೆಯಲು ಅರ್ಥಜ್ಞಾನಪೂರ್ವಕವಾಗಿ ಹೇಳಿಕೊಳ್ಳಬೇಕು.

ಇತಿ ಸರಸ್ವತೀರಹಸ್ಯೋಪನಿಷತ್ ಸಮಾಪ್ತಾ ॥

ಶ್ರೀ ಸರಸ್ವತೀ ರಹಸ್ಯೋಪನಿಷತ್ತು ಹೀಗೆ ಮುಗಿದುದು.

ಓಂತತ್ಸತ್ ॥

ಎಡತೊರೆ ದೇವಯ್ಯ ದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ.

|| ಶ್ರೀಃ ||

ಅಥ
ಸೌಭಾಗ್ಯಲ

॥ ಶ್ರೀಃ ॥

॥ ಅಥ ಋಗ್ವೇದೀಯ ಸೌಭಾಗ್ಯಲಕ್ಷ್ಮ್ಯುಪನಿಷತ್ ॥

ಋಗ್ವೇದಕ್ಕೆ ಸಂಬಂಧಿಸಿರುವ ಸೌಭಾಗ್ಯಲಕ್ಷ್ಮೀದೇವಿಯ ತತ್ತ್ವಧರ್ಮರಹಸ್ಯವನ್ನು ತಿಳಿಸುವ ಉಪನಿಷತ್ತು ಈಪ್ರಕಾರವಾಗಿದೆ.

ಶಾಂತಿಮಂತ್ರವು

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಂ ।

ಇದರಂತೆಯೇ ಶಾಂತಿಪಾಠಗಳನ್ನು ಪ್ರತಿಯೊಂದು ಉಪನಿಷತ್ತಿನ ಮೊದಲಿನಲ್ಲಿಯೂ ಕಡೆಯಲ್ಲಿಯೂ ಹೇಳಬೇಕೆಂದು ವಿಧಿಯನ್ನು ಅನುಸರಿಸಿ ಬಂದಿರುವ ಈ ಸಂಪ್ರದಾಯಕ್ಕೆ ಉದ್ದೇಶವು ಹೀಗಿದೆ.—"ಶ್ರೇಯಾಂಸಿ ಬಹುವಿಘ್ನಾನಿ" ಎಂದರೆ ಸಾಮಾನ್ಯವಾಗಿ ಒಳ್ಳೆಯ ಕೆಲಸಗಳಿಗೆ ಅಡ್ಡಿಗಳು ಹಲವು ಬಗೆಯಾಗಿ ಬಂದೊದಗುವದುಂಟು. ಅಂತಹ ವಿಘ್ನಗಳನ್ನು, ಅವುಗಳಲ್ಲೂ ಮಾನವನ ತಿಳಿವಳಿಕೆಗೆ ಬಾರದೆಯೂ, ಅವನ ಯತ್ನಕ್ಕೆ ಮೀರಿಯೂ, ಇರಬಹುದಾದಂತಹ ಅಡ್ಡಿಗಳನ್ನು, ಪರಿಹರಿಸಲು ದೇವತೆಗಳ ಸಹಾಯವನ್ನು ಈ ಶಾಂತಿಮಂತ್ರಗಳಲ್ಲಿ ಪ್ರಾರ್ಥಿಸಿರುತ್ತದೆ. ಕಡೆಯಲ್ಲಿಯೂ ಶಾಂತಿಮಂತ್ರಗಳನ್ನು ಹೇಳುವುದರಿಂದ ಉಪನಿಷತ್ತಿನಿಂದ ನಮಗೆ ದೊರೆತಿರುವ ತಿಳಿವಳಿಕೆಯು ನಷ್ಟವಾಗದೆ ಸಫಲವೂ ಪರಿಣಾಮಕಾರಿಯೂ ಆಗಿ ಉಳಿಯುವಂತಾಗುತ್ತದೆ.

ಪರತತ್ತ್ವಜ್ಞಾನವನ್ನುಂಟುಮಾಡುವ ಈ ಉಪನಿಷದ್ಗ್ರಂಥದ ಪಾರಾಯಣದಲ್ಲಿ ತೊಡಗಿರುವ ನನ್ನ ವಾಕ್ಕು ಮನಸ್ಸಿನಲ್ಲಿ ಬೇರೂರಿರಲಿ. ಏಕೆಂದರೆ ಮನಸ್ಸಿನಲ್ಲಿ ಯಾವ ಶಬ್ದವನ್ನು ಹೇಳಬೇಕೆಂದು ಇಚ್ಛೆಯು ಇರುತ್ತದೋ ಅದನ್ನೇ ಸಾಮಾನ್ಯವಾಗಿ ಹೇಳುತ್ತೇವೆ. ಹಾಗೆಯೇ ನನ್ನ ಮನಸ್ಸೂ ಆ ಮಾತಿನಲ್ಲಿ ನೆಲಸಿರಲಿ. ತಿಳಿವಳಿಕೆಯನ್ನು ಯಾವ ಮಾತು ತಿಳಿಸಬಲ್ಲುದೋ ಅದನ್ನೇ ಹೇಳಬೇಕೆಂಮ ಇಚ್ಛೆಯೂ ಮನಸ್ಸಿನಲ್ಲಿಸಾಧಾರಣವಾಗಿ ಇರುತ್ತದೆ. ಹೀಗೆ ಪರಸ್ಪರವಾಗಿ ಸಹಕರಿಸುತ್ತಿರುವ ಮನಸ್ಸು ಮತ್ತು ವಾಕ್ಕುಗಳಿಂದಲೇ ತತ್ತ್ವಾರ್ಥವನ್ನು ಸಮಗ್ರವಾಗಿಯೂ

ವಿಶದವಾಗಿಯೂ ತಿಳಿಯಲಾಗುತ್ತದೆ. ಮನಸ್ಸು ಸಮಾಧಾನದಿಂದ ಇರದಿದ್ದರೆ ನಿದ್ರಿಸುತ್ತಿರುವವನ ಅಥವಾ ಹುಚ್ಚನ ಮಾತುಗಳಂತೆ ಅಸಂಗತವಾಗಿರಬಹುದು. ಅಲ್ಲದೆ ಹಾಗೆಯೇ ಮಾತು ಪಟುವಾಗಿರದಿದ್ದರೆ ಧ್ವನಿಯು ಗದ್ಗದವಾಗಿ ಹೇಳಬೇಕಾದಷ್ಟನ್ನು ಪೂರ್ಣವಾಗಿಯೂ ತಕ್ಕಷ್ಟು ಗಟ್ಟಿಯಾಗಿಯೂ ಹೇಳಲಾಗದೆ ಹೋಗಬಹುದು. ಆದುದರಿಂದ ಅವೆರಡಕ್ಕೂ ಎಂದರೆ ವಾಙ್ಮನಸ್ಸುಗಳಿಗೆ ಪರಸ್ಪರವಾಗಿ ಆನುಕೂಲ್ಯ ಸಹಕಾರಗಳು ಇರಲಿ ಎಂದು ಪ್ರಾರ್ಥಿಸಿದೆ.

ಆವಿರಾವೀರ್ಮ ಏಧಿ । ವೇದಸ್ಯ ಮ ಆಣೀಸ್ಥಃ ।
ಶ್ರುತಂ ಮೇ ಮಾ ಪ್ರಹಾಸೀಃ ।

ಆವಿಃ ಎಂಬ ಶಬ್ದವು ಮೊದಲು ಅವ್ಯಕ್ತವಾಗಿದ್ದುದು ಈಗ ವ್ಯಕ್ತವಾಗುವಿಕೆಯನ್ನು ಬೋಧಿಸುತ್ತದೆ. ಆದುದರಿಂದ ನಮ್ಮ ಆತ್ಮಸ್ವರೂಪವಾದ ಚಿಜ್ಜ್ಯೋತಿಯು ಅಥವಾ ಸ್ವಪ್ರಕಾಶ ಬ್ರಹ್ಮಚೈತನ್ಯವು ಎಂದು ತಿಳಿಯಬಹುದು. ಅಂತಹ ಓ ಚೈತನ್ಯವೇ, ನೀನು ನನ್ನ ಬುದ್ಧಿಗೆ ಗೋಚರವಾಗು. ಅವಿದ್ಯೆಯ ಮುಸುಕನ್ನು ತೆಗೆದುಹಾಕಿ ನಿನ್ನ ನಿಜವಾದ ಸ್ವರೂಪವು ಪ್ರಕಟವಾಗುವಂತೆ ಮಾಡು. ಓ ವಾಙ್ಮನಸ್ಸುಗಳೇ, ಅಭಿಮಾನಿದೇವತೆಗಳೇ, ನನಗಾಗಿ ತತ್ತ್ವಜ್ಞಾನವನ್ನುಂಟುಮಾಡಬಲ್ಲ ಉಪನಿಷದ್ವಾಕ್ಯಗಳನ್ನು ಅವುಗಳ ಅರ್ಥದೊಡನೆ ನನಗೆ ತಲಪಿಸುವ ಶಕ್ತಿಯುಳ್ಳವರಾಗಿರಿ. ನಾನು ಅಧ್ಯಯನಮಾಡಿದ ಗ್ರಂಥವೂ, ನಾನು ಕೇಳಿದ ಉಪದೇಶದ ಮಾತಿನ ಅರ್ಥವೂ, ಯಾವಾಗಲೂ ನನ್ನನ್ನು ಬಿಡದೆ ಇರಲಿ. ಹೀಗೆ ತಿಳಿವಳಿಕೆಯು ನಡೆವಳಿಕೆಯನ್ನು ತಪ್ಪದೆ ಮೇಲ್ಪಡಿಸುತ್ತಿರಲಿ.

ಅನೇನಾಧೀತೇನ ಅಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಂ । ಅವತು ವಕ್ತಾರಂ । ಅವತು ವಕ್ತಾರಂ ॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಈ ಅಧ್ಯಯನದೊಡನೆ ನಾನು ಹಗಲು ರಾತ್ರಿಗಳನ್ನು ಕೂಡಿಸಿರುತ್ತೇನೆ. ಎಂದರೆ ನಾನು ಯಾವಾಗಲೂ ಎಡೆಬಿಡದೆ, ಹಗಲಿನಲ್ಲೂ, ರಾತ್ರಿಯಲ್ಲೂ ಒಂದು ಕ್ಷಣಕಾಲವನ್ನೂ ಬೇರೆ ಕೆಲಸವನ್ನು ಮಾಡುವುದರಲ್ಲಿ ವ್ಯರ್ಥವಾಗಿ ಕಳೆಯದೆ, ಬೇಸರ ಆಲಸ್ಯಗಳನ್ನು ಬಿಟ್ಟು, ಈ ಅಧ್ಯಯನ ಅರ್ಥಧ್ಯಾನಗಳಲ್ಲೇ ಆಸಕ್ತನಾಗಿರುತ್ತೇನೆ. ಪರಮಾರ್ಥತತ್ತ್ವವನ್ನು ಮನಸ್ಸಿನಿಂದ ವಿಚಾರಿಸಿ ತಿಳಿದು ಮಾತಿನಿಂದ ಹೇಳುತ್ತಿರುತ್ತೇನೆ. ಆ ಪಾರಮಾರ್ಥಿಕಸತ್ಯವಾದ ಬ್ರಹ್ಮತತ್ತ್ವವು ನನ್ನನ್ನು ಸಮ್ಯಕ್ ಜ್ಞಾನವನ್ನು ಉಂಟುಮಾಡೋಣದರಿಂದ ಕಾಪಾಡಲಿ. ಹಾಗೆಯೇ ನನ್ನ ಗುರುವನ್ನೂ ತತ್ತ್ವವನ್ನು ನನಗೆ ಬೋಧಿಸುವಷ್ಟು ಸಾಮರ್ಥ್ಯವುಳ್ಳವನನ್ನಾಗಿ ಮಾಡಿ ಕಾಪಾಡಲಿ.

ಈ ಪ್ರಕಾರವಾಗಿ ಸಾಧನಕಾಲದಲ್ಲಿ ಹೇಗೋ ಹಾಗೆ ಫಲಕಾಲದಲ್ಲೂ ಎಂದರೆ, ಅಧ್ಯಯನ ಉಪದೇಶಗಳು ಮುಗಿದಮೇಲೂ, ಶಿಷ್ಯನಾದ ನನ್ನಂತಹವನನ್ನು ಅಜ್ಞಾನವನ್ನು ಹೋಗಲಾಡಿಸಿ ಕಾಪಾಡಲಿ; ಗುರುವನ್ನು ತಿಳಿವಳಿಕೆಯ ನಂದಾದೀಪ ವನ್ನು ನಂದದಂತೆ ಕುಂದದಂತೆ ಉಜ್ವಲವಾಗಿರುವಂತೆ ಕಾಪಾಡಿ ಮುಂದಿನ ತಲೆ ಮಾರುಗಳಿಗೆ ಈ ಗುರುಶಿಷ್ಯಪರಂಪರೆಯಿಂದ ಅವಿಚ್ಛಿನ್ನವಾಗಿ ಸಾಗಿಸುವಂತಾದುದರಿಂದ ಉಂಟಾಗುವ ಧನ್ಯತೆಯ ಸಂತೋಷವನ್ನು ಅನುಗ್ರಹಿಸಿ ಕಾಪಾಡಲಿ. ಈ ಅಭಿ ಪ್ರಾಯದ ಪ್ರಾಮುಖ್ಯವನ್ನು ಸೂಚಿಸುವುದಕ್ಕೋಸ್ಕರ 'ಅವತು ಮಾಂ, ಅವತು ವಕ್ತಾರಂ' ಎಂದು ಎರಡನೆಯ ಆವೃತ್ತಿಯೂ ಒತ್ತಿ ಹೇಳಿದೆ. ಕಡೆಯಲ್ಲಿ 'ಅವತು ವಕ್ತಾರಂ' ಎಂಬ ವಾಕ್ಯವನ್ನು ಎರಡುಸಲ ಹೇಳಿರುವುದು ಈ ಶಾಂತಿಮಂತ್ರವು ಮುಗಿದುದನ್ನು ಸೂಚಿಸುತ್ತದೆ.

|| ಓಂ ಶಾಂತಿಶ್ಶಾಂತಿಶ್ಶಾಂತಿಃ ||

ಮಂಗಳವಾಗಲಿ. ತಾಪತ್ರಯಗಳೂ ಬೇರುಸಹಿತವಾಗಿ ಪುನಃ ಏಳದಂತೆ ನಾಶವಾಗಲಿ.

ಅಥ ಭಗವಂತಂ ದೇವಾ ಊಚುಃ — ಹೇ ಭಗವನ್ ನಃ ಕಥಯ ಸೌಭಾಗ್ಯಲಕ್ಷ್ಮೀವಿದ್ಯಾಂ । ತಥೇತ್ಯವೋಚತ್ ಭಗವಾನಾದಿನಾರಾಯಣಃ । ಸರ್ವೇ ದೇವಾ ಯೂಯಂ ಸಾವಧಾನಮನಸೋ ಭೂತ್ವಾ ಶೃಣುತ ||

ದೇವತೆಗಳು ಮಹಾಮಹಿಮಶಾಲಿಯಾದ ನಾರಾಯಣನನ್ನು ಕುರಿತು ಹೀಗೆ ವಿಜ್ಞಾಪಿಸಿದರು.—ಓ ಷಡ್ಗುಣೈಶ್ವರ್ಯಸಂಪನ್ನನಾದ ನಾರಾಯಣನೇ, ಶ್ರೀ ಸೌಭಾಗ್ಯ ಲಕ್ಷ್ಮೀದೇವಿಯ ತತ್ತ್ವಸ್ವರೂಪವನ್ನು ನಮಗೆ ತಿಳಿಯಹೇಳು ಎಂದು ಕೇಳಿಕೊಂಡರು. ಆ ಆದಿನಾರಾಯಣನು ಹಾಗೆಯೇ ಆಗಲೆಂದು ಒಪ್ಪಿ ಹೀಗೆ ವಿವರಿಸಿದನು. ಓ ದೇವತೆಗಳಿರಾ, ನೀವೆಲ್ಲರೂ ನಿರಾತಂಕವಾದ ಅಚಂಚಲವಾದ ಮನಸ್ಸುಳ್ಳವರಾಗಿ ಕೇಳಿರಿ.

ತುರೀಯರೂಪಾಂ ತುರೀಯಾತೀತಾಂ ಸರ್ವೋತ್ಕಟಾಂ ಸರ್ವಮಂತ್ರಾಸನಗತಾಂ ಪೀಠೋಪಪೀಠದೇವತಾ ಪರಿ ವೃತಾಂ ಚತುರ್ಭುಜಾಂ ಶ್ರಿಯಂ ||

ಭಗ ಶಬ್ದವು–ಶ್ರೀ, ಕಾಮ, ಮಾಹಾತ್ಮ್ಯ, ವೀರ್ಯ, ಯತ್ನ, ಅರ್ಕ, ಕೀರ್ತಿ, ಷು। ಎಂಬ ಕೋಶದದಂತೆ ಸಂಪತ್ತು, ಕಾಂತಿ, ಮಹಿಮೆ, ಶಕ್ತಿ, ಯಶಸ್ಸು ಮುಂತಾದು ವನ್ನು ಬೋಧಿಸುತ್ತದೆ. ಸೌಭಾಗ್ಯವೆಂದರೆ ಇವೆಲ್ಲದರಲ್ಲೂ ಅತಿಶಯವಾಗಿರುವಿಕೆಯು. ಲಕ್ಷ್ಮೀದೇವಿಯ ಅನುಗ್ರಹದಿಂದ ಉಪಾಸಕರಿಗೆ ಈ ಎಲ್ಲ ಫಲಗಳೂ, ದೊರೆಯು ವಂತಾಗುತ್ತವೆ. ಆದುದರಿಂದ ಇವಕ್ಕೆಲ್ಲ ಅಭಿಮಾನಿನಿಯಾದ ದೇವತಾಶಕ್ತಿಗೆ ಸೌಭಾಗ್ಯಲಕ್ಷ್ಮೀ ಎಂದು ಅನ್ವರ್ಥನಾಮವು. ಈ ದೇವಿಯು ಪರಮಾರ್ಥತತ್ತ್ವ ಸ್ವರೂಪದಲ್ಲಿ ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳನ್ನು ಮೀರಿ ನಾಲ್ಕನೆಯ ಸ್ಥಿತಿಸ್ವರೂಪಳೂ, ಅಷ್ಟೇ ಏಕೆ, ಅವಸ್ಥಾ (ಕೆಲವುಕಾಲ ಇರುವ ವಿಶೇಷ ಸ್ಥಿತಿ) ರೂಪವನ್ನೇ ಮೀರಿರುವ ನಿತ್ಯರೂಪಳೂ, ಎಲ್ಲಕ್ಕೂ ಮಿಗಿಲಾದವಳೂ, ಎಲ್ಲ ಮಂತ್ರಗಳಲ್ಲೂ ನೆಲಸಿರುವವಳೂ, ಇವಳ ಪೀಠದ ಅಂತಸ್ತುಗಳಲ್ಲಿ ತಮ್ಮ ತಮ್ಮ ಅರ್ಹತೆಗೆ ತಕ್ಕಂತೆ ಆಶ್ರಯಿಸಿರುವ ದೇವತೆಗಳಿಂದ ಕೂಡಿರುವವಳೂ, ನಾಲ್ಕು ತೋಳುಗಳುಳ್ಳವಳೂ, 'ಶ್ರೀ' ಎಂದು ಪ್ರಸಿದ್ಧಳೂ, ಆಗಿರುವ ದೇವಿಯಾಗಿದ್ದಾಳೆ. ಈ ದೇವಿಯ ತತ್ತ್ವವನ್ನೂ, ಆರಾಧನಕ್ರಮವನ್ನೂ ಹೇಳುವೆನು. ಮನಸ್ಸಿಟ್ಟು ಗ್ರಹಿಸಿರಿ.

ಹಿರಣ್ಯವರ್ಣಾಮಿತಿ ಪಂಚದಶರ್ಗ್ಭಿರ್ಧ್ಯಾಯಥ। ಅಥ ಪಂಚದಶಋಗಾತ್ಮಕಸ್ಯ ಶ್ರೀ ಸೂಕ್ತಸ್ಯಾನಂದಕರ್ದಮ ಚಿಕ್ಲೀತೇಂದಿರಾಸುತಾ ಋಷಯಃ। ಶ್ರೀರಿತ್ಯಾದ್ಯಾಋಚಃ ಚತುರ್ದಶಾನಾಮೃಚಾಮಾನಂದಾದ್ಯೃಷಯಃ

ಈ ದೇವಿಯನ್ನು "ಹಿರಣ್ಯವರ್ಣಾಂ" ಎಂದು ಪ್ರಾರಂಭವಾಗುವ ಶ್ರೀ ಸೂಕ್ತದ ಹದಿನೈದು ಋಙ್ಮಂತ್ರಗಳಿಂದ ಅವುಗಳ ಅರ್ಥಜ್ಞಾನಪೂರ್ವಕವಾಗಿ ಧ್ಯಾನ ಮಾಡಿರಿ. ಹದಿನೈದು ಋಕ್ಕುಗಳುಳ್ಳ ಈ ಶ್ರೀಸೂಕ್ತಕ್ಕೆ ಆನಂದಕರ್ದಮ ಚಿಕ್ಲೀತ ಇಂದಿರಾಸುತ ಇವರೇ ಋಷಿಗಳು, ಎಂದರೆ ಈ ಮಂತ್ರತತ್ತ್ವಗಳನ್ನು ಮೊದಲು ಮನಗಂಡು ಪ್ರಚಾರಕ್ಕೆ ತಂದ ಮಹನೀಯರು. ಈ ಮೊದಲನೆಯ ಮತ್ತು ಇತರ ಹದಿನಾಲ್ಕು ಋಙ್ಮಂತ್ರಗಳಿಗೆ ಆನಂದಕರ್ದಮ ಮುಂತಾದವರು ಋಷಿಗಳು.

ಹಿರಣ್ಯವರ್ಣಾಮಿತ್ಯಾದ್ಯೃಕ್ತ್ರಯಸ್ಯಾನುಷ್ಟುಪ್ ಛಂದಃ । ಕಾಂಸೋಸ್ಮೀತ್ಯಸ್ಯ ಬೃಹತೀ ಛಂದಃ। ತದನ್ಯಯೋರ್ದ್ವಯೋಸ್ತ್ರಿಷ್ಟುಪ್ ಛಂದಃ । ಅನುಷ್ಟುಪ್ ಪುನರಷ್ಟಕಸ್ಯ। ಶೇಷಸ್ಯ ಪ್ರಸ್ತಾರಪಂಕ್ತಿಃ

'ಹಿರಣ್ಯವರ್ಣಾಂ' ಎಂದು ಪ್ರಾರಂಭವಾಗುವ ಮೊದಲಿನ ಮೂರು ಋಕ್ಕುಗಳು ಅನುಷ್ಟುಪ್ ಛಂದಸ್ಸಿನ ಲಕ್ಷಣವುಳ್ಳವಾಗಿವೆ. 'ಕಾಂಸೋಸ್ಮಿತಾಂ' ಎಂದು ಪ್ರಾರಂಭವಾಗುವ ಋಙ್ಮಂತ್ರವು ಬೃಹತೀ ಛಂದಸ್ಸಿನಲ್ಲೂ, ಅದರ ಮುಂದಿನ ಎರಡು ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನಲ್ಲೂ, ಮುಂದಿನ ಎಂಟು ಮಂತ್ರಗಳು ಅನುಷ್ಟುಪ್ ಛಂದಸ್ಸಿನಲ್ಲೂ, ಉಳಿದ ಮಂತ್ರವು ಪ್ರಸ್ತಾರಪಂಕ್ತಿ ಛಂದಸ್ಸಿನಲ್ಲೂ ಇದೆ.

ಶ್ರ್ಯಗ್ನಿರ್ದೇವತಾ। ಹಿರಣ್ಯವರ್ಣಾಮಿತಿಬೀಜಂ। ಕಾಂಸೋ
ಸ್ಮೀತಿ ಶಕ್ತಿಃ। ಹಿರಣ್ಮಯಾ ಚಂದ್ರಾ ರಜತಸ್ರಜಾ ಹಿರಣ್ಯ
ಸ್ರಜಾ ಹಿರಣ್ಯಾ ಹಿರಣ್ಯವರ್ಣೇತಿ ಪ್ರಣವಾದಿನಮೋಽನ್ತೈ
ಶ್ಚತುರ್ಥ್ಯನ್ತೈರಂಗನ್ಯಾಸಃ। ಮಸ್ತಲೋಚನಶ್ರುತಿಘ್ರಾಣ
ವದನಕಂಠಬಾಹುದ್ವಯಹೃದಯನಾಭಿಗುಹ್ಯಪಾಯೂರು
ಜಾನು ಜಂಘೇಷು ಶ್ರೀಸೂಕ್ತೈರೇವ ಕ್ರಮಶೋ ನ್ಯಸೇತ್॥

ಈ ಸೂಕ್ತ ಮಂತ್ರಗಳಿಂದ ಉಪಾಸ್ಯಳಾಗಿರುವ ದೇವತೆಯು ಅಗ್ನಿತೇಜೋರೂಪಳಾದ ಶ್ರೀದೇವಿಯು. 'ಹಿರಣ್ಯವರ್ಣಾಂ' ಎಂದು ಪ್ರಾರಂಭವಾಗುವ ಮಂತ್ರದಿಂದ ಬೀಜವನ್ನೂ, 'ಕಾಂಸೋಽಸ್ಮಿ' ಎಂಬ ಮಂತ್ರದಿಂದ ದೇವಿಯ ಶಕ್ತಿಯನ್ನೂ, ಕೀಲಕವನ್ನೂ ಭಾವಿಸಬೇಕು. ಓಂ ಹಿರಣ್ಮಯಾಯೈ ನಮಃ। ಓಂ ಚಂದ್ರಾಯೈ ನಮಃ। ಓಂ ರಜತಸ್ರಜಾಯೈ ನಮಃ। ಓಂ ಹಿರಣ್ಯಸ್ರಜಾಯೈ ನಮಃ। ಓಂ ಹಿರಣ್ಯಾಯೈ ನಮಃ। ಓಂ ಹಿರಣ್ಯವರ್ಣಾಯೈ ನಮಃ। ಎಂಬ ಈ ಆರು ನಾಮಗಳಿಂದ ಕ್ರಮವಾಗಿ ಕರನ್ಯಾಸ ಅಂಗನ್ಯಾಸಗಳನ್ನು ಮಾಡಿಕೊಳ್ಳಬೇಕು. ಅನಂತರದಲ್ಲಿ ಶಿರಸ್ಸು ಕಣ್ಣು ಕಿವಿ ಮೂಗು ಮುಖ ಕತ್ತು ಎರಡು ತೋಳುಗಳು ಎದೆ ಹೊಕ್ಕುಳು ಗುಹ್ಯ ಪಾಯು ತೊಡೆ ಮಂಡಿ ಜಂಗಾಲು ಈ ಅವಯವಗಳಲ್ಲಿ ಕ್ರಮವಾಗಿ ಈ ಶ್ರೀಸೂಕ್ತದ ಮಂತ್ರಗಳಿಂದ ನ್ಯಾಸಗಳನ್ನು ಮಾಡಿಕೊಳ್ಳಬೇಕು.

ಅಮಲಕಮಲಸಂಸ್ಥಾ ತದ್ರಜಃಪುಂಜವರ್ಣಾ
ಕರಕಮಲಧೃತೇಷ್ಟಾಽಭೀತಿಯುಗ್ಮಾಂಬುಜಾ ಚ।
ಮಣಿಮುಕುಟವಿಚಿತ್ರಾಲಂಕೃತಾಕಲ್ಪಜಾಲೈಃ
ಸಕಲಭುವನಮಾತಾ ಸಂತತಂ ಶ್ರೀಶ್ರಿಯೈ ನಃ॥

ಧ್ಯಾನಪದ್ಯದ ಅರ್ಥವು ಹೀಗಿದೆ.—ನಿರ್ಮಲವಾದ ತಾವರೆಹೂವಿನಲ್ಲಿ ನೆಲಸಿರುವ, ಆ ತಾವರೆಹೂವಿನ ಪರಾಗದ ಸಮೂಹದಂತೆ ಚಿನ್ನದ ಹಳದಿಬಣ್ಣವುಳ್ಳ,

ತಾವರೆಹೂವಿನಂತೆ ಎಳೆಗೆಂಪಾದ ಕೈಗಳಲ್ಲಿ ವರದ ಅಭಯಮುದ್ರೆಗಳನ್ನೂ, ಎರಡು ಕಮಲಗಳನ್ನೂ ಧರಿಸಿರುವ, ರತ್ನ ಖಚಿತವಾದ ಕಿರೀಟ ಮುಂತಾದ ಕಲ್ಪವೃಕ್ಷದಿಂದ ಲಭಿಸಿದ ನಾನಾಬಗೆಯ ಆಭರಣಗಳಿಂದ ಸಿಂಗರಿಸಿಕೊಂಡಿರುವ, ಎಲ್ಲ ಪ್ರಪಂಚಕ್ಕೂ ತಾಯಿಯಂತೆ ಕಾಪಾಡುವವಳಾದ. ಶ್ರೀದೇವಿಯು ನಮಗೆ ಸಂಪತ್ತನ್ನು ಅನುಗ್ರಹಿಸುವವಳಾಗಲಿ.

ತತ್ಪೀಠಕರ್ಣಿಕಾಯಾಂ ಸಸಾಧ್ಯಂ ಶ್ರೀಬೀಜಂ, ವಸ್ವಾದಿತ್ಯಕಲಾಪದ್ಮೇಷು ಶ್ರೀಸೂಕ್ತಗತಾರ್ಧಾರ್ಧರ್ಚಾ ತದ್ಬಹಿರ್ಯಃಶುಚಿರಿತಿ ಮಾತೃಕಯಾ ಚ ಶ್ರಿಯಂ, ಯಂತ್ರಾಂಗದಶಕಂ ಚ ವಿಲಿಖ್ಯ ಶ್ರಿಯಮಾವಾಹಯೇತ್ ।

ದೇವಿಯ ಪೀಠದ ಮೂಲೆಗಳಲ್ಲಿ ಶ್ರೀಸೂಕ್ತದ ಮಂತ್ರಗಳ ಅರ್ಧದಲ್ಲಿ ಅರ್ಧ ಎಂದರೆ ಒಂದೊಂದು ಪಾದದಿಂದಲೂ, ಅದಕ್ಕಿಂತ ಹೊರಗಡೆಯಲ್ಲಿ 'ಯಶ್ಶುಚಿಃ' ಎಂದು ಪ್ರಾರಂಭವಾಗುವ ಮಂತ್ರಗಳಿಂದಲೂ, ವರ್ಣಮಾಲೆಯ ಅಕ್ಷರಗಳಿಂದಲೂ, ಶ್ರೀದೇವಿಯನ್ನೂ, ಶ್ರೀಚಕ್ರಯಂತ್ರದ ಹತ್ತು ಭಾಗಗಳನ್ನೂ ಬರೆದು, ಶ್ರೀದೇವಿಯನ್ನು ಆವಾಹನೆ ಮಾಡಬೇಕು.

ಅಂಗೈಃ ಪ್ರಥಮಾವೃತಿಃ ಪದ್ಮಾದಿಭಿರ್ದ್ವಿತೀಯಾ, ಲೋಕೇಶೈಸ್ತೃತೀಯಾ, ತದಾಯುಧೈಸ್ತುರೀಯಾವೃತಿರ್ಭವತಿ । ಶ್ರೀಸೂಕ್ತೈರಾವಾಹನಾದಿ ಷೋಡಶಸಹಸ್ರಜಪಃ ।

ಅವಯುವಗಳಿಂದ ಮೊದಲನೆಯ ಆವರಣವನ್ನೂ, ಪದ್ಮ ಮೊದಲಾದವುಗಳಿಂದ ಎರಡನೆಯ ಆವರಣವನ್ನೂ, ದಿಕ್ಪಾಲಕರಿಂದ ಮೂರನೆಯ ಆವರಣವನ್ನೂ, ಅವರ ಆಯುಧಗಳಿಂದ ನಾಲ್ಕನೆಯ ಆವರಣವನ್ನೂ ರಚಿಸಬೇಕು. ಶ್ರೀಸೂಕ್ತಮಂತ್ರಗಳಿಂದ ಆವಾಹನಾದಿ ಷೋಡಶೋಪಚಾರಪೂಜೆಯನ್ನು ಮಾಡಿ, ಹದಿನಾರುಸಾವಿರ ಸಲ ಮಂತ್ರವನ್ನು ಜಪಿಸಬೇಕು.

ಸೌಭಾಗ್ಯರಮೈಕಾಕ್ಷರ್ಯಾ ಭೃಗುನೃಚದ್ಗಾಯತ್ರೀ ಶ್ರಿಯೋ ಋಷ್ಯಾದಯಃ । ಶಮಿತಿ ಬೀಜಶಕ್ತಿ (ಕೀಲಕಂ) । ಶ್ರಾಮಿತ್ಯಾದಿ ಷಡಙ್ಗಮ್ ॥

ಸೌಭಾಗ್ಯಲಕ್ಷ್ಮೀತತ್ತ್ವದ ಬೀಜರೂಪವಾದ 'ಹ್ರೀಂ' ಎಂಬ ಏಕಾಕ್ಷರೀ ಮಂತ್ರಕ್ಕೆ ಭೃಗುವು ಋಷಿಯು, ನೃಚದ್ಗಾಯತ್ರೀ ಚಂದಸ್ಸು, ಶ್ರೀದೇವಿಯೇ

ಉಪಾಸ್ಯದೇವತೆಯು. ಶಂ ಎಂದು ಬೀಜ ಶಕ್ತಿ ಕೀಲಕಗಳನ್ನು ಭಾವಿಸಬೇಕು. ಶ್ರಾಂ, ಶ್ರೀಂ, ಎಂದು ಮುಂತಾಗಿ ಆರು ವರ್ಣರೂಪಗಳಿಂದ ಆರು ಕರನ್ಯಾಸ ಅಂಗ ನ್ಯಾಸಗಳನ್ನು ಮಾಡಿಕೊಳ್ಳಬೇಕು.

ಭೂಯಾದ್ಭೂಯೋ ದ್ವಿಪದ್ಮಾಭಯವರದಕರಾ ತಪ್ತಕಾರ್ತಸ್ವರಾಭಾ
ಶುಭ್ರಾಭ್ರಾಭೇಭಯುಗ್ಮದ್ವಯಕರಧೃತಕುಂಭಾದ್ಭಿರಾಸಿಚ್ಯಮಾನಾ ।
ರತ್ನೌಘಾಬದ್ಧಮೌಳಿರ್ವಿಮಲತರದುಕೂಲಾರ್ತವಾಲೇಪನಾಢ್ಯಾ ।
ಪದ್ಮಾಕ್ಷೀ ಪದ್ಮನಾಭೋರಸಿ ಕೃತವಸತಿಃ ಪದ್ಮಗಾ ಶ್ರೀಶ್ರಿಯೈನಃ ॥

ಧ್ಯಾನಪದ್ಯದ ಅರ್ಥವು ಹೀಗಿದೆ.— ಕೈಗಳಿಂದ ಎರಡು ಕಮಲಗಳನ್ನೂ, ಅಭಯ ವರದಮುದ್ರೆಗಳನ್ನೂ, ಧರಿಸಿರುವ, ಕಾದಚಿನ್ನದಂತೆ ಹೊಂಬಣ್ಣವುಳ್ಳ, ಬಿಳಿಯ ಮೋಡದಂತೆ ಪರಿಶುದ್ಧಳಾಗಿರುವ, ಎರಡು ಪಾರ್ಶ್ವಗಳಲ್ಲೂ ಎರಡು ಆನೆಗಳಿಂದ ತಮ್ಮ ಸೊಂಡಿಲುಗಳಲ್ಲಿ ಧರಿಸಿರುವ ಕಲಶೋದಕದಿಂದ ಅಭಿಷೇಕಮಾಡಲ್ಪಡುತ್ತಿರುವ, ನವರತ್ನಗಳ ಸಮೂಹದಿಂದ ಮೆಟ್ಟಿದ ಕಿರೀಟದಿಂದ ಕೂಡಿರುವ ತಲೆಯುಳ್ಳ, ಹೆಚ್ಚು ಪರಿಶುದ್ಧವಾದ ಪೀತಾಂಬರಗಳನ್ನು ಧರಿಸಿರುವ, ಆಯಾಯ ಋತುಗಳಲ್ಲಿ ದೊರೆಯುವ ಹೂವುಗಳ ಪರಾಗತೈಲದಿಂದ ತನ್ನ ಮೈಯಿಗೆ ತುಂಬ ತೊಡೆದುಕೊಂಡಿರುವ, ಕಮಲದ ಎಸಳಿನಂತಿರುವ ಕಣ್ಣುಗಳುಳ್ಳ, ಮಹಾವಿಷ್ಣುವಿನ ಎದೆಯಲ್ಲಿ ನೆಲಸಿರುವ, ಕಮಲವನ್ನು ವಾಸಸ್ಥಾನವಾಗಿ ಪಡೆದಿರುವ, ಶ್ರೀದೇವಿಯು ನಮಗೆ ಹೆಚ್ಚಾದ ಸಂಪತ್ತನ್ನು ಅನುಗ್ರಹಿಸುವವಳು ಆಗಲಿ.

ತತ್ಪೀಠಂ, ಅಷ್ಟಪತ್ರಂ ವೃತ್ತತ್ರಯಂ ದ್ವಾದಶರಾಶಿಖಂಡಂ
ಚತುರಶ್ರಂ ರಮಾಪೀಠಂ ಭವತಿ, ಕರ್ಣಿಕಾಯಾಂ
ಸಸಾಧ್ಯಂ ಶ್ರೀಬೀಜಂ, ವಿಭೂತಿರುನ್ನತಿಃ । ಕಾಂತಿ
ಸ್ಸೃಷ್ಟಿಃ ಕೀರ್ತಿಃ ಸ್ಥಿತಿರ್ನತಿಃ ಪುಷ್ಟಿರುತ್ಕೃಷ್ಟಿಃ ಋದ್ಧಿರಿತಿ
ಪ್ರಣವಾದಿನಮೋಽನ್ತೈಶ್ಚತುರ್ಥ್ಯಂತೈರ್ನವಶಕ್ತಿಂ ಯಜೇತ್ ।

ಆ ಪೀಠವು ಎಂಟು ದಳಗಳುಳ್ಳದು, ಮೂರು ವೃತ್ತಗಳೂ, ಹನ್ನೆರಡು ರಾಶಿಗಳ ವಿಭಾಗಗಳೂ, ನಾಲ್ಕು ಮೂಲೆಗಳೂ, ಇವನ್ನು ಪಡೆದಿರುವ ಲಕ್ಷ್ಮೀದೇವಿಯ ಪೀಠವಾಗಿರುತ್ತದೆ. ಅದರ ಮಧ್ಯದಲ್ಲಿ ಉದ್ದಿಷ್ಟಾರ್ಥದೊಡನೆ ಶ್ರೀ ಬೀಜವನ್ನು ಬರೆದು, ವಿಭೂತಿ ಉನ್ನತಿ ಕಾಂತಿ ಸೃಷ್ಟಿ ಕೀರ್ತಿ ಸ್ಥಿತಿ ನತಿ ಪುಷ್ಟಿ ಉತ್ಕೃಷ್ಟಿ ಋದ್ಧಿ ಎಂಬ ಈ ನಾಮಗಳನ್ನು ಚತುರ್ಥೀವಿಭಕ್ತಿಯಲ್ಲಿ ಓಂಕಾರವನ್ನು ಮೊದಲುಮಾಡಿ ನಮ

ಶ್ಯಬ್ದದಲ್ಲಿ ಮುಗಿಯುವಂತೆ ಪಠಿಸುತ್ತಾ ಒಂಬತ್ತು ಶಕ್ತಿಗಳ ಸಮುದಾಯವನ್ನು ಧ್ಯಾನಿಸಿ ಆರಾಧಿಸಬೇಕು.

ಅಂಗೈಃ ಪ್ರಥಮಾವೃತಿಃ ವಾಸುದೇವಾದಿದ್ವಿತೀಯಾ,
ಬಾಲಕ್ಯಾದಿ ತೃತೀಯಾ, ಇಂದ್ರಾದಿಭಿಶ್ಚತುರ್ಥೀ ಭವತಿ ॥
ದ್ವಾದಶಲಕ್ಷಜಪಃ

ಅಂಗಗಳಿಂದ ಮೊದಲನೆಯ ಆವರಣವನ್ನೂ, ವಾಸುದೇವಾದಿನಾಮಗಳಿಂದ ಎರಡನೆಯ ಆವರಣವನ್ನೂ, ಬಾಲಕ್ಯಾದಿನಾಮಗಳಿಂದ ಮೂರನೆಯ ಆವರಣವನ್ನೂ ಇಂದ್ರಾದಿಲೋಕಪಾಲಕರ ನಾಮಗಳಿಂದ ನಾಲ್ಕನೆಯ ಆವರಣವನ್ನೂ, ಭಾವಿಸಬೇಕು. ಹನ್ನೆರಡುಲಕ್ಷಸಲ ಜಪಿಸಬೇಕು.

ಶ್ರೀರ್ಲಕ್ಷ್ಮೀರ್ವರದಾ ವಿಷ್ಣುಪತ್ನೀ ವಸುಪ್ರದಾ ಹಿರಣ್ಯ
ರೂಪಾ ಸ್ವರ್ಣಮಾಲಿನೀ ರಜತಸ್ರಜಾ ಸ್ವರ್ಣಪ್ರಭಾ
ಸ್ವರ್ಣಪ್ರಾಕಾರಪದ್ಮವಾಸಿನೀ ಪದ್ಮಹಸ್ತಾ ಪದ್ಮಪ್ರಿಯಾ
ಮುಕ್ತಾಲಂಕಾರಾ ಚಂದ್ರಾ ಸೂರ್ಯಾ ಬಿಲ್ವಪ್ರಿಯಾ

ಶ್ರೀದೇವಿಯು ಲಕ್ಷ್ಮೀರೂಪಳು, ಭಕ್ತರ ಇಷ್ಟಾರ್ಥಗಳನ್ನು ಕೊಡುವವಳು, ವಿಷ್ಣುವಿನ ಧರ್ಮಪತ್ನಿಯು, ಐಶ್ವರ್ಯಗಳನ್ನು ಅನುಗ್ರಹಿಸುವವಳು, ಹಿರಣ್ಯ ಮುಂತಾದ ಉತ್ತಮಧಾತುಸ್ವರೂಪಳು, ಸುವರ್ಣಾಭರಣಗಳ ಸರವುಳ್ಳವಳು, ರಜತ ಮಾಲೆಯನ್ನೂ ಧರಿಸಿರುವವಳು, ಹೊಂಬಣ್ಣದ ಕಾಂತಿಯುಳ್ಳವಳು, ಚಿನ್ನದ ಸುತ್ತು ಗಟ್ಟಿನಿಂದ ಕೂಡಿರುವ ಕಮಲದಲ್ಲಿ ವಾಸಿಸುವವಳು, ಕಮಲಗಳನ್ನು ಕೈಗಳಲ್ಲಿ ಧರಿಸಿರುವವಳು, ತಾವರೆ ಹೂವಿನಲ್ಲಿ ಪ್ರೀತಿಯುಳ್ಳವಳು, ಮುತ್ತುಗಳಿಂದ ಅಲಂಕರಿಸಿ ಕೊಂಡಿರುವವಳು, ಚಂದ್ರನಂತೆ ಆಹ್ಲಾದಕಳು, ಸೂರ್ಯ ಮುಂತಾದ ತೇಜೋರೂಪಳು, ಬಿಲ್ವಪತ್ರೆಯಲ್ಲಿ ಪ್ರೀತಿಯುಳ್ಳವಳು.

ಈಶ್ವರೀ ಭುಕ್ತಿರ್ಮುಕ್ತಿರ್ವಿಭೂತಿರ್ಋದ್ಧಿಃ ಸಮೃದ್ಧಿಃ
ಕೃಷ್ಟಿಃ ಪುಷ್ಟಿರ್ಧನದಾ ಧನೇಶ್ವರೀ ಶ್ರದ್ಧಾಭೋಗಿನೀ
ಭೋಗದಾ ಸಾವಿತ್ರೀ ಧಾತ್ರೀ ವಿಧಾತ್ರೀತ್ಯಾದಿ ಪ್ರಣವಾದಿ
ನಮೋಽನ್ತಾಶ್ಚತುರ್ಥ್ಯನ್ತಾ ಮಂತ್ರಾಃ ।

ಎಲ್ಲಕ್ಕೂ ಸ್ವಾಮಿನಿಯಾಗಿರುವವಳು, ಐಹಿಕಾಮುಷ್ಮಿಕಗಳಾದ ಫಲಗಳ ಅನುಭವರೂಪಳು, ಈ ಸಂಸಾರದಿಂದ ಬಿಡುಗಡೆ ಎಂಬ ಮುಕ್ತಿರೂಪಳು, ಮಹಿಮಾ

ರೂಪಳು, ಹೆಚ್ಚುವಿಕೆ, ತುಂಬಿರುವಿಕೆ, ಆಕರ್ಷಣೆ, ಬೆಳವಳಿಗೆ, ಇವುಗಳ ಸ್ವರೂಪವಾಗಿರುವವಳು, ಎಲ್ಲ ಬಗೆಯ ಸಂಪತ್ತುಗಳನ್ನು ಅನುಗ್ರಹಿಸುವವಳು, ಸಂಪತ್ತುಗಳಿಗೆ ಸ್ವಾಮಿನಿಯಾದವಳು, ಗುರೂಪದೇಶ ಶ್ರುತಿವಾಕ್ಯಗಳಲ್ಲಿ ಭಕ್ತಿವಿಶ್ವಾಸರೂಪಳಾಗಿರುವವಳು, ಸುಖಾನುಭವವುಳ್ಳವಳು, ಸುಖಾನುಭವಗಳನ್ನು ಕರುಣಿಸುವವಳು, ಎಲ್ಲಕ್ಕೂ ತಾಯಿಯಾಗಿರುವವಳು, ಪೋಷಕಳಾಗಿರುವವಳು, ಎಲ್ಲವನ್ನೂ ರಚಿಸುವವಳೂ ಆಗಿದಾಳೆ. ಇವೇ ಮುಂತಾದ ಅರ್ಥವಿಶೇಷಗಳುಳ್ಳ ನಾಮಮಂತ್ರಗಳನ್ನು ಚತುರ್ಥೀ ವಿಭಕ್ತಿಯಲ್ಲಿ ಓಂಕಾರದಿಂದ ಪ್ರಾರಂಭಿಸಿ ನಮಶ್ಶಬ್ದಗಳಿಂದ ಮುಗಿಯುವಂತೆ ಜಪಿಸಬೇಕು.

ಏಕಾಕ್ಷರವದಂಗಾದಿ ಪೀಠಂ । ಲಕ್ಷಜಪಃ, ದಶಾಂಶಂ, ತರ್ಪಣಂ, ಶತಾಂಶಂ, ಹವನಂ, ಸಹಸ್ರಾಂಶಂ, ದ್ವಿಜ ತೃಪ್ತಿಃ, ನಿಷ್ಕಾಮಾನಾಮೇವ ಶ್ರೀ ವಿದ್ಯಾಸಿದ್ಧಿಃ, ನ ಕದಾಪಿ ಸಕಾಮಾನಾಮಿತಿ ॥

ಏಕಾಕ್ಷರಮಂತ್ರಕ್ಕೆ ಹೇಗೋ ಹಾಗೆ, ಏಕಾಕ್ಷರ ಮಂತ್ರದಿಂದ ಕೂಡಿರುವ ಪೀಠವನ್ನು ಭಾವಿಸಬೇಕು. ಒಂದುಲಕ್ಷಸಲ ಜಪಿಸಬೇಕು. ಅದರ ಹತ್ತರಷ್ಟುಸಲ ಜಲತರ್ಪಣವನ್ನು ಮಾಡಬೇಕು. ನೂರುಮಡಿಯಷ್ಟುಸಲ ಹೋಮಮಾಡಬೇಕು. ಸಾವಿರಮಡಿಯಷ್ಟು ಸಂಖ್ಯೆಯ ದ್ವಿಜರಿಗೆ ಅನ್ನಾದಿಗಳಿಂದ ತೃಪ್ತಿಯನ್ನುಂಟುಮಾಡಬೇಕು. ಹೀಗೆ ಆಚರಿಸಿದರೆ ಫಲಸಿದ್ಧಿಯಾಗುತ್ತದೆ. ಅಲ್ಲದೆ ಈ ಮಂತ್ರಸಿದ್ಧಿಯು ಯಾವ ಕಾಲದಲ್ಲೂ ಅತಿ ಆಶೆ ದುರಾಶೆಯುಳ್ಳವರಿಗೆ ಆಗುವುದೇ ಇಲ್ಲವು. ಫಲಾಶೆಯಲ್ಲಿ ಗಮನವಿಡದೆ ಏಕಾಗ್ರಭಕ್ತಿಯಿಂದ ಆಚರಿಸುವವರಿಗೆ ಮಾತ್ರವೇ ಇದರ ಸಿದ್ಧಿಯಾಗುತ್ತದೆ. ಏಕೆಂದರೆ ಫಲದಲ್ಲಿ ಆಶೆ ಇದ್ದರೆ ಚಿತ್ತವು ಏಕಾಗ್ರವಾಗದು. ಏಕಾಗ್ರತೆ ಇಲ್ಲದೆ ಸಿದ್ಧಿಯಾಗುವುದಿಲ್ಲವೆಂದು ತಾತ್ಪರ್ಯವು.

ಅಥ ಹೈನಂ ದೇವಾ ಊಚುಸ್ತುರೀಯಯಾ ಮಾಯಯಾ ನಿರ್ದಿಷ್ಟಂ ತತ್ತ್ವಂ ಬ್ರೂಹೀತಿ । ತಥೇತಿ ಸ ಹೋವಾಚ ॥

ಅನಂತರದಲ್ಲಿ ದೇವತೆಗಳು ಶ್ರೀಮನ್ನಾರಾಯಣನನ್ನು ಕುರಿತು ಮಾಯೆಯ ನಾಲ್ಕನೆಯ ಸ್ಥಿತಿಯಿಂದ ತಿಳಿಯಬೇಕಾದ ಪರತತ್ತ್ವದ ಸ್ವರೂಪವನ್ನು ತಿಳಿಯ ಹೇಳೆಂದು ಕೇಳಿಕೊಂಡರು. ಹಾಗೆಯೇ ಆಗಲೆಂದು ನಾರಾಯಣನು ಈಪ್ರಕಾರವಾಗಿ ಉಪದೇಶಮಾಡಿದನು.

ಯೋಗೇನ ಯೋಗೋ ಜ್ಞಾತವ್ಯೋ ಯೋಗೋಯೋಗಾ
ತ್ಪ್ರವರ್ಧತೇ । ಯೋಽಪ್ರಮತ್ತಸ್ತು ಯೋಗೇನ ಸ ಯೋಗೀ
ರಮತೇ ಚಿರಂ ॥

ಯೋಗಮಾರ್ಗವನ್ನು ಬುದ್ಧಿಕೌಶಲದಿಂದ ತಿಳಿದುಕೊಳ್ಳಬೇಕು. ಏಕಾಗ್ರವಾದ ಮನಸ್ಸಿನ ಸಹಾಯದಿಂದ ಅದರಲ್ಲಿ ಮುಂದುವರಿಯಲು ಆಗುತ್ತದೆ. ಯೋಗ ಮಾರ್ಗವಲ್ಲಿ ಮುಂದುವರಿದಹಾಗೆಲ್ಲ ಉಪಾಸಕನು ಪಡೆಯುವ ಆಂತರಾಳಿಕವಾದ ಸಿದ್ಧಿಗಳಿಂದ ಅಹಂಕಾರಪಡದೆ ಇರುವ ಯೋಗವುಳ್ಳವನು ಶಾಶ್ವತವಾಗಿ ಸುಖಪಡುವನು.

ಸಮಾಪಯ್ಯ ನಿದ್ರಾಂ ಸುಜೀರ್ಣೇಽಲ್ಪಭೋಜೀ
ಶ್ರಮತ್ಯಾಜ್ಯಬಾಧೇ ವಿವಿಕ್ತೇ ಪ್ರದೇಶೇ ।
ಸದಾಽಽಸೀತ ನಿಸ್ತೃಷ್ಣ ಏಷ ಪ್ರಯತ್ನೋಽ
ಥವಾ ಪ್ರಾಣರೋಧೋ ನಿಜಾಭ್ಯಾಸಮಾರ್ಗಾತ್ ॥

ಉಪಾಸಕನು ಪ್ರತಿನಿತ್ಯವೂ ಮಿತವಾಗಿ ಆಹಾರವನ್ನು ಸ್ವೀಕರಿಸುತ್ತಾ, ಅದು ಚೆನ್ನಾಗಿ ಅರಗಿರಲು, ನಿದ್ರೆಯನ್ನು ಮುಗಿಸಿ, ಆಯಾಸ ಮತ್ತು ಜಲ, ಮಲ, ರೋಗ ಮುಂತಾದ ಬಾಧೆಗಳಿಲ್ಲದವನಾಗಿ, ಏಕಾಂತವಾದ ಸ್ಥಳದಲ್ಲಿ ಯಾವಾಗಲೂ ದುರಾಶೆ ಅತ್ಯಾಶೆಗಳಿಗೆ ಅಧೀನನಾಗದೆ ಧ್ಯಾನದಲ್ಲಿ ಇರಬೇಕು. ಇದೇ ಸರಿಯಾದ ಪ್ರಯತ್ನವು. ಅಲ್ಲದೆ ತನಗೆ ಹೊಂದಿಬರುವ ರೀತಿಯಿಂದ ರೇಚಕ, ಪೂರಕ, ಕುಂಭಕಗಳೆಂಬ ಮೂರುಬಗೆಯ ಪ್ರಾಣಾಯಾಮಗಳಿಂದ ಮನಸ್ಸನ್ನು ಏಕಾಗ್ರ ವಾಗುವಂತೆ ಮಾಡುವುದೂ ಸರಿಯಾದ ಪ್ರಯತ್ನವು. ಅಲ್ಲದೆ ಅಭ್ಯಾಸ ವೈರಾಗ್ಯ ಗಳೂ ಬೇಕು.

ವಕ್ತ್ರೇಣಾಪೂರ್ಯ ವಾಯುಂ ಹುತವಹನಿಲಯೇಽಪಾನಮಾ
ಕೃಷ್ಯ ಧೃತ್ವಾ ಸ್ವಾಂಗುಷ್ಠಾದ್ಯಂಗುಲೀಭಿರ್ವರಕರತಲಯೋ
ಷ್ಷಡ್ಭಿರೇವಂ ನಿರುಧ್ಯ । ಶ್ರೋತ್ರೇ ನೇತ್ರೇ ಚ ನಾಸಾಪುಟ
ಯುಗಳಮಥೋಽನೇನ ಮಾರ್ಗೇಣ ಸಮ್ಯಕ್ಪಶ್ಯಂತಿ ಪ್ರತ್ಯ
ಯಾಂಶಂ ಪ್ರಣವಬಹುವಿಧಧ್ಯಾನಸಂಲೀನಚಿತ್ತಾಃ ॥

ಮುಖದಿಂದ ಉಸಿರನ್ನು ಒಳಕ್ಕೆ ತುಂಬಿಕೊಂಡು, ಅಪಾನವಾಯುವನ್ನೂ ಎಳೆದು ಮೂಲಾಧಾರ ಚಕ್ರದ ಬುಡದಲ್ಲಿರುವ ಅಗ್ನಿಸ್ಥಾನದಲ್ಲಿ ನಿಲ್ಲಿಸಿ, ಮುಂದೆ

ಹೇಳುವ ರೀತಿಯಲ್ಲಿ ಎಂದರೆ, ತನ್ನ ಅನುಕೂಲವಾದ ಕೈಗಳಲ್ಲಿರುವ ಹೆಬ್ಬೆಟ್ಟು ಮುಂತಾದ ಆರು ಬೆರಳುಗಳಿಂದ ಎರಡು ಕಿವಿ, ಎರಡು ಕಣ್ಣು, ಎರಡು ಮೂಗು, ಇವನ್ನು ತಡೆದು, ಆಮೇಲೆ ಇದೇ ಮಾರ್ಗದಿಂದ ಓಂಕಾರವೇ ಮುಂತಾದ ನಾನಾ ಬಗೆಯ ಧ್ಯಾನವಿಷಯಗಳಲ್ಲಿ ಏಕಾಗ್ರವಾಗಿ ನಿಂತ ಮನಸ್ಸುಳ್ಳ ಉಪಾಸಕರು ಮನೋವೃತ್ತಿರೂಪವಾದ ಖಂಡಜ್ಞಾನಗಳೇ ವ್ಯಕ್ತರೂಪಗಳಾಗಿ ಉಳ್ಳ ಪರತತ್ತ್ವವನ್ನು ಉಪಲಕ್ಷಣರೀತಿಯಿಂದ ಚೆನ್ನಾಗಿ ಮನಗಾಣುತ್ತಾರೆ.

ಶ್ರವಣಮುಖನಯನನಾಸಾನಿರೋಧನೇನೈವ ಕರ್ತವ್ಯಂ ಶುದ್ಧ
ಸುಷುಮ್ನಾಸರಣೌ ಸ್ಫುಟಮಮಲಂ ಶ್ರೂಯತೇ ನಾದಃ ॥

ಈ ಯೋಗವನ್ನು ಕಿವಿ ಬಾಯಿ ಕಣ್ಣು ಮೂಗುಗಳನ್ನು ತಡೆಯೋಣದರಿಂದಲೇ ಸಾಧಿಸಬೇಕು. ಮಿಶ್ರಸತ್ತ್ವ, ರಜಸ್ಸು, ತಮಸ್ಸು, ಇವುಗಳ ದೋಷ ಸಂಬಂಧವಿಲ್ಲದೆ ನಿರ್ಮಲವಾದ ಸುಷುಮ್ನಾನಾಡಿಯ ಮಾರ್ಗದಲ್ಲಿ ಅಭ್ಯಾಸ ಎಂದರೆ ಪುನಃ ಪುನಃ ಪ್ರಯತ್ನಿಸುತ್ತಿರುವಿಕೆ, ವೈರಾಗ್ಯ ಎಂದರೆ ಫಲಗಳಲ್ಲಿ ಆಶೆ ಇಲ್ಲದಿರುವಿಕೆ, ಇವುಗಳಿಂದ ಮುಂದುವರಿಯುತ್ತಿದ್ದರೆ ನಾದವೆಂಬ ಧ್ವನಿವಿಶೇಷವು ವ್ಯಕ್ತವಾಗಿ ದೋಷವಿಲ್ಲದೆ ಕೇಳಿಬರುತ್ತದೆ.

ವಿಚಿತ್ರಘೋಷಸಂಯುಕ್ತಾನಾಹತೇಶ್ರೂಯತೇ ಧ್ವನಿಃ ।
ದಿವ್ಯದೇಹಶ್ಚ ತೇಜಸ್ವೀ ದಿವ್ಯಗಂಧೋಽಪ್ಯರೋಗವಾನ್ ॥

ಆಶ್ಚರ್ಯಕರವಾದ ನಾನಾಬಗೆಯ ಧ್ವನಿವಿಶೇಷಗಳಿಂದ ಕೂಡಿರುವ ಅನಾಹತ ಚಕ್ರದಲ್ಲಿ ಈ ಧ್ವನಿಯನ್ನು ಕೇಳಬಹುದು. ಆಗ ಉಪಾಸಕನು ರೋಗವಿಲ್ಲದ, ಸುವಾಸನೆಯುಳ್ಳ, ತೇಜಸ್ಸಿನಿಂದ ಕಳಕಳಿಸುವ, ಒಳ್ಳೆಯ ಶರೀರವುಳ್ಳವನಾಗಿ ಕಾಣಬರುತ್ತಾನೆ.

ಸಂಪೂರ್ಣಹೃದಯಶ್ಶೂನ್ಯೇ ತ್ವಾರಂಭೇ ಯೋಗವಾನ್ ಭವೇತ್
ದ್ವಿತೀಯಾಂ ವಿಘಟೀಕೃತ್ಯ ವಾಯುರ್ಭವತಿ ಮಧ್ಯಗಃ ॥
ದೃಢಾಸನೋ ಭವೇದ್ಯೋಗೀ ಪದ್ಮಾದ್ಯಾಸನಸಂಸ್ಥಿತಃ ॥

ಚಿತ್ತವೃತ್ತಿಗಳನ್ನು ತಡೆದು, ಅವನ್ನು ಸರಿಯಾದ ಮಾರ್ಗದಲ್ಲಿ ತಿರುಗಿಸಿ, ತತ್ತ್ವವನ್ನು ಸಾಕ್ಷಾತ್ಕರಿಸುವವನಿಗೆ ಯೋಗವುಳ್ಳವನೆಂದು ವ್ಯವಹಾರವಿದೆ. ಅಂಥವನು ಮೊದಲು ಖಂಡವೃತ್ತಿಗಳನ್ನು ಮೀರಿದ, ಅಖಂಡತತ್ತ್ವದಲ್ಲಿ ಚೆನ್ನಾಗಿ ನೆಲಸಿರುವ ಹೃದಯವುಳ್ಳವನಾಗಿರಬೇಕು. ಎರಡನೆಯ ಅಂತಸ್ತನ್ನು ಪಡೆದು ದಾಟಿದಮೇಲೆ

ಧ್ವನಿಯು ಮಧ್ಯಮಾವಸ್ಥೆಯಲ್ಲಿರುತ್ತದೆ. ಆಗ ಉಪಾಸಕನು ಪದ್ಮಬಂಧ ಮುಂತಾದ ಆಸನಕ್ರಮಗಳನ್ನು ಅಭ್ಯಾಸಮಾಡಿದವನಾಗಿ ಅದರಲ್ಲಿ ದಾರ್ಢ್ಯವನ್ನು ಪಡೆಯಬೇಕು. ಅಂಥವನು ಮೊದಲು ಮೂಲಾಧಾರ ಚಕ್ರಸ್ಥಾನದಲ್ಲಿ ಬ್ರಹ್ಮಗ್ರಂಥಿಯನ್ನು ದಾಟಿರುತ್ತಾನೆ.

ವಿಷ್ಣುಗ್ರಂಥೇಸ್ತತೋ ಭೇದಾತ್ಪರಮಾನಂದಸಂಭವಃ ।
ಅತಿಶೂನ್ಯೇ ವಿಮರ್ದಶ್ಚ ಭೇರೀಶಬ್ದಸ್ತತೋ ಭವೇತ್ ॥

ಆಮೇಲೆ ಮಣಿಪೂರ ಚಕ್ರದಲ್ಲಿ ವಿಷ್ಣುವಿನ ಸ್ಥಾನವಿರುತ್ತದೆ. ಅಲ್ಲಿ ವಿಷ್ಣು ಗ್ರಂಥಿಯನ್ನು ಪಡೆದು, ಅದನ್ನು ದಾಟುವುದರಿಂದ ಉಪಾಸಕನು ಹೆಚ್ಚಾದ ಆನಂದಾ ನುಭವವನ್ನು ಪಡೆಯುತ್ತಾನೆ. ಆಮೇಲೆ ನಗಾರಿಯ ಧ್ವನಿಯಂತಿರುವ ಅತಿಶೂನ್ಯ ವೆಂಬ ಸಮ್ಮರ್ದಜನ್ಯವಾದ ಧ್ವನಿಯ ಅನುಭವವುಂಟಾಗುತ್ತದೆ.

ತೃತೀಯಾಂ ಯತ್ನತೋ ಭಿತ್ವಾ ನಿನಾದೋ ಮರ್ದಳಧ್ವನಿಃ ।
ಮಹಾಶೂನ್ಯಂ ತತೋ ಯಾತಿ ಸರ್ವಸಿದ್ಧಿಸಮಾಶ್ರಯಂ ॥

ಮೂರನೆಯ ಸ್ಥಿತಿಯನ್ನು ವಿಶುದ್ಧಚಕ್ರದಲ್ಲಿ ರುದ್ರಗ್ರಂಥಿಯನ್ನು ಪಡೆದು, ಪ್ರಯತ್ನದಿಂದ ಅದನ್ನೂ ದಾಟಿ, ಮುಂದುವರಿದವನಿಗೆ ಮೃದಂಗದ ಧ್ವನಿಯ ಹಾಗಿರುವ ಸೌಮ್ಯವಾದ ನಾದವು ಅನುಭವಕ್ಕೆ ಬರುತ್ತದೆ. ಆಮೇಲೆ ಉಪಾಸಕನು ಎಲ್ಲ ಬಗೆಯ ಸಿದ್ಧಿಗಳಿಗೂ ಅವಲಂಬನವಾದ ಮಹಾಶೂನ್ಯವೆಂಬ ಸ್ಥಿತಿಯನ್ನು ಪಡೆಯುತ್ತಾನೆ. ಇದೇ ಯೋಗಶಾಸ್ತ್ರದಲ್ಲಿ ಪತಂಜಲಿಋಷಿಗಳು ವಿವರಿಸಿರುವ ಸಂಪ್ರಜ್ಞಾತಸಮಾಧಿಸ್ಥಿತಿಯು. ಘಂಟೆಯ ಧ್ವನಿಯು ನಾದದ ಅಂತ್ಯದಲ್ಲಿ ಇದರ ಸಾಮ್ಯವನ್ನು ಕಾಣಬಹುದು.

ಏಕೀಭೂತಂ ತದಾ ಚಿತ್ತಂ ಸನಕಾದಿಮುನೀಡಿತಂ ।
ಅಂತೇಽನಸ್ತಂ ಸಮಾರೋಪ್ಯ ಖಂಡೇಽಖಂಡಂ ಸಮರ್ಪಯನ್ ॥

ಈ ಸಮಾಧಿಯಲ್ಲಿ ಎಂದರೆ, ಚಿತ್ತದ ಸಮಾಧಾನಸ್ಥಿತಿಯಲ್ಲಿ, ಮನಸ್ಸು ಧ್ಯೇಯದೊಡನೆ ಐಕ್ಯವನ್ನು ಪಡೆಯುತ್ತದೆ. ಇದನ್ನು ಸನಕನೇ ಮೊದಲಾದ ಮುನಿಗಳು ಹೊಗಳಿರುತ್ತಾರೆ. ಈ ಸ್ಥಿತಿಯಲ್ಲಿರುವ ಉಪಾಸಕನು ಪರಿಮಿತವಾದ ಮನಸ್ಸಿನಲ್ಲಿ ಅಪರಿಮಿತವಾದ ಬ್ರಹ್ಮತತ್ತ್ವವನ್ನೂ, ಖಂಡವಾದ ಚಿತ್ತವೃತ್ತಿಯಲ್ಲಿ ಅಖಂಡವಾದ ಬ್ರಹ್ಮತತ್ತ್ವವನ್ನೂ, ಖಂಡವಾದ ಚಿತ್ತವೃತ್ತಿಯಲ್ಲಿ ಅಖಂಡವಾದ ಚಿತ್ತತ್ತ್ವವನ್ನೂ ಆರೋಪಿಸಿರುತ್ತಾನೆ. ಓಂಕಾರದ ಧ್ವನಿಯು ನಾದ, ಬಿಂದು, ಕಲಾ,

ಸ್ವರೂಪಗಳಲ್ಲಿ ಇದರ ಸಾಮ್ಯವನ್ನು ಮನಗಾಣಬಹುದು. ಇವೆಲ್ಲ ಸಂಪ್ರಜ್ಞಾತ ಸಮಾಧಿಯಲ್ಲಿನ ಉತ್ತಮವೃತ್ತಿಗಳಾಗಿರುತ್ತವೆ. ಇವಲ್ಲಿ ಜ್ಞಾನ, ಜ್ಞೇಯ, ಜ್ಞಾತೃ ಎಂಬ ತ್ರಿಪುಟಿಯ ಭಾವವಿರುತ್ತದೆ.

ಭೂಮಾನಂ ಪ್ರಕೃತಿಂ ಧ್ಯಾತ್ವಾ ಕೃತಕೃತ್ಯೋಽಮೃತೋ ಭವೇತ್ ।
ಯೋಗೇನ ಯೋಗಂ ಸಂರೋಧ್ಯ ಭಾವಂ ಭಾವೇನ ಚಾಂಜಸಾ ॥

ಈಶ್ವರವಾಚಕವಾದ ಓಂಕಾರವೆಂಬ ಪ್ರಣವದ ಧ್ಯಾನದಿಂದ ಪಡೆದ ಈ ಉತ್ತಮಸ್ಥಿತಿಯಲ್ಲಿ 'ಯೋ ವೈ ಭೂಮಾ ತದಮೃತಂ' ಎಂಬ ಉಪನಿಷತ್ಪ್ರತಿಪಾದ್ಯಾರ್ಥವಾದ ಬ್ರಹ್ಮಪರತತ್ತ್ವವನ್ನು ಧ್ಯಾನಿಸುತ್ತಾ ಉಪಾಸಕನು ಕೃತಕೃತ್ಯನೂ ಮುಕ್ತನೂ ಆಗಬೇಕು. ಉತ್ತರೋತ್ತರ ಯೋಗದಿಂದ ಪೂರ್ವಪೂರ್ವಯೋಗವನ್ನು ತಡೆದು ಶೋಧನೆಮಾಡಿ ದಾಟಿದವನಾಗಿ, ಸ್ಥೂಲಾರುಂಧತೀನ್ಯಾಯದಿಂದ, ಸರಳ ಸುಲಭಭಾವದಿಂದ ಗುರುಮಹದ್ಭಾವಕ್ಕೆ ತಲಪಬೇಕು. ಆಗ ಉಪಾಸಕನು ಖಂಡವಾದ ವೃತ್ತಿಗಳು ಅಳಿದುಹೋಗಿ ಅಖಂಡಜ್ಞಾನರೂಪನಾಗಿ ಉಳಿಯುತ್ತಾನೆ.

ನಿರ್ವಿಕಲ್ಪಂ ಪರಂ ತತ್ತ್ವಂ ಸದಾ ಭೂತ್ವಾ ಪರಂ ಭವೇತ್ ।
ಅಹಂಭಾವಂ ಪರಿತ್ಯಜ್ಯ ಜಗದ್ಭಾವಮನೀದೃಶಂ ॥

ಆಗ ಉಪಾಸಕನು ಉಪಾಸ್ಯ, ಉಪಾಸಕ, ಉಪಾಸನಾ ಎಂಬ ತ್ರಿಪುಟಿಯ ಭೇದವನ್ನೂ ಮೀರಿ ನಿರ್ವಿಕಲ್ಪಸಮಾಧಿಗೆ ತಲಪುತ್ತಾನೆ. ಪರತತ್ತ್ವವೇ ತಾನೆಂದೂ, ತಾನೇ ಪರತತ್ತ್ವವೆಂದೂ ಮನಗಾಣುತ್ತಾನೆ. ಆ ಸ್ಥಿತಿಯೂ ಪರಿಪಕ್ವವಾದಾಗ ಅಹಂಭಾವವನ್ನೂ, ನಾನು ಉಪಾಸಕನು ಎಂಬ ವೃತ್ತಿಯನ್ನೂ ಬಿಟ್ಟು ದಾಟಿ ಮೀರುತ್ತಾನೆ. ಹಾಗೆಯೇ ಈ ಜಗತ್ತು ಎಂಬ ಭಾವವನ್ನೂ ಬಿಡುತ್ತಾನೆ. ಆಗ ಧ್ಯಾತೃ, ಧ್ಯೇಯ, ಧ್ಯಾನಗಳೆಂಬ ತ್ರಿಪುಟಿಯೂ ಅಳಿದುಹೋಗಿರುತ್ತದೆ. ತಾನು ಸಚ್ಚಿದಾನಂದರೂಪನು ಎಂಬುದು ಅಪರೋಕ್ಷಾನುಭವವಾಗುತ್ತದೆ.

ನಿರ್ವಿಕಲ್ಪಸ್ಥಿತೋ ವಿದ್ವಾನ್ ಭೂಯೋ ನಾಪ್ಯನುಶೋಚತಿ ।
ಸಲಿಲೇ ಸೈಂಧವಂ ಯದ್ವತ್ಸಾಮ್ಯಂ ಭವತಿ ಯೋಗತಃ ॥
ತಥಾಽತ್ಮಮನಸೋರೈಕ್ಯಂ ಸಮಾಧಿರಭಿಧೀಯತೇ ॥

ಈ ನಿರ್ವಿಕಲ್ಪಸಮಾಧಿಸ್ಥಿತಿಗೆ ತಲಪಿದ ಉಪಾಸಕನು ವೇದಾಂತದಲ್ಲಿ ತಿಳಿಸಿರುವ ಪರಬ್ರಹ್ಮತತ್ತ್ವದ ತಿಳಿವಳಿಕೆಯ ಸಹಾಯದಿಂದ, ಈ ಸಂಸಾರವ್ಯವಹಾರದಿಂದ ಉಂಟಾಗುವ ದುಃಖದ ಲೇಪವನ್ನು ಪಡೆಯದಂತಾಗುತ್ತದೆ. ನೀರಿನಲ್ಲಿರುವ ಉಪ್ಪಿನ

ಗಡ್ಡೆಯು ಕರಗಿ ನೀರಿನಲ್ಲಿ ಅಡಗಿಹೋಗುವಂತೆ, ನಾಮರೂಪಗಳನ್ನು ಕಳೆದುಕೊಂಡು ನೀರಿನಲ್ಲಿ ಸೇರಿಹೋಗುವಂತೆ, ಯೋಗದ ಸಹಾಯದಿಂದ ಉಪಾಸಕನು ಈಶ್ವರಸಾಮ್ಯ ವನ್ನು ಪಡೆಯುತ್ತಾನೆ. ಅಂತಹ ಸ್ಥಿತಿಯಲ್ಲಿ ಆತ್ಮವೂ ಮನಸ್ಸೂ ಒಂದಾಗಿರುತ್ತದೆ. ಆತ್ಮರೂಪದಲ್ಲಿ ಮನಸ್ಸು ಲೀನವಾಗಿರುತ್ತದೆ. ಇದಕ್ಕೇ ಸಮಾಧಿ ಎಂದು ಹೆಸರು. ಇದನ್ನೇ ಸರಸ್ವತೀ ರಹಸ್ಯೋಪನಿಷತ್ತಿನಲ್ಲಿ ಮಧ್ಯಮಸಮಾಧಿ ಎಂದು ವಿವರಿಸಿದೆ.

ಯದಾ ಸಂಕ್ಷೀಯತೇ ಪ್ರಾಣೋ ಮಾನಸಂ ಚ ಪ್ರಲೀಯತೇ ।
ತದಾ ಸಮರಸತ್ವಂ ಯತ್ಸಮಾಧಿರಭಿಧೀಯತೇ ॥

ಯಾವ ಯೋಗದ ಸ್ಥಿತಿಯಲ್ಲಿ ಪ್ರಾಣವು ಅಡಗಿಹೋಗಿರುತ್ತದೆಯೋ, ಮತ್ತು ಮನಸ್ಸೂ ಆತ್ಮನಲ್ಲಿ ಲೀನವಾಗಿರುತ್ತದೆಯೋ, ಆಗ ಅಪರೋಕ್ಷಾನುಭವದಿಂದ ಪ್ರಾಣ ಮನಸ್ಸು ಆತ್ಮಗಳ ಸಾಮರಸ್ಯವು, ಎಂದರೆ ಒಂದೇ ರೂಪದಲ್ಲಿರುವಿಕೆಯು, ಪರಸ್ಪರ ವಾಗಿರುವ ಆನುಕೂಲ್ಯ, ಸಹಾಯ, ಸಹಕಾರಗಳೂ ಗೊತ್ತಾಗುತ್ತವೆ. ಇದಕ್ಕೇ ಸಮಾಧಿ ಎಂದು ಹೆಸರು. ಈ ಒಂದಾಗುವಿಕೆಗೇ ಯೋಗವೆಂದು ಅನ್ವರ್ಥವಾದ ವ್ಯವಹಾರವೂ ಇದೆ.

ಯತ್ಸಮತ್ವಂ ತಯೋರತ್ರ ಜೀವಾತ್ಮಪರಮಾತ್ಮನೋಃ ।
ಸಮಸ್ತನಷ್ಟಸಂಕಲ್ಪಸ್ಸಮಾಧಿರಭಿಧೀಯತೇ ॥

ಈ ನಿರ್ವಿಕಲ್ಪಸಮಾಧಿಯು ದೃಢವಾಗುತ್ತಾ ಪರಿಪಕ್ವವಾದಾಗ, ಜೀವಾತ್ಮ ಪರಮಾತ್ಮರ ಸಾಮ್ಯವು, ಎಂದರೆ ಸಚ್ಚಿದಾನಂದರೂಪದಲ್ಲಿ ಅಭೇದವು ಎಂಬ ಪರತತ್ತ್ವದ ಸಾಕ್ಷಾತ್ಕಾರವಾಗುತ್ತದೆ. ಜೀವಾತ್ಮನು ಪರಮಾತ್ಮನಾಗಿ, ಪರಬ್ರಹ್ಮ ತತ್ತ್ವಸ್ವರೂಪನಾಗಿ, ನಾಮರೂಪಗಳು ಅಳಿದುಹೋಗಿ, ಅದ್ವಿತೀಯನೂ, ಅನಂತನೂ, ನಿತ್ಯನೂ, ಚಿದಾನಂದನೂ, ಅಭಯನೂ, ಬ್ರಹ್ಮವೂ ಆಗಿ ಎಂದಿನಂತೆಯೇ ಉಳಿಯು ತ್ತಾನೆ. ಹೇಗೆಂದರೆ ಮಹಾಸಾಗರದ ಆಳದಲ್ಲಿ ಹೆಚ್ಚಾದ ಶೈತ್ಯದಿಂದ ನೀರು ಗಡ್ಡೆ ಯಾಗಿದ್ದು, ದೇಶಕಾಲಗಳ ಬದಲಾವಣೆಯಿಂದ ಕರಗಿ ನೀರಾಗುತ್ತದೆ. ನಾಮ, ರೂಪ, ಲಿಂಗಗಳ ವ್ಯವಹಾರಗಳನ್ನು ಅತಿಕ್ರಮಿಸಿರುವ ಆ ಸ್ಥಿತಿಯನ್ನು ಮಾತಿನಿಂದ ವರ್ಣಿಸಲಾಗುವುದಿಲ್ಲ. ಏಕೆಂದರೆ ಯಾವ ದೃಷ್ಟಾಂತವನ್ನು ಹೇಳಿದರೂ ವಿಕಾರದ ಸಂಬಂಧವನ್ನು ತಪ್ಪಿಸಲಾಗುವುದಿಲ್ಲ. ಜೀವನ ಜೀವತ್ತ್ವವು ಕರಗಿಹೋಗುತ್ತ ದೆಂದರೂ ನಿರ್ವಿಕಾರ ಬ್ರಹ್ಮತತ್ತ್ವಕ್ಕೆ ವಿರುದ್ಧವಾಗುತ್ತದೆ. ಆದುದರಿಂದ ಮಾಯೆ ಯನ್ನು ಒಪ್ಪಿ ಜೀವತ್ತ್ವವು ತೋರಿಕೆಯಾದುದರಿಂದ ವಿರೋಧವಿಲ್ಲವೆಂದು ವಿವರಿಸಿದೆ. ಆಗ ಎಲ್ಲಬಗೆಯ ಸಂಕಲ್ಪಗಳೂ ನಷ್ಟವಾಗಿ ಆತ್ಮನು ಆಪ್ತಕಾಮನೂ ಆಗಿರುತ್ತಾನೆ. ಇದಕ್ಕೆ ಸಮಾಧಿ ಎಂದು ಹೆಸರು.

ಪ್ರಭಾಶೂನ್ಯಂ ಮನಶ್ಶೂನ್ಯಂ ಬುದ್ಧಿಶೂನ್ಯಂ ನಿರಾಮಯಂ ।
ಸರ್ವಶೂನ್ಯಂ ನಿರಾಭಾಸಂ ಸಮಾಧಿರಭಿಧೀಯತೇ ॥

ಆ ಉತ್ತಮೋತ್ತಮವಾದ ನಿರ್ವಿಕಲ್ಪಸಮಾಧಿಸ್ಥಿತಿಯಲ್ಲಿರುವಾಗ ಮೊದಲು ಈ ಜಗತ್ಸಂಸಾರದ ವ್ಯವಹಾರಕಾಲದಲ್ಲಿ, ತತ್ತ್ವದ ಅರಿವಿಲ್ಲದ ಅಜ್ಞಾನದ ದಶೆಯಲ್ಲಿ, ತೋರುತ್ತಿದ್ದ ಅಲ್ಪವೂ, ಖಂಡವೂ, ಆದ ಈ ಬೆಳಕೂ, ಮನಸ್ಸೂ, ಬುದ್ಧಿಯೂ, ರೋಗಬಾಧಾದಿ ಆತಂಕಗಳೂ ಯಾವುವೂ ಇಲ್ಲದೆ, ಖಂಡವಾದ ಯಾವ ವೃತ್ತಿಯೂ ತೋರದೆ, ಅಖಂಡಬ್ರಹ್ಮತತ್ತ್ವದ ಸಾಕ್ಷಾತ್ಕಾರವಾಗಿರುತ್ತದೆ. ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ॥ ಎಂಬ ಗೀತಾವಾಕ್ಯವೂ, ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನು ಪಶ್ಯತಿ ॥ ಎಂಬ ಈಶೋಪನಿಷದ್ವಾಕ್ಯವೂ ಈ ಜೀವನ್ಮುಕ್ತ ಸ್ಥಿತಿಯನ್ನು ವರ್ಣಿಸಿರುತ್ತವೆ. ಅವಿದ್ಯೆಯನ್ನು ವಿದ್ಯೆಯು ನಾಶಮಾಡಿರುವ, ಯೋಗ ದಿಂದ ಸಿದ್ಧಿಯನ್ನು ಪಡೆದಿರುವ, ಈ ಸ್ಥಿತಿಯಲ್ಲಿ ವೇದಾಂತಶಾಸ್ತ್ರಕ್ಕೂ, ಯೋಗ ಶಾಸ್ತ್ರಕ್ಕೂ, ಉಪಾಸನಾಧರ್ಮಶಾಸ್ತ್ರಕ್ಕೂ ಪರಸ್ಪರವಾಗಿ ಇರುವ ಪೂರಕಪೋಷಕ ಭಾವವೆಂಬ ಸಾಮಂಜಸ್ಯವನ್ನು ಮನಗಾಣಬಹುದು.

ಸ್ವಯಮುಚ್ಚಲಿತೇ ದೇಹೇ ದೇಹೀ ನಿತ್ಯಂ ಸಮಾಧಿನಾ ।
ನಿಶ್ಚಲಂ ತಂ ವಿಜಾನೀಯಾತ್ಸಮಾಧಿರಭಿಧೀಯತೇ ।

ಈ ಸ್ಥಿರವಾದ ಸ್ವಾಭಾವಿಕಸ್ಥಿತಿಯಲ್ಲಿರುವಾಗ, ಸಮಾಧಿಯು ಅಭ್ಯಾಸ, ವೈರಾಗ್ಯ, ಜ್ಞಾನ ಇವುಗಳಿಂದ ದೃಢವಾಗಿರಲು, ಚಕ್ರಭ್ರಮಿನ್ಯಾಯದಂತೆ ಈ ಶರೀರವು ಮಾತ್ರ ಮುಂಚಿನಂತೆ ತಾನಾಗಿಯೇ ವ್ಯವಹರಿಸುತ್ತಿದ್ದರೂ, ಆ ಯೋಗಿ ಯಾದ ಜ್ಞಾನಿಯನ್ನು ಅಚಂಚಲನೆಂದು ಭಾವಿಸಬೇಕು. ಈ ಸ್ಥಿತಿಗೇ ಸಮಾಧಿ ಎಂದು ಹೆಸರು. ಇದೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಉಪದೇಶಿಸಿರುವ ನಿಸ್ತ್ರೈ ಗುಣ್ಯಸ್ಥಿತಿಯು, ಎಂದರೆ ಮೂರು ಗುಣಗಳನ್ನೂ ಮೀರಿರುವ ಸ್ಥಿತಿಯು. ಇದೇ ಸ್ಥಿತಪ್ರಜ್ಞನ ಸ್ಥಿತಿಯೂ ಆಗಿದೆ. ಇದನ್ನೇ "ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ" ಎಂದೂ,

ಜಾಗ್ರತ್ಸ್ವಪ್ನ ಸುಷುಪ್ತಿಷು ಸ್ಫುಟತರಾ ಯಾಸಂವಿದುಜ್ಜೃಂಭತೇ
ಯಾ ಬ್ರಹ್ಮಾದಿಪಿಪೀಲಿಕಾಂತತನುಷು ಪ್ರೋತಾ ಜಗತ್ಸಾಕ್ಷಿಣೀ ।
ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಾ ಪ್ರಜ್ಞಾಪಿ ಯಸ್ಯಾಸ್ತಿ ಚೇತ್
ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥

ಎಂದೂ, ಶ್ರೀಶಂಕರಾಚಾರ್ಯರೂ ವರ್ಣಿಸಿರುತ್ತಾರೆ.

ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಪರಂ ಪದಂ।
ತತ್ರ ತತ್ರ ಪರಂ ಬ್ರಹ್ಮ ಸರ್ವತ್ರ ಸಮುವಸ್ಥಿತಂ ॥ಇತಿ॥

ಇಂತಹ ಸ್ಥಿತಿಯಲ್ಲಿರುವ ಯೋಗಿಯೂ ಜ್ಞಾನಿಯೂ ಆದ ಜೀವನ್ಮುಕ್ತನು ಕೃಷ್ಣ, ನಾರದ, ಶಂಕರರಂತೆ ಇರುತ್ತಾನೆ. ಅವನ ಮನಸ್ಸೂ ಶರೀರವೂ ಎಲ್ಲೆಲ್ಲಿ ಹೇಗೆ ಹೇಗೆ ವ್ಯವಹರಿಸುತ್ತಿರುವಂತೆ ನಮಗೆ ಕಾಣಬರುತ್ತಿದ್ದರೂ, ಆ ಜ್ಞಾನಿಯು ಮಾತ್ರ ಸಮಾಧಿಯ ಪರಮಪದವಿಯಲ್ಲೇ ಇರುತ್ತಾನೆ. ಎಲ್ಲೆಡೆಯಲ್ಲೂ ಪರಬ್ರಹ್ಮವೇ ಅವನಿಗೆ ಗೋಚರವಾಗುತ್ತಿರುತ್ತದೆ. ಅಹಂಕಾರಮಮಕಾರಗಳು ನಿರ್ಮೂಲವಾಗಿಹೋಗಿರಲು, ಕರ್ತೃತ್ವ, ಭೋಕ್ತೃತ್ವ, ಸಂಕಲ್ಪಗಳಿಲ್ಲದೆ, ಅವನ ಹಿಂದಿನ ಕರ್ಮಗಳೂ ಈಗಿನ ಕರ್ಮಗಳೂ, ಜ್ಞಾನದಿಂದ ಹುರಿದಬೀಜಗಳಂತಾಗಿರುವುದರಿಂದ, ಮುಂದಿನ ಜನ್ಮಕ್ಕೆ ಕಾರಣವಿಲ್ಲದೆ, ಪ್ರಾರಬ್ಧಕರ್ಮದ ಫಲವಾದ ಈ ಶರೀರವು ಇದ್ದರೂ ಇಲ್ಲದಂತೆಯೂ, ಎಲ್ಲ ವ್ಯವಹಾರಗಳೂ ದಗ್ಧಪಟದಂತೆಯೂ ಇರುತ್ತವೆ. ಈ ಪ್ರಾರಬ್ಧಕರ್ಮಾವಸಾನದಲ್ಲಿ ಈ ಶರೀರವು ಮೃತವಾಗಲು, ಕರ್ಮಕಾರಣವಿಲ್ಲದುದರಿಂದ ಪುನಃ ಜನನ ಮರಣಗಳಿಲ್ಲದೆ, ಆ ಜ್ಞಾನಿಯು ಪರಬ್ರಹ್ಮರೂಪದಲ್ಲಿ ಎಂದಿನಂತೆ ಉಳಿಯುತ್ತಾನೆ. ಇದೇ ಮೋಕ್ಷವು, ವಿದೇಹಕೈವಲ್ಯವು, ಎಂದು ಯೋಗಿಗಳೂ, ದುಃಖಧ್ವಂಸವೆಂದು ತಾರ್ಕಿಕರೂ, ಅವಿದ್ಯಾನಾಶವೆಂದು ವೇದಾಂತಿಗಳೂ, ಆನಂದಾನುಭವವೆಂದು ಶೈವ, ವೈಷ್ಣವ, ಶಾಕ್ತಾದ್ವೈತಿಗಳೂ ವರ್ಣಿಸಿರುತ್ತಾರೆ. ಇದನ್ನೇ ಈ ಪದ್ಯವೂ ವರ್ಣಿಸಿರುತ್ತದೆ.

ಯಶ್ಶೈವೈಸ್ಸಮುಪಾಸ್ಯತೇ ಶಿವ ಇತಿ, ಬ್ರಹ್ಮೇತಿ ವೇದಾಂತಿನಃ,
ವಿಷ್ಣುರ್ವೈಷ್ಣವಭಕ್ತಿಮಾರ್ಗನಿರತೈಃ, ಶಾಕ್ತೈಸ್ತು ದೇವೀ ಪರಾ ।
ಬೌದ್ಧೈರ್ಬುದ್ಧ ಇತಿ, ಸ್ವಭಾವ ಇತರೈಃ, ಅಲ್ಲೇತಿ ಮುಸ್ಲೀಂಜನೈಃ,
ಕ್ರಿಸ್ತೈರ್ಗಾಡ್ ಇತಿ, ನಾಮಮಾತ್ರವಿವಿಧಂ ಪಾಯಾತ್ತದೇಕಂ ಮಹಃ ॥

ಶ್ರೀ ಶಂಕರಾಚಾರ್ಯರು 'ತ್ರಯೀಸಾಂಖ್ಯಂ ಯೋಗಃ' ಎಂಬ ಪದ್ಯದಲ್ಲಿ ವಿವರಿಸಿರುವ ತತ್ತ್ವವನ್ನೂ, ಮತಗಳ ಸಾಮರಸ್ಯವನ್ನೂ, ಬೇಲೂರು ಕೇಶವ ದೇವಸ್ಥಾನದ ಶಾಸನದಲ್ಲಿ ದೊರೆಯುವ 'ಯಂ ಶೈವಾಸ್ಸಮುಪಾಸತೇ ಶಿವ ಇತಿ' ಎಂಬ ಪದ್ಯದಲ್ಲಿ ಮುಂದುವರಿಯಿಸಿದೆ. ಈ ಧರ್ಮಸಮನ್ವಯದ ಭಾವವನ್ನು ಈಗಿನ ಕಾಲಕ್ಕೆ ತಕ್ಕಂತೆ ವಿಸ್ತರಿಸಿ ಈ ಪದ್ಯದಲ್ಲಿ ವಿವರಿಸಿದೆ. ಶೈವ, ವೈಷ್ಣವ, ಮುಂತಾದ ಸಾರಸ್ವತತತ್ತ್ವಗಳಲ್ಲಿ, ಸಾಮರಸ್ಯದ ಅಭೇದವನ್ನು ಎಲ್ಲ ಪುರಾಣಗಳಲ್ಲಿಯೂ ನಿರೂಪಿಸಿರುವಂತೆ ಮಾರ್ಕಂಡೇಯ ಪುರಾಣದಲ್ಲಿಯೂ, ದೇವೀಸಪ್ತಶತಿಯ ಪ್ರಾಧಾನಿಕ ರಹಸ್ಯನಿರೂಪಣೆಯ ಪ್ರಸಂಗದಲ್ಲೂ ವಿವರಿಸಿದೆ. ಇದು ಇನ್ನು ಮುಂದೆ ಈ

ಪ್ರಪಂಚದಲ್ಲಿ ಪ್ರಚಾರಕ್ಕೆ ಬರಬೇಕಾಗಿರುವ ವಿಶ್ವಧರ್ಮದ ಅರಿವು ಆಚರಣೆಗಳಿಗೆ ಪೀಠಿಕೆಯಂತೆಯೂ, ಮೊದಲಿನ ಮೆಟ್ಟಲಿನಂತೆಯೂ ಇದೆ.

ಅಥ ಹೈನಂ ದೇವಾ ಊಚುಃ ನವಚಕ್ರವಿವೇಕಮನು
ಬ್ರೂಹೀತಿ । ತಥೇತಿ ಸಹೋವಾಚ । ಆಧಾರೇ ಬ್ರಹ್ಮ
ಚಕ್ರಂ ತ್ರಿರಾವೃತ್ತಿ ಭಂಗಿಮಂಡಲಾಕಾರಂ, ತತ್ರ ಮೂಲ
ಕಂದೇ ಶಕ್ತಿಃ । ಪಾವಕಾಕಾರಂ ಧ್ಯಾಯೇತ್ತತ್ರೈವ
ಕಾಮರೂಪಪೀಠಂ ಸರ್ವಕಾಮಫಲಪ್ರದಂ ಭವತಿ ।
ಇತ್ಯಾಧಾರ ಚಕ್ರಂ ॥

ಅನಂತರದಲ್ಲಿ ದೇವತೆಗಳು ಶ್ರೀಮನ್ನಾರಾಯಣನನ್ನು ಕುರಿತು ನವಚಕ್ರದ ಸ್ವರೂಪವಿವೇಚನೆಯನ್ನು ತಿಳಿಯಹೇಳಬೇಕೆಂದು ಕೇಳಿಕೊಂಡರು. ಹಾಗೆಯೇ ಆಗಲೆಂದು ನಾರಾಯಣನು ಹೀಗೆ ವಿವರಿಸಿದನು.

ಸಾಮಾನ್ಯವಾಗಿ ನಮ್ಮ ದೇಹದಲ್ಲಿ ಕಿಬ್ಬೊಟ್ಟೆಯ ಬುಡದಿಂದ ತಲೆಯ ತುದಿಯ ವರೆಗೆ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಎಂಬ ಅನ್ವರ್ಥನಾಮವುಳ್ಳ ಆರು ಚಕ್ರಗಳು, ಕಮಲಗಳು, ದುಂಡಾದಸ್ಥಾನಗಳು ಇವೆ ಯೆಂದು ಯೋಗಶಾಸ್ತ್ರದಲ್ಲಿ ಪತಂಜಲಿ ಮುಂತಾದ ಮಹರ್ಷಿಗಳೂ, ಮತ್ಸ್ಯೇಂದ್ರ ಗೋರಕ್ಷ ಮುಂತಾದ ಇತರ ಸಿದ್ಧಯೋಗಿಗಳೂ ವರ್ಣಿಸಿದಾರೆ. ಆದರೂ ಆ ಗೋರಕ್ಷ ಮುಂತಾದ ಆಯಾಯ ವ್ಯಕ್ತಿಗಳ ಶರೀರಪ್ರಕೃತಿ, ಉಪಾಸನೆಯ ಸೌಕರ್ಯ, ವೈಶದ್ಯದಲ್ಲಿ ಇಚ್ಛಾವಿಶೇಷ, ಇವುಗಳ ದೃಷ್ಟಿಯಿಂದ ಈ ಚಕ್ರಗಳ ಸಂಖ್ಯೆಯನ್ನು ಏಳು, ಎಂಟು, ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು ಹೀಗೆ ಹೆಚ್ಚಿಸಿ, ವಿಸ್ತರಿಸಿ, ವಿವರಿಸಿರುತ್ತಾರೆ. ಆದರಂತೆ ಮೂಲಾಧಾರಚಕ್ರದ ಅಡಿಯಲ್ಲಿ ತ್ರಿಕೋಣರೂಪದ ಅಗ್ನಿಚಕ್ರವನ್ನು ಸೇರಿಸಿ ಏಳೆಂದೂ, ಆಜ್ಞಾಚಕ್ರದಮೇಲೆ ಸಹಸ್ರಾರಚಕ್ರವನ್ನು ಸೇರಿಸಿ ಎಂಟೆಂದೂ, ಅನಾಹತಚಕ್ರದ ಎಡಬಲಭಾಗಗಳಲ್ಲಿ ಮನಶ್ಚಕ್ರ, ಹೃಚ್ಚಕ್ರ ಗಳನ್ನೂ ಸೇರಿಸಿ ಹತ್ತು ಎಂದೂ, ತಾಲುಚಕ್ರ, ಆಕಾಶಚಕ್ರಗಳನ್ನು ಸೇರಿಸಿ ಹನ್ನೆರಡು ಚಕ್ರಗಳೆಂದೂ, ವಿವರಿಸುವುದುಂಟು. ಆದರೆ ಈ ಉಪನಿಷತ್ತಿನಲ್ಲಿಯೂ ಈ ಚಕ್ರ ಸ್ಥಾನಗಳ ಸಂಖ್ಯೆಯನ್ನು ಒಂಬತ್ತು ಎಂದು ವಿವರಿಸಿದೆ. ಈ ಚಕ್ರಸ್ಥಾನಗಳಲ್ಲಿ ಮೊದಲನೆಯದು ಮೂಲಾಧಾರವು. ಅದು ಮೂರಾವೃತ್ತಿ ಬಳಸಿರುವ ಮತ್ತು ಬಗ್ಗಿರುವ, ಒಟ್ಟಿನಲ್ಲಿ ದುಂಡಾದ, ಆಕಾರವುಳ್ಳದು. ಇದನ್ನೇ ಬ್ರಹ್ಮನಂತೆ ಉತ್ಪತ್ತಿಗೆ

ಕಾರಣವಾದುದರಿಂದ ಬ್ರಹ್ಮಚಕ್ರವೆನ್ನುತ್ತಾರೆ. ಇದಕ್ಕೆ ಸತ್ತ್ವರಜಸ್ತಮೋಗುಣತ್ರಯಾತ್ಮಕವಾದ ಮೂಲಪ್ರಕೃತಿ ಎಂದೂ ವ್ಯವಹಾರವಿದೆ. ಇಲ್ಲಿಯೇ ಗಡ್ಡೆಯಲ್ಲಿ ಹೇಗೋ ಹಾಗೆ, ಮೊಳೆಯುವ, ಸೃಷ್ಟಿಯಾಗುವ, ಶಕ್ತಿಯು ನೆಲಸಿರುವುದು, ಇದು ಬೆಂಕಿಯಂತೆ ಕೆಂಪುಬಣ್ಣವುಳ್ಳುದು. "ರಜೋರಾಗಾತ್ಮಕಂ ವಿದ್ಧಿ" ಎಂದು ಶ್ರೀಕೃಷ್ಣನೂ ಗೀತೆಯಲ್ಲಿ ಉಪದೇಶಿಸಿರುವನು. ಆದುದರಿಂದಲೇ ಇದನ್ನು ಕಾಮರೂಪಪೀಠವೆಂದೂ ಧ್ಯಾನಿಸಬೇಕು. ಇದರ ಉಪಾಸನೆಯಿಂದ ಎಲ್ಲ ಇಷ್ಟಾರ್ಥಗಳೂ ಸಿದ್ಧಿಸುವುವೆಂದು ಹೇಳಿದ್ದರೂ, ಉಪಾಸಕನ, ಅಧಿಕಾರಿವಿಶೇಷದ ಇಚ್ಛೆಯು ನೆರವೇರುವುದೆಂಬುದು ತಾತ್ಪರ್ಯವು, ಇದು ಮೂಲಾಧಾರ ಚಕ್ರಸ್ಥಾನದ ಸ್ವರೂಪವು.

ಲಲಿತಾಸಹಸ್ರನಾಮಭಾಷ್ಯದಲ್ಲಿ ಭಾಸ್ಕರರಾಯ ದೀಕ್ಷಿತರು, ಈ ಸ್ಥಾನವು ನಾಲ್ಕು ದಳಗಳುಳ್ಳ ಕಮಲದಂತಿದೆ. ಕುಳಕುಂಡವೆಂಬ ಹೆಸರುಳ್ಳ ಇದರ ಕರ್ಣಿಕೆಯ ಮಧ್ಯಬಿಂದುವಿನಲ್ಲಿ ಕುಂಡಲಿನೀಶಕ್ತಿಯು ಮುಸುಕುಹಾಕಿಕೊಂಡು ಸರ್ವದಾ ಮಲಗಿರುತ್ತದೆ. ಅದನ್ನು ಉಪಾಸಕನು ಎಬ್ಬಿಸಬೇಕು. ಇದು ದೇಹದ ಎಲ್ಲ ಬಗೆಯ ಧಮನೀ, ಸಿರಾ, ನಾಡಿಗಳಿಗೆ ಆಧಾರವಾಗಿರುವುದರಿಂದಲೂ, ಸುಷುಮ್ನಾನಾಡಿಗೆ ಇಲ್ಲಿ ಪ್ರಾರಂಭವಾಗಿರುವುದರಿಂದಲೂ ಇದಕ್ಕೆ ಮೂಲಾಧಾರಪದ್ಮವೆಂದು ಹೆಸರು, ಎಂದು ವಿವರಿಸಿರುತ್ತಾರೆ.

ದ್ವಿತೀಯಂ ಸ್ವಾಧಿಷ್ಠಾನಚಕ್ರಂ ಷಡ್ದಳಂ ತನ್ಮಧ್ಯೇ
ಪಶ್ಚಿಮಾಭಿಮುಖಂ ಲಿಂಗಂ ಪ್ರವಾಳಾಂಕುರಸದೃಶಂ
ಧ್ಯಾಯೇತ್ತತ್ರೈವೌಡ್ಯಾಣಪೀಠಂ ಜಗದಾಕರ್ಷಣಸಿದ್ಧಿದಂ ಭವತಿ ॥

ಎರಡನೆಯ ಚಕ್ರಕ್ಕೆ ಸ್ವಾಧಿಷ್ಠಾನವೆಂದು ಹೆಸರು. ಇದು ಆರುದಳಗಳುಳ್ಳ ಕಮಲದಂತಿದೆ. ಇದರ ಕರ್ಣಿಕೆಯ ಮಧ್ಯದಲ್ಲಿ ಹವಳದ ಚಿಗುರಿನಂತಿರುವ, ಕೆಂಬಣ್ಣದ, ಪ್ರತ್ಯಗಾತ್ಮನಿಗೆ ಅಭಿಮುಖವಾಗಿ ಹೊರಡುತ್ತಿರುವ, ಮೊಳಕೆಯ ಗುರುತನ್ನು ಧ್ಯಾನಿಸಬೇಕು. ಅಲ್ಲಿಯೇ ಉಡ್ಡಿಯಾನದ ಎಂದರೆ, ಮೇಲೆದ್ದು ಹಾರಿ ಮುಂದುವರಿಯುವ, ಕುಂಡಲಿನೀ ಶಕ್ತಿಯು ಅನುಸರಿಸುವ ಮಾರ್ಗದ ಸ್ಥಾನವು ಇದೆ. ಈ ಪದ್ಮಸ್ಥಾನವು ಬದಲಾಯಿಸುತ್ತಿರುವ, ನಾನಾಮುಖವಾಗಿ ಪರಿಣಾಮ ಹೊಂದುತ್ತಿರುವ, ಜಗತ್ತೆಲ್ಲವನ್ನೂ ಸನ್ಮಾರ್ಗದಲ್ಲಿ ಶ್ರೇಯಸ್ಕರವಾದ ದಾರಿಯಲ್ಲಿ ಪ್ರವಹಿಸಿ ಮುಂದುವರಿಯುವಂತೆ ಅನುಕೂಲಪಡಿಸಿ ಸಹಾಯಮಾಡಬಲ್ಲುದು.

ತೃತೀಯಂ ನಾಭಿಚಕ್ರಂ ಪಂಚಾವರ್ತಂ ಸರ್ಪಕುಟಿಲಾ
ಕಾರಂ ತನ್ಮಧ್ಯೇ ಕುಂಡಲಿನೀಂ ಬಾಲಾರ್ಕಕೋಟಿಪ್ರಭಾಂ,
ತನುಮಧ್ಯಾಂ, ಧ್ಯಾಯೇತ್ । ಸಾಮರ್ಥ್ಯಶಕ್ತಿಃ ಸರ್ವಸಿದ್ಧಿ
ಪ್ರದಾಭವತಿ ॥

ಮೂರನೆಯದು ನಾಭಿ (ಹೊಕ್ಕಳಿನಸಮದಲ್ಲಿರುವ) ಚಕ್ರವು. ಇದು ಹಾವಿನಂತೆ ವಕ್ರವಾಗಿ, ಬಗ್ಗಿ, ಬಳುಕುತ್ತಿರುವಂತೆ ಐದುಸಲ ಬಳಸುತ್ತದೆ. ಅದರ ಮಧ್ಯದಲ್ಲಿ ಕೋಟಿಬಾಲಸೂರ್ಯರ ಪ್ರಕಾಶವುಳ್ಳ ಕುಂಡಲಿನಿಯನ್ನು ಭಾವಿಸಬೇಕು. ಇದನ್ನೇ ಸೂಕ್ಷ್ಮವಾದ ಮಧ್ಯಪ್ರದೇಶವುಳ್ಳ, ಎಲ್ಲ ಬಗೆಯ ಎಂದರೆ, ಆಯಾ ಉಪಾಸಕರು ಕೋರುವ, ಸಿದ್ಧಿಗಳನ್ನು ಉಂಟುಮಾಡಬಲ್ಲ, ಸಾಮರ್ಥ್ಯರೂಪವಾದ ಶಕ್ತಿಯು ಎಂದು ಧ್ಯಾನಿಸಬೇಕು.

ಮಣಿಪೂರಚಕ್ರಂ ಹೃದಯಚಕ್ರಮಷ್ಟದಳಮಧೋಮುಖಂ,
ತನ್ಮಧ್ಯೇ ಜ್ಯೋತಿರ್ಮಯಲಿಂಗಾಕಾರಂ ಧ್ಯಾಯೇತ್ ।
ಸೈವ ಹಂಸಕಳಾ ಸರ್ವಪ್ರಿಯಾ ಸರ್ವಲೋಕವಶ್ಯಕರೀ ಭವತಿ ॥

ನಾಲ್ಕನೆಯದು ಮಣಿಪೂರಚಕ್ರವು. ಇದಕ್ಕೇ ಹೃದಯಚಕ್ರ ಅಥವಾ ಹೃತ್ಕಮಲವೆಂದೂ ವ್ಯವಹಾರವಿದೆ. ಇದು ಎಂಟು ದಳಗಳುಳ್ಳ ಕಮಲದಂತಿದೆ ಮತ್ತು ಕೆಳಮುಖವಾಗಿ ಬಗ್ಗಿರುತ್ತದೆ. ಇದರ ಮಧ್ಯದಲ್ಲಿ ಶುಕ್ಲವರ್ಣವುಳ್ಳ, ಜ್ಯೋತೀರೂಪವಾಗಿರುವ, ಗುಣತ್ರಯಸಂಬಂಧವಿಲ್ಲದೆ ಶುದ್ಧಸ್ಫಟಿಕದಂತಿರುವ, ಅಂಗುಷ್ಠದ ಪರಿಮಾಣವುಳ್ಳ, ಲಿಂಗದ ಆಕಾರವುಳ್ಳ, ಸ್ವಲ್ಪ ದೀರ್ಘವಾದ ಬಿಂದುವಿನಂತೆ ಆಕಾರವುಳ್ಳ, ದಹರಾಕಾಶವೆಂದು ಪ್ರಸಿದ್ಧವಾದ ಚಿತ್ಪ್ರಕಾಶವು ಗೋಚರವಾಗುತ್ತದೆ. ಇಲ್ಲಿ ಚಿಚ್ಛಕ್ತಿಯನ್ನು ಧ್ಯಾನಿಸಬೇಕು. ಈ ಸ್ಥಾನಕ್ಕೆ ರೇಚಕಪೂರಕ (ಅರ್ಪಿಸಿ ಸ್ವೀಕರಿಸುವ) ತತ್ತ್ವವನ್ನು ಸೂಚಿಸುವ, ಹಂಸಕಳಾ ಎಂದೂ ವ್ಯವಹಾರವಿದೆ. ಹನ್ನೊಂದು ಇಂದ್ರಿಯಗಳೂ ಐದು ಭೂತಗಳೂ ಸೇರಿ ಷೋಡಶಕಲಾ ಎಂಬ ಸಂಜ್ಞೆಯು ರೂಢವಾಗಿದೆ. ಇದು ಎಲ್ಲ ಉಪಾಸಕರಿಗೂ ಹಿತಕರವಾದುದು. ಎಲ್ಲರನ್ನೂ ಇದು ಒಲಿಸಿಕೊಳ್ಳುತ್ತದೆ.

ಕಂಠಚಕ್ರಂ ಚತುರಂಗುಲಂ, ತತ್ರ ವಾಮೇ ಇಡಾ
ಚಂದ್ರನಾಡೀ, ದಕ್ಷಿಣೇ ಪಿಂಗಳಾ ಸೂರ್ಯನಾಡೀ,
ತನ್ಮಧ್ಯೇ ಸುಷುಮ್ನಾಂ ಶ್ವೇತವರ್ಣಾಂ ಧ್ಯಾಯೇತ್ ।
ಯ ಏವಂ ವೇದಾನಾಹತಸಿದ್ಧಿದಾ ಭವತಿ ॥

ಐದನೆಯದು ಕಂಠಚಕ್ರವು. ನಾಲ್ಕು ಅಂಗುಲಗಳಷ್ಟು ಪರಿಮಾಣವುಳ್ಳದು. ಅದರಲ್ಲಿ ಎಡಭಾಗದಲ್ಲಿ ಇಡಾ ಎಂಬ ಚಂದ್ರನಾಡಿಯೂ, ಬಲಭಾಗದಲ್ಲಿ ಪಿಂಗಳಾ ಎಂಬ ಸೂರ್ಯನಾಡಿಯೂ, ಇವೆರಡರ ಮಧ್ಯದಲ್ಲಿ ಶುಕ್ಲವರ್ಣವುಳ್ಳ ಸುಷುಮ್ನಾ ನಾಡಿಯೂ ಮೇಲುಮುಖವಾಗಿ ಪ್ರಸರಿಸುತ್ತವೆ. ಹೀಗೆ ಯಾರು ತಿಳಿದು ಅನುಷ್ಠಾನ ಪೂರ್ವಕವಾಗಿ ಧ್ಯಾನವಮಾಡುತ್ತಾರೋ, ಅಂಥವರಿಗೆ ಈ ಅನಾಹತಪದ್ಮದಲ್ಲಿ ಸಿದ್ಧಿಯು ಲಭಿಸುತ್ತದೆ. ಎಂದರೆ ಹೃದಯಸ್ಫೋಟಾದಿ ಅಪಮೃತ್ಯುಗಳಿಗೆ ಅವಕಾಶಕೊಡದೆ ಆಯುಸ್ಸನ್ನು ಕಾಪಾಡುತ್ತದೆ.

ತಾಲುಚಕ್ರಂ ತತ್ರಾಮೃತಧಾರಾ ಪ್ರವಾಹಃ ಘಂಟಿಕಾಲಿಂಗಂ ಮೂಲಚಕ್ರರಂಧ್ರೇ ರಾಜದಂತಾವಲಂಬಿನೀ ವಿವರಂ ದಶಮ ದ್ವಾರಂ, ತತ್ರಂ ಶೂನ್ಯಂ ಧ್ಯಾಯೇಚ್ಚಿತ್ತಲಯಂ ಭವತಿ ॥

ಆರನೆಯದು ತಾಲುಚಕ್ರವು. ಇದು ಬಾಯಿಯಲ್ಲಿ ಹಿಂಭಾಗದಲ್ಲಿ ಕಿರು ನಾಲಗೆಯ ಎಡಬಲಭಾಗಗಳಲ್ಲಿರುತ್ತದೆ. ಪಿಂಡಗಳ ಮೇಲಿರುವ ಅಟ್ಟದಂತಿರುವ ಪ್ರದೇಶವಾಗಿರುತ್ತದೆ. ಅಲ್ಲಿ ಚಿತ್ತವನ್ನು ಏಕಾಗ್ರವಾಗುವಂತೆ ನಿಲ್ಲಿಸಿದರೆ ಅಮೃತ ಧಾರೆಯು ಹರಿಯಲು ಆರಂಭಿಸುವುದು. ಎಂದರೆ ಹಿಂದಿನ ಐದುಚಕ್ರಗಳನ್ನು ದಾಟಿ ಮೇಲಕ್ಕೆ ಏರಿರುವ ಪ್ರಾಣಶಕ್ತಿಯು ಅಲ್ಲಿಗೆ ತಲಪಿ ಆಭಾಗದ ಮಸ್ತಿಷ್ಕವು ಕಾದು ಅಲ್ಲಿಂದ ಸಿಹಿಯಾದ ತುಪ್ಪದ ಹನಿಗಳಂತಿರುವ ಬಿಂದುಗಳು ಹರಿಯುವುವು. ಓಂಕಾರ ನಾದದಂತೆ ಘಂಟಾನಾದವು ಕೇಳಿಬರುವುದು. ಅಲ್ಲದೆ ಅಲ್ಲಿ ತಾಲುಮೂಲದಲ್ಲಿರುವ ಈ ಚಕ್ರದ ಅಂತರಾಳದಲ್ಲಿ ಗುರ್ತಿಸಬಹುದಾದ ಕಪೋಲದ ಮೂಳೆಯ ಬುಡದಲ್ಲಿ ಆನೆಯ ದಂತಗಳ ಬುಡದಂತಿರುವ ಪ್ರದೇಶದಲ್ಲಿ ದಶಮದ್ವಾರದ ಹಾಗಿರುವ ಆಕಾಶ ವಿರುವುದು. ಅಲ್ಲಿ ಶೂನ್ಯತತ್ತ್ವವು ಎಂದರೆ ಗುಣತ್ರಯಪರಿಣಾಮರೂಪಗಳಾದ ವೃತ್ತಿವಿಶೇಷರೂಪಗಳಲ್ಲದ ಸಾಮಾನ್ಯಪರತತ್ತ್ವವು ಧ್ಯಾನಕ್ಕೆ ಗೋಚರವಾಗುವಂತೆ ಮಾಡಬೇಕು. ಅಂತಹ ಧ್ಯಾನದಿಂದ ಚಿತ್ತದಲ್ಲಿರುವ ಎಲ್ಲಬಗೆಯ ಲೌಕಿಕವಾದ ದ್ವಂದ್ವವೃತ್ತಿಗಳ ಸಮೂಹವು ಅಡಗಿಹೋಗಿರಲು, ಈ ಎಲ್ಲ ಪ್ರತ್ಯಯಗಳ ಎಂದರೆ ವೃತ್ತಿಗಳ ಅಧಿಷ್ಠಾನವಾದ ಚಿಜ್ಜ್ಯೋತಿಯು ಗೋಚರವಾಗಲು ಪ್ರಾರಂಭವಾಗುತ್ತದೆ.

ಸಪ್ತಮಂ ಭ್ರೂಚಕ್ರಮಂಗುಷ್ಠಮಾತ್ರಂ ತತ್ರ ಜ್ಞಾನನೇತ್ರಂ ದೀಪಶಿಖಾಕಾರಂ ಧ್ಯಾಯೇತ್ । ತದೇವ ಕಪಾಲಕಂದಂ ವಾಕ್ಸಿದ್ಧಿದಂ ಭವತಿ ।

ಏಳನೆಯದು ಭ್ರೂಚಕ್ರವು. ಎಂದರೆ ಎರಡು ಹುಬ್ಬುಗಳ ನಡುವೆ ಇರುವ ಸ್ಥಾನವು. ಇದು ಎರಡು ದಳಗಳುಳ್ಳ ಪದ್ಮರೂಪವುಳ್ಳದು. ಈ ಕಮಲಸ್ಥಾನದ

ಮಧ್ಯದಲ್ಲಿ ಹೆಬ್ಬೆಟ್ಟಿನಷ್ಟು ಅವಕಾಶವಿರುತ್ತದೆ. ಅಲ್ಲಿ ಜ್ಞಾನದ ಕಣ್ಣು ಕೆಲಸ ಮಾಡುತ್ತದೆ. ಗಾಳಿ ಇಲ್ಲದೆಡೆಯಲ್ಲಿರುವ ದೀಪದ ಜ್ವಾಲೆಯಂತೆ ಸ್ತಿಮಿತವಾಗಿಯೂ ಮೇಲೆ ಮೇಲೆ ಸಣ್ಣಗಾಗುತ್ತಲೂ ಇರುವ ಚಿತ್ಪ್ರಕಾಶವು ಗೋಚರವಾಗುತ್ತದೆ. ಅದೇ ಬ್ರಹ್ಮಕಪಾಲದಲ್ಲಿರುವ—ಕಂ ಪಾಲಯತಿ ಆನಂದವನ್ನು ಕಾಪಾಡಿರುವ, ಕಂದದಾತಿ ಸುಖಾನುಭವವನ್ನುಂಟುಮಾಡುವ—ಕಪಾಲಕಂದವು ಎಂದರೆ ಚಿದಾನಂದ ಸ್ಥಾನವು. ಇಲ್ಲಿ ವಾಕ್ಸಿದ್ಧಿಯನ್ನು ಎಂದರೆ ಆತ್ಮವಾಚಕವಾದ ಸರ್ವವಾಙ್ಮಯ ಮೂಲವಾದ ಓಂಕಾರದ ನಿಜಸ್ವರೂಪದ ಜ್ಞಾನವನ್ನು ಉಪಾಸಕನು ಪಡೆಯುತ್ತಾನೆ.

ಆಜ್ಞಾಚಕ್ರಮಷ್ಟಮಂ, ಬ್ರಹ್ಮರಂಧ್ರಂ, ನಿರ್ವಾಣಚಕ್ರಂ, ತತ್ರ ಸೂಚಿಕಾಗೃಹೇತರಂ ಧೂಮ್ರಶಿಖಾಕಾರಂ ಧ್ಯಾಯೇತ್ । ತತ್ರ ಜಾಲಂಧರಪೀಠಂ ಮೋಕ್ಷಪ್ರದಂ ಭವತಿ । ಇತಿ ಪರಬ್ರಹ್ಮಚಕ್ರಂ ।

ಎಂಟನೆಯದು ಆಜ್ಞಾಚಕ್ರವು, ಆಜ್ಞಾ ಎಂದರೆ ಪರತತ್ತ್ವದ ಜ್ಞಾನವು ಸ್ವಲ್ಪಮಟ್ಟಿಗೆ ಆಗುವ ಪದ್ಮಸ್ಥಾನವು. ಈ ಸ್ಥಳವು ಭ್ರೂ ಚಕ್ರಕ್ಕಿಂತ ಒಂದು ಅಂಗುಲ ಮೇಲ್ಭಾಗದಲ್ಲಿದೆ. ಅಲ್ಲಿ ಬ್ರಹ್ಮರಂಧ್ರವನ್ನು ಎಂದರೆ ಬ್ರಹ್ಮಸ್ವರೂಪದ ಉಪಲಬ್ಧಿಸ್ಥಾನವನ್ನು ಕಾಣಬಹುದು. ಅದೇ ಮೋಕ್ಷವನ್ನು ದೊರೆಯಿಸುವ ನಿರ್ವಾಣ ಎಂದರೆ ವಿಕ್ಷೇಪಕವಾದ ಚಿತ್ತವೃತ್ತಿಗಳಿಲ್ಲದ ಚಕ್ರಸ್ಥಾನವು. ದೋಷ ಸಂಪರ್ಕವಿಲ್ಲದ ಪದ್ಮಸ್ಥಾನವು ಎಂದು ಧ್ಯಾನಮಾಡಬೇಕು. ಅಲ್ಲಿ ಕಾಡುಪಾರಿವಾಳದ ಕತ್ತಿನಲ್ಲಿರುವ ನೀಲಕೆಂಪುಮಿಶ್ರವಾದ ಬಣ್ಣವುಳ್ಳ ಧೂಮಶಿಖೆಯು ಮೇಲಕ್ಕೇರು ತ್ತಿರುವಂತೆ ಗೋಚರವಾಗುತ್ತದೆ. ಈ ಚಕ್ರವೇ ಸೂಚಿಕಾ ಎಂದರೆ ಪ್ರಾಕೃತವಾದ ಲೌಕಿಕಜ್ಞಾನಗಳನ್ನು ತಿಳಿಸುವ, ಗೃಹೇತರಂ ಮೂಲಾಧಾರಾದಿಸ್ಥಾನಗಳಿಗಿಂತ ಭಿನ್ನವಾದ ಸ್ಥಾನವು. ಅಲ್ಲಿಂದ ಉಪಾಸಕನು ಸಹಸ್ರಾರಪದ್ಮಕ್ಕೆ ತಲಪಲು ಅನು ಕೂಲವಾಗುತ್ತದೆ. ಇದನ್ನೇ ಈ ಕಾರಣದಿಂದ ಪರಬ್ರಹ್ಮಚಕ್ರವೆಂದೂ, ವ್ಯವಹರಿ ಸುತ್ತಾರೆ. ಪರಬ್ರಹ್ಮಪ್ರಾಪಕವಾದ ಸ್ಥಾನವು ಎಂದು ತಾತ್ಪರ್ಯವು. ಇಲ್ಲಿ ಜಾಲಂಧರ ಎಂದರೆ ಮೇಲೆ ಪ್ರಸರಿಸುತ್ತಿರುವ ಎಲ್ಲ ಬಗೆಯ ನಾಡಿಗಳನ್ನೂ ಸಡಿಲ ವಾಗದಂತೆ ಬಿಗಿಹಿಡಿದಿರುವ ಬಂಧವಿಶೇಷವು ಸಹಾಯಮಾಡುತ್ತದೆ.

ನವಮಮಾಕಾಶಚಕ್ರಂ, ತತ್ರಷೋಡಶದಳಪದ್ಮಮೂರ್ಧ್ವ ಮುಖಂ ತನ್ಮಧ್ಯಕರ್ಣಿಕಾ ತ್ರಿಕೂಟಾಕಾರಂ ತನ್ಮಧ್ಯೇ ಊರ್ಧ್ವಶಕ್ತಿಕಾಂ ಪಶ್ಯನ್ ಧ್ಯಾಯೇತ್ತತ್ರೈವ ಪೂರ್ಣಗಿರಿಪೀಠಂ ಸರ್ವೇಚ್ಛಾಸಿದ್ಧಿಸಾಧನಂ ಭವತಿ ॥

ಒಂಬತ್ತನೆಯದು ಆಕಾಶಚಕ್ರವು- ಅದು ಹದಿನಾರುದಳಗಳುಳ್ಳ ಕಮಲದಂತಿದೆ. ಇದು ನೆತ್ತಿಯ ಮೇಲುಭಾಗದಲ್ಲಿದೆ. ಕುಂಡಲಿನೀಶಕ್ತಿಯ ಉದ್ಬೋಧನೆಯಿಂದ ಅದು ಮೇಲುಮುಖವಾಗಿರುತ್ತದೆ. ಆದರ ಮಧ್ಯಭಾಗದ ಕರ್ಣಿಕೆಯಲ್ಲಿರುವ ಕೇಸರಿಕಿಂಜಲ್ಕಗಳಲ್ಲಿ ಜೀವ, ಪ್ರಕೃತಿ, ಈಶ್ವರ ಈ ಮೂರು ವಿಧವಾದ ಅರಿವನ್ನೂ ಕೊಡುವ ಶಿಖರಗಳುಳ್ಳ ಪರ್ವತಪೀಠವನ್ನು ಧ್ಯಾನಿಸಬೇಕು. ಪರ್ವತದಿಂದ ಗಿರಿನದಿಗಳು ಹೊರಡುವಂತೆ ಇಲ್ಲಿಂದ ಜ್ಞಾನಧಾರೆಗಳು ಪ್ರವಹಿಸುತ್ತಿರುತ್ತವೆ. ಲೌಕಿಕವಾದ ಈ ಜ್ಞಾನಪ್ರವಾಹಗಳನ್ನು ತಡೆದು ಆತ್ಮಸ್ವರೂಪವಿಷಯಕವಾದ ಪ್ರತ್ಯಯಗಳನ್ನು ಏಕತಾನವಾಗುವಂತೆ ಮಾಡಬೇಕು. ಅಲ್ಲಿ ವಿಕಾಸವನ್ನು ಹೊಂದಿ ಮೇಲುಮುಖವಾಗಿರುವ ಶಕ್ತಿಯನ್ನು ಶಿವಶಕ್ತಿ ಅಥವಾ ಚಿಚ್ಛಕ್ತಿಯನ್ನು ಸಾಕ್ಷಾತ್ಕಾರಮಾಡಿಕೊಳ್ಳಲು ಕ್ರಮಕ್ರಮವಾಗಿ ಪ್ರಯತ್ನಿಸುತ್ತಾ ಅಪರೋಕ್ಷಾನುಭವವಾಗುವಂತೆ ಮಾಡಿಕೊಳ್ಳಬೇಕು. ಅಲ್ಲಿ ಸಿದ್ಧಿಯನ್ನು ಪಡೆದರೆ ಎಲ್ಲ ಕೋರಿಕೆಗಳೂ ಕೈಗೂಡುತ್ತವೆ.

ಸೌಭಾಗ್ಯಲಕ್ಷ್ಮ್ಯುಪನಿಷದಂ ನಿತ್ಯಮಧೀತೇ ಸೋಽಗ್ನಿ
ಪೂತೋ ಭವತಿ, ಸ ವಾಯುಪೂತೋ ಭವತಿ, ಸ
ಸಕಲಧನಧಾನ್ಯಸತ್ಪುತ್ರಕಳತ್ರಹಯಭೂಗಜಪಶು
ಮಹಿಷೀದಾಸೀದಾಸಯೋಗಜ್ಞಾನವಾನ್ ಭವತಿ ।
ನ ಸ ಪುನರಾವರ್ತತೇ, ನ ಸ ಪುನರಾವರ್ತತ ಇತ್ಯುಪನಿಷತ್ ॥

ಈ ಸೌಭಾಗ್ಯಲಕ್ಷ್ಮೀ ತತ್ತ್ವವನ್ನು ತಿಳಿಸುವ ಉಪನಿಷತ್ತನ್ನು ಯಾರು ಪ್ರತಿದಿನವೂ ಅರ್ಥಜ್ಞಾನಪೂರ್ವಕವಾಗಿ ಪಾರಾಯಣಮಾಡುತ್ತಾರೋ, ಜಪಧ್ಯಾನಗಳಿಂದ ಸಿದ್ಧಿಯನ್ನು ಪಡೆಯುತ್ತಾರೋ ಅಂಥವರು ಅಗ್ನಿ ಶುದ್ಧಿಯನ್ನು ಪಡೆದಂತೆ ದೋಷಸಂಬಂಧವಿಲ್ಲದವರಾಗುತ್ತಾರೆ. ವಾಯುವಿನಿಂದಲೂ ಪರಿಶುದ್ಧಿಯನ್ನು ಹೊಂದುತ್ತಾರೆ. ಅಲ್ಲದೆ ಅಂಥವರಿಗೆ ಎಲ್ಲ ಬಗೆಯ ಸಂಪತ್ತುಗಳೂ ಎಂದರೆ ಧನ, ಧಾನ್ಯ, ಒಳ್ಳೆಯ ಮಕ್ಕಳು ಒಳ್ಳೆಯ ಹೆಂಡತಿ, ಕುದುರೆ, ಆನೆ, ಹಸು ಎಮ್ಮೆ ದನ, ಭೂಮಿ ಆಸ್ತಿ, ಸೇವಕರು, ಸೇವಕಿಯರು ಮುಂತಾದ ಸಂಪತ್ತುಗಳೆಲ್ಲವೂ ದೊರೆಯುತ್ತವೆ. ಅಲ್ಲದೆ ಯೋಗಜ್ಞಾನವೂ ಉಂಟಾಗುತ್ತದೆ. ಭೂತ, ಭವಿಷ್ಯತ್, ವರ್ತಮಾನಕಾಲಗಳ ತಿಳಿವಳಿಕೆಯೂ ಉಂಟಾಗುತ್ತದೆ. ಕಡೆಗೆ ಅಂತಹ ಯೋಗಿಯು ಈ ಸಂಸಾರ ನಿರ್ಬಂಧ ದುಃಖಕ್ಕೆ ಪುನಃ ತಿರುಗಿ ಬರದೆ ಶಾಶ್ವತವಾದ ಮೋಕ್ಷಾನಂದದಲ್ಲಿರುತ್ತಾನೆ. ಈರೀತಿಯಾಗಿ ಈ ರಹಸ್ಯೋಪದೇಶವು ಮುಗಿದುದು.

॥ ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಂ । ಆವಿರಾವೀರ್ಮ ಏಧಿ । ವೇದಸ್ಯಮ ಆಣೀಸ್ಥಃ । ಶ್ರುತಂ ಮೇ ಮಾ ಪ್ರಹಾಸೀಃ । ಅನೇನಾ ಧೀತೇನ ಅಹೋರಾತ್ರಾನ್ ಸಂದಧಾಮಿ । ಋತಂ ವದಿ ಷ್ಯಾಮಿ । ಸತ್ಯಂವದಿಷ್ಯಾಮಿ । ತನ್ಮಾಮವತು । ತದ್ವ ಕ್ತಾರಮವತು । ಅವತು ಮಾಂ । ಅವತು ವಕ್ತಾರಂ ॥ ಅವತು ವಕ್ತಾರಂ ॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಈ ಶಾಂತಿಪಾಠವನ್ನು ಪಾರಾಯಣಾಂತ್ಯದಲ್ಲಿಯೂ ಉಚ್ಚರಿಸಬೇಕು. ಅರ್ಥವಿವರಣೆಯನ್ನು ೩೩, ೩೪, ೩೫ ನೆಯ ಪುಟಗಳಲ್ಲಿ ನಿರೂಪಿಸಿದೆ. ಸೌಭಾಗ್ಯಲಕ್ಷ್ಮೀದೇವಿಯ ತತ್ತ್ವವನ್ನು ವಿವರಿಸುವ ಉಪನಿಷತ್ತಿನ ವಿವರಣೆಯು ಮುಗಿದುದು.

ಓಂ ತತ್ಸತ್

॥ ಬ್ರಹ್ಮಾರ್ಪಣಮಸ್ತು ॥

॥ ಶ್ರೀರಸ್ತು ॥

|| ಶ್ರೀಃ ||

ಅಥ

|| ಸಾಮವೇದೀಯ ಸಾವಿತ್ರ್ಯುಪನಿಷತ್ ||

|| ಶ್ರೀಃ ||

|| ಅಥ ಸಾಮವೇದೀಯ ಸಾವಿತ್ರ್ಯುಪನಿಷತ್ ||

ಓಂ.

ಸಾಮವೇದಕ್ಕೆ ಸಂಬಂಧಿಸಿದ, ಈ ಪ್ರಪಂಚವೆಲ್ಲವನ್ನೂ ಉಂಟುಮಾಡಿರುವ ಸವಿತೃದೇವತಾಶಕ್ತಿಯ ಸ್ವರೂಪವನ್ನು ತಿಳಿಯಿಸುವ ರಹಸ್ಯೋಪದೇಶವು. ಸೂರ್ಯ ಮಂಡಲವೂ ಅದಕ್ಕೆ ಅಭಿಮಾನಿನೀ ದೇವತೆಯಾದ ಸಾವಿತ್ರೀದೇವಿಯೂ ಪರಸ್ಪರ ವಾಗಿ ಕಾರ್ಯಕಾರಣರೆಂದು ಹೇಳಿದೆ.

ಓಂ ಆಪ್ಯಾಯಂತು ಮಮಾಂಗಾನಿ || ವಾಕ್ ಪ್ರಾಣಃಚಕ್ಷುಃ
ಶ್ರೋತ್ರಂ | ಅಥೋ ಬಲಮಿಂದ್ರಿಯಾಣಿ ಚ ಸರ್ವಾಣಿ |
ಸರ್ವಂ ಬ್ರಹ್ಮೌಪನಿಷದಂ | ಮಾಹಂ ಬ್ರಹ್ಮ ನಿರಾಕುರ್ಯಾಂ |
ಮಾಮಾಬ್ರಹ್ಮ ನಿರಾಕರೋತ್ | ಅನಿರಾಕರಣಮಸ್ತು ||
ಅನಿರಾಕರಣಂ ಮೇಽಸ್ತು | ತದಾತ್ಮನಿ ನಿರತೇಯೆ ಉಪ-
ನಿಷತ್ಸುಧರ್ಮಾಃ ತೇ ಮಯಿ ಸಂತು | ತೇ ಮಯಿಸಂತು ||
ಓಂ ಶಾಂತಿಶ್ಶಾಂತಿಶ್ಶಾಂತಿಃ ||

ಓಂ|| ನನ್ನ ಎಲ್ಲ ಅವಯವಗಳೂ ಎಂದರೆ ವಾಕ್ ಮುಂತಾದ ಕರ್ಮೇಂದ್ರಿಯಗಳೂ, ಕಣ್ಣು ಕಿವಿ ಮುಂತಾದ ಜ್ಞಾನೇಂದ್ರಿಯಗಳು, ಪಂಚಪ್ರಾಣಗಳು ಇವೇ ಮುಂತಾದುವೆಲ್ಲವೂ ತೇಜಸ್ಸನ್ನು ಹೊಂದಿರುತ್ತಾ ತೃಪ್ತಿಯುಳ್ಳವುಗಳಾಗಿರಲಿ. ಇವೆಲ್ಲವೂ ಉಪನಿಷತ್ತುಗಳಲ್ಲಿ ಬೋಧಿಸಿರುವ ಬ್ರಹ್ಮತತ್ತ್ವಸ್ವರೂಪವಾದುವು. ನಾನು ಆ ಬ್ರಹ್ಮತತ್ತ್ವವನ್ನು ಬೇಡವೆನ್ನುವುದಿಲ್ಲ. ಎಂದರೆ ಆ ಪರತತ್ತ್ವದ ಸಾಕ್ಷಾತ್ಕಾರಕ್ಕೆ ಅಡ್ಡಿಯನ್ನುಂಟುಮಾಡುವ ಇತರ ಯಾವ ವಿಧವಾದ ಕಾರ್ಯವನ್ನೂ ಮಾಡುವುದಿಲ್ಲ. ಆ ಬ್ರಹ್ಮತತ್ತ್ವವೂ ನನ್ನನ್ನು ನಿಷೇಧಿಸದಿರಲಿ. ಎಂದರೆ ಅದೂ ನನ್ನಲ್ಲಿ ಅನುಗ್ರಹ ಬುದ್ಧಿಯಿಂದ ಈ ಶಾಂತಿಮಂತ್ರಪಾಠದ ಫಲವಾಗಿ ನನಗೆ ಅಪರೋಕ್ಷಾನುಭವಕ್ಕೆ ಬರುವಂತಾಗಲಿ. ಹೀಗೆ ಅದಕ್ಕೆ ನನ್ನಿಂದಾಗಲೀ, ಅದರಿಂದ ನನಗಾಗಲಿ ಔದಾಸೀನ್ಯ

ತಿರಸ್ಕಾರಗಳು ಸಂಭವಿಸದಿರಲಿ. ಉಪದೇಶದ ಪ್ರಾರಂಭದಲ್ಲೂ, ಉಪದೇಶವು ಮುಗಿದಮೇಲೂ ಗುರುಶಿಷ್ಯರಿಬ್ಬರಿಗೂ ಬ್ರಹ್ಮತತ್ತ್ವದ ಅನುಗ್ರಹವು ತಪ್ಪದೆ ದೊರೆತಿರಲಿ ಎಂಬ ಅಭಿಪ್ರಾಯದಿಂದ ಎರಡಾವೃತ್ತಿ ಹೇಳಿದೆ. ಆತ್ಮನಿಷ್ಠನಾದ ಜ್ಞಾನಿಯಲ್ಲಿ ಯಾವ ಧರ್ಮಗಳು ಕಾಣಬರುವುವೆಂದು ಉಪನಿಷತ್ತುಗಳಲ್ಲಿ ವರ್ಣಿಸಿದೆಯೋ ಅಂತಹ ಧರ್ಮಗಳೆಲ್ಲವೂ ನನ್ನಲ್ಲಿಯೂ ಉಂಟಾಗಲಿ. ಅವು ನನ್ನಲ್ಲೂ ಉಂಟಾಗಲಿ ಎಂದು ಇನ್ನೊಂದಾವೃತ್ತಿ ಹೇಳಿರುವುದು ಆದರಾತಿಶಯವನ್ನೂ, ಈ ಶಾಂತಿಪಾಠವು ಮುಗಿದುದನ್ನೂ ಸೂಚಿಸುತ್ತದೆ.

ಹರಿಃ ಓಂ ॥ ಕಸ್ಸವಿತಾ ಕಾ ಸಾವಿತ್ರೀ ಅಗ್ನಿರೇವ ಸವಿತಾ
ಪೃಥಿವೀ ಸಾವಿತ್ರೀ ಸ ಯತ್ರಾಗ್ನಿಸ್ತತ್ಪೃಥಿವೀ ಯತ್ರ ವೈ
ಪೃಥಿವೀ ತತ್ರಾಗ್ನಿಸ್ತೇ ದ್ವೇ ಯೋನಿಸ್ತದೇಕಂ ಮಿಥುನಂ ॥೧॥

ಸವಿತಾ ಉಂಟುಮಾಡುವವನು ಯಾರು? ಸಾವಿತ್ರೀ ಪ್ರಸವಿಸುವವಳು ಯಾರು? ಅಗ್ನಿಯೇ ಉಂಟುಮಾಡುವವನು. ಭೂಮಿಯೇ ಪ್ರಸವಿಸುವವಳು. ಆ ಅಗ್ನಿಯು ಇರುವೆಡೆಯಲ್ಲಿಯೇ ಪೃಥಿವಿಯೂ, ಆ ಭೂಮಿಯಲ್ಲಿ ಅಗ್ನಿಯೂ ಇರುತ್ತದೆ. ಹೀಗೆ ಇವರಿಬ್ಬರೂ ಸೇರಿ ಈ ಪ್ರಪಂಚಕ್ಕೆ ಕಾರಣರಾಗಿದಾರೆ. ಆದುದರಿಂದ ಇವರಿಬ್ಬರೂ ಒಂದು ಜೊತೆಯು. ಹೀಗೆಂದು ಧ್ಯಾನಮಾಡಬೇಕು.

ಕಸ್ಸವಿತಾ ಕಾ ಸಾವಿತ್ರೀ ವರುಣ ಏವ ಸವಿತಾಽಽಪಸ್ಸಾ
ವಿತ್ರೀ ಸ ಯತ್ರ ವರುಣಸ್ತದಾಪೋ ಯತ್ರ ವಾ ಆಪಸ್ತ
ದ್ವರುಣಸ್ತೇ ದ್ವೇ ಯೋನಿಸ್ತದೇಕಂ ಮಿಥುನಂ ॥೨॥

ಸವಿತೃ ಯಾರು? ಸಾವಿತ್ರೀ ಯಾರು? ವರುಣನೇ ಉಂಟುಮಾಡುವ ಸವಿತೃವು. ಜಲವೇ ಪ್ರಸವಿಸುವ ಸಾವಿತ್ರಿಯು. ವರುಣನಿದ್ದೆಡೆಯಲ್ಲಿ ಜಲವೂ, ಜಲವಿದ್ದೆಡೆಯಲ್ಲಿ ವರುಣನೂ ಇರುತ್ತಾರೆ. ಆದುದರಿಂದ ಇವರಿಬ್ಬರೂ ಈ ಜಗತ್ತಿಗೆ ಕಾರಣರಾದ ದಂಪತಿಗಳಂತೆ ಒಂದು ಜೊತೆಯು. ಹೀಗೆ ಧ್ಯಾನಿಸಬೇಕು.

ಕಸ್ಸವಿತಾ ಕಾ ಸಾವಿತ್ರೀ ವಾಯುರೇವ ಸವಿತಾ ಆಕಾಶಸ್ಸಾವಿತ್ರೀ
ಯತ್ರ ಸ ವಾಯುಸ್ತದಾಕಾಶೋ ಯತ್ರ ವಾ ಆಕಾಶಸ್ತ
ದ್ವಾಯುಸ್ತೇ ದ್ವೇ ಯೋನೀ ತದೇಕಂ ಮಿಥುನಂ. ॥೩॥

ಸವಿತೃ ಯಾರು? ಸಾವಿತ್ರೀ ಯಾರು? ವಾಯುವೇ ಉಂಟುಮಾಡುವ ಸವಿತೃವು. ಆಕಾಶವೇ ಪ್ರಸವಿಸುವ ಸಾವಿತ್ರಿಯು. ವಾಯುವು ಆಕಾಶದಲ್ಲೂ,

ವಾಯುವಿನಲ್ಲಿ ಆಕಾಶವೂ ಇರುತ್ತವೆ. ಆದುದರಿಂದ ಇವೆರಡೂ ವಿಶ್ವಕಾರಣವಾದ ಒಂದು ಜೊತೆಯು.

ಕಸ್ಸವಿತಾ ಕಾ ಸಾವಿತ್ರೀ ಯಜ್ಞ ಏವ ಸವಿತಾ ಛಂದಾಂಸಿ ಸಾ
ವಿತ್ರೀ ಯತ್ರ ಯಜ್ಞಸ್ತತ್ರ ಛಂದಾಂಸಿ ಯತ್ರ ವಾ ಛಂದಾಂಸಿ
ಸ ಯಜ್ಞಸ್ತೇ ದ್ವೇ ಯೋನಿಸ್ತದೇಕಂ ಮಿಥುನಂ ॥೪॥

ಇದರಂತೆಯೇ ಯಜ್ಞವೂ ಛಂದಸ್ಸುಗಳೂ ಸವಿತೃ ಸಾವಿತ್ರೀ ಎಂದು ಧ್ಯಾನಿಸಬೇಕು. ಯಜ್ಞಯಾಗಗಳನ್ನು ಛಂದೋಮಯಗಳಾದ ವೇದಶಾಸ್ತ್ರಗಳಲ್ಲಿ ಹೇಳಿರುವುದರಿಂದ ಅವುಗಳ ತಿಳಿವಳಿಕೆಯು ಅಲ್ಲಿ ದೊರೆಯುತ್ತದೆ. ಇವು ಪ್ರಪಂಚಕ್ಕೆ ಕಾರಣವಾದ ಯುಗ್ಮಗಳು. ಈ ಅಂಶವನ್ನು ಗೀತೆಯಲ್ಲಿ ಶ್ರೀಕೃಷ್ಣನೂ "ಸಹ ಯಜ್ಞಾಃ ಪ್ರಜಾಸ್ಸೃಷ್ಟ್ವಾ ಪುರೋವಾಚ ಪ್ರಜಾಪತಿಃ । ಅನೇನ ಪ್ರಸವಿಷ್ಯಧ್ವಂ ಏಷವೋಽಸ್ತ್ವಿಷ್ಟಕಾಮಧುಕ್" ॥ ಎಂದು ವಿವರಿಸಿದಾನೆ. ಹೀಗೆ ತತ್ತ್ವವನ್ನು ಮನಗಾಣಲು ಉಪಾಸನೆ ಮಾಡುತ್ತಾ ಬರಬೇಕು.

ಕಸ್ಸವಿತಾ ಕಾ ಸಾವಿತ್ರೀ ಸ್ತನಯಿತ್ನುರೇವ ಸವಿತಾ ವಿದ್ಯು
ತ್ಸಾವಿತ್ರೀ ಸ ಯತ್ರ ಸ್ತನಯಿತ್ನುಸ್ತದ್ವಿದ್ಯುದ್ಯತ್ರ ವಾ ವಿದ್ಯು
ತ್ತತ್ರ ಸ್ತನಯಿತ್ನುಸ್ತೇ ದ್ವೇ ಯೋನೀ ತದೇಕ ಮಿಥುನಂ ॥೫॥

ಹೀಗೆಯೇ ಗುಡುಗುವ ಮೋಡವೂ ಮಿಂಚೂ ಸವಿತೃ ಸಾವಿತ್ರೀ ಎಂದು ಧ್ಯಾನ ಮಾಡಬೇಕು. ಮೋಡವಿದ್ದಲ್ಲಿ ಮಿಂಚೂ, ಮಿಂಚಿದೆಡೆಯಲ್ಲಿ ಮೋಡವೂ ಕಾಣ ಬರುತ್ತವೆ. ವಿದ್ಯುಚ್ಛಕ್ತಿಯೂ ಸೂರ್ಯನ ತೇಜಸ್ಸಿನ ರೂಪಾಂತರವಾಗಿದೆ. ಇದರಿಂದ ಮಳೆಬೆಳೆಗಳೂ ಯಜ್ಞಯಾಗಗಳೂ ಜೀವನವೂ ಸಾಗುತ್ತವೆ. ಪ್ರಪಂಚವೂ ಮುಂದುವರಿಯುತ್ತಿದೆ. ಇದು ಒಂದು ಜೊತೆಯು.

ಕಸ್ಸವಿತಾ ಕಾ ಸಾವಿತ್ರೀ ಆದಿತ್ಯ ಏವ ಸವಿತಾ ದ್ಯೌಸ್ಸಾವಿತ್ರೀ
ಸ ಯತ್ರಾದಿತ್ಯಸ್ತದ್ದ್ಯೌರ್ಯತ್ರ ವಾದ್ಯೌಸ್ತದಾದಿತ್ಯಸ್ತೇ ದ್ವೇ
ಯೋನಿಸ್ತದೇಕಂ ಮಿಥುನಂ ॥೬॥

ಈ ಪ್ರಕಾರವಾಗಿಯೇ ಸೂರ್ಯನೂ ಅಂತರಿಕ್ಷಲೋಕವೂ ಸವಿತೃ ಸಾವಿತ್ರೀ ಎಂದೂ ಉಪಾಸನೆ ಮಾಡಬೇಕು. ಆಕಾಶದಲ್ಲಿ ಸೂರ್ಯನಿದಾನೆ. ಸೂರ್ಯನಿಂದ ಆಕಾಶವು ಬೆಳಗಿ ತಿಳಿದುಬರುತ್ತದೆ. ಇದೂ ಒಂದು ಪರಸ್ಪರವಾಗಿ ಎಡೆಬಿಡದ ಜೊತೆಯಾಗಿದೆ.

ಕಸ್ಸವಿತಾ ಕಾ ಸಾವಿತ್ರೀ ಚಂದ್ರ ಏವ ಸವಿತಾ ನಕ್ಷತ್ರಾಣಿ
ಸಾವಿತ್ರೀ ಸ ಯತ್ರ ಚಂದ್ರಸ್ತನ್ನಕ್ಷತ್ರಾಣಿ ಯತ್ರ ವಾ ನ
ಕ್ಷತ್ರಾಣಿ ಸ ಚಂದ್ರಮಾಸ್ತೇ ದ್ವೇ ಯೋನಿಸ್ತದೇಕಂ ಮಿಥುನಂ ||೭||

ಇದೇ ರೀತಿಯಲ್ಲಿ ಚಂದ್ರ ಮತ್ತು ನಕ್ಷತ್ರಗಳನ್ನೂ ಸವಿತೃ ಸಾವಿತ್ರೀ ಎಂದು ಧ್ಯಾನಮಾಡಬೇಕು. ಈ ಜೊತೆಯೂ ಪ್ರಪಂಚದ ಪ್ರಕಾಶದ, ತೇಜಸ್ಸಿನ, ಶಕ್ತಿಯ ರೂಪಾಂತರಗಳಾಗಿವೆ.

ಕಸ್ಸವಿತಾ ಕಾ ಸಾವಿತ್ರೀ ಮನ ಏವ ಸವಿತಾ ವಾಕ್ಸಾವಿತ್ರೀ
ಸ ಯತ್ರ ಮನಸ್ತದ್ವಾಗ್ಯತ್ರ ವಾ ವಾಕ್ತನ್ಮನಸ್ತೇ ದ್ವೇ
ಯೋನಿಸ್ತದೇಕಂ ಮಿಥುನಂ ||೮||

ಇದರಂತೆಯೇ ಮನಸ್ಸು ಮತ್ತು ವಾಕ್, ಎಂದರೆ ತಿಳಿಯುವ ತಿಳಿಯಿಸುವ ಧ್ಯಾನಿಸುವ ಮನಸ್ತತ್ತ್ವವೂ ಪರತತ್ತ್ವದ ಪ್ರಥಮಾವಿರ್ಭಾವಕ್ಕೂ ವಿವರಣಕಾರ್ಯಕ್ಕೂ ಸಾಧನವಾದ, ಓಂಕಾರವೇ ಮೊದಲಾದ ಭಾಷಾರೂಪವೂ ಆಗುವ ವಾಕ್ತತ್ತ್ವವೂ, ಪರಸ್ಪರವಾಗಿ ಎಡೆಬಿಡದೆ ಇರುವ ಒಂದು ಜೊತೆ ಎಂಬುದನ್ನು ಧ್ಯಾನಿಸಬೇಕು. ಇದನ್ನು ಸರಸ್ವತೀರಹಸ್ಯೋಪನಿಷತ್ತಿನಲ್ಲಿ ೧೨–೧೬ ಪುಟಗಳಲ್ಲಿಯೂ, ದೇವೀ ಭಾಗವತದಲ್ಲಿ ಆಗಾಗ್ಗೆ ಬರುವ ದೇವೀಸ್ತೋತ್ರಗಳಲ್ಲಿಯೂ ವಿವರಿಸಿದೆ.

ಕಸ್ಸವಿತಾ ಕಾ ಸಾವಿತ್ರೀ ಪುರುಷ ಏವ ಸವಿತಾ ಸ್ತ್ರೀ ಸಾ
ವಿತ್ರೀ ಸ ಯತ್ರ ಪುರುಷಸ್ತತ್ ಸ್ತ್ರೀ ಯತ್ರ ವಾ ಸ್ತ್ರೀ ಸ
ಪುರುಷಸ್ತೇ ದ್ವೇ ಯೋನಿಸ್ತದೇಕಂ ಮಿಥುನಂ ||೯||

ಕಡೆಯದಾಗಿ, ಮುಖ್ಯವಾಗಿ ಮತ್ತು ಸುವ್ಯಕ್ತವಾಗಿರುವ ಪುರುಷ ಮತ್ತು ಸ್ತ್ರೀ ಎಂಬ ದಾಂಪತ್ಯತತ್ತ್ವವನ್ನೂ ಈ ಪ್ರಪಂಚಕ್ಕೆ ಕಾರಣವೆಂದೂ, ಶಿವಶಕ್ತಿಗಳ, ಪರಬ್ರಹ್ಮಪರಾಶಕ್ತಿ ಈ ತತ್ತ್ವಗಳ ರೂಪಾಂತರವೆಂದೂ ಧ್ಯಾನಮಾಡುತ್ತಾ ಉಪಾಸನೆಯಲ್ಲಿ ಮುಂದುವರಿಯಬೇಕು. ಒಂದೇ ಬ್ರಹ್ಮತತ್ತ್ವವು ಪಾರಮಾರ್ಥಿಕವಾಗಿ ಎರಡಲ್ಲದೆ ಅದ್ವೈತವಾಗಿದ್ದು ವ್ಯಾವಹಾರಿಕವಾಗಿ ಮೊದಲು ಎರಡೂ ಆಮೇಲೆ ಅನೇಕವಾಗಿ ಅನಂತವಾಗಿ ಪರಿಣಮಿಸುತ್ತಿರುವಂತೆ ತೋರುತ್ತಿರುವುದನ್ನು ಗಮನಿಸಿ ಧ್ಯಾನಿಸುತ್ತಿರಬೇಕು.

ಸವಿತೃ ಎಂದರೆ ಕುಜಮುಂತಾದಗ್ರಹಗಳೂ ಚಂದ್ರ ಮುಂತಾದ ಉಪಗ್ರಹಗಳೂ ಇವನ್ನು ಒಳಗೊಂಡಿರುವ ಒಂದು ಸೂರ್ಯಸಂಸ್ಥಾನವು (SOLAR SYSTEM).

ಈ ಸೂರ್ಯಕೇಂದ್ರದಿಂದ ಗ್ರಹಗಳೂ ಅವುಗಳಿಂದ ಉಪಗ್ರಹಗಳೂ ಉಂಟಾಗಿವೆ. ಆದುದರಿಂದ ಸೂರ್ಯನೇ ಇವೆಲ್ಲವನ್ನೂ ಪ್ರಸವಿಸಿದ ಹಾಗಾಯಿತು. ಇಂಥಾ ಸೂರ್ಯ ಮಂಡಲವನ್ನು ಸೃಜಿಸಿ ಕಾಪಾಡುತ್ತಿದ್ದು ಅದರ ಕಾರ್ಯವಾದ ಮೇಲೆ ಇದೆಲ್ಲವನ್ನೂ ಉಪಸಂಹರಿಸುವ, ಸೂಕ್ಷ್ಮಕಾರಣರೂಪದಲ್ಲಿರುವಂತೆ ಮಾಡುವ, ಶಕ್ತಿರೂಪಳಾದ ಅಭಿಮಾನಿನೀದೇವತೆಗೆ ಸಾವಿತ್ರೀ ಎಂದು ಹೆಸರು. ಇವೆರಡೂ ಪರಸ್ಪರವಾಗಿ ಕಾರ್ಯಕಾರಣಭಾವವುಳ್ಳವಾಗಿರುತ್ತವೆ. ಇದರ ಪ್ರಪಂಚವಿಸ್ತಾರವನ್ನೂ ವಿವರಿಸಲು ದಿಕ್ಪ್ರದರ್ಶನರೀತಿಯಿಂದ ಮಾದರಿಗಾಗಿ ಒಂಬತ್ತು ಜತೆಗಳಲ್ಲಿ ತಿಳಿಸಿದೆ. ಸವಿತೃ, ಸಾವಿತ್ರೀ; ಅಗ್ನಿ, ಪೃಥಿವೀ; ವರುಣ, ಜಲ; ವಾಯು, ಆಕಾಶ; ಯಜ್ಞ, ಛಂದಸ್ಸು ಗಳು; ಗುಡುಗು, ಮಿಂಚು; ಆದಿತ್ಯ, ದ್ಯುಲೋಕ; ಚಂದ್ರ ನಕ್ಷತ್ರಗಳು; ಮನಸ್ಸು, ವಾಕ್; ಪುರುಷ, ಸ್ತ್ರೀ; ಈ ಒಂಬತ್ತು ಜೋಡಿಗಳ ಜೊತೆಗೆ ಬಲಾ, ಅತಿಬಲಾ ಎಂಬ ವಿದ್ಯೆಗಳನ್ನೂ ಉಪಾಸನೆಸಿದ್ಧಿಗಳಿಗಾಗಿ ವಿವರಿಸಿದೆ. ಕಾರ್ಯರೂಪಗಳಾದುದರಿಂದ ಅನಿತ್ಯವಾದ ಈ ನಾಮರೂಪಗಳನ್ನು ಅವುಗಳ ಕಾರಣಗಳಲ್ಲಿ ವಿಲಾಪನಕ್ರಮದಿಂದ ಲಯಮಾಡುತ್ತಾ ಕಡೆಗೆ ಉಪಾಸಕನು ಇವೆಲ್ಲಕ್ಕೂ ಅಧಿಷ್ಠಾನವಾದ ಪರಬ್ರಹ್ಮ ತತ್ತ್ವದ ಅಪರೋಕ್ಷಾನುಭವವನ್ನು ಕ್ರಮವಾಗಿ ಪಡೆಯುತ್ತಾನೆ. ಒಟ್ಟಿನಲ್ಲಿ ಈ ಪ್ರಪಂಚವು ಶಿವ, ಶಕ್ತಿರೂಪವಾದುದು. ಸವಿತಾ ಪರಮೇಶ್ವರನು, ಮತ್ತು ಸಾವಿತ್ರೀ ಪರಶಕ್ತಿ ಅಥವಾ ಮಾಯಾಸ್ವರೂಪವು ಎಂದು ತಿಳಿಯಬೇಕು. ಸ್ಥೂಲವೂ ಅನಿತ್ಯವೂ ಆಗಿರುವ ಈ ಕಾರ್ಯಪ್ರಪಂಚವನ್ನು ಅದರ ಸೂಕ್ಷ್ಮಕಾರಣ ದಲ್ಲೂ, ಕಡೆಗೆ ಇವೆಲ್ಲಕ್ಕೂ ಅಧಿಷ್ಠಾನವಾಗಿ ನಿತ್ಯವೂ ಸಚ್ಚಿದಾನಂದರೂಪವೂ ಆಗಿರುವ ಪರಬ್ರಹ್ಮಚೈತನ್ಯದಲ್ಲಿಯೂ ಉಪಾಸಕನು ಜ್ಞಾನದಿಂದ ಮುಂದುವರಿದ ಹಾಗೆಲ್ಲ ಕ್ರಮವಾಗಿ ಪ್ರವಿಲಾಪನಮಾಡುತ್ತಾ, ಕ್ರಮವಾಗಿ ಅಧ್ಯಾರೋಪ ಅಪವಾದ ನ್ಯಾಯದಿಂದ ಜೀವಬ್ರಹ್ಮಾಭೇದವನ್ನು ಸಾಕ್ಷಾತ್ಕರಿಸಿಕೊಂಡು ಮುಕ್ತನಾಗುತ್ತಾನೆ. ಈ ಒಂಬತ್ತು ಜೋಡಿಗಳಲ್ಲಿ ಅಗ್ನಿ ಮೊದಲುಮಾಡಿ ಪುರುಷನವರಿಗಿರುವುವು ಸವಿತೃ ರೂಪಗಳು, ಹಾಗೆಯೇ ಪೃಥಿವೀ ಮೊದಲುಗೊಂಡು ಸ್ತ್ರೀ ಪರ್ಯಂತವಾದುವು ಸಾವಿತ್ರೀ ರೂಪಗಳು, ಇವೆಲ್ಲವೂ ಶಿವ, ಶಕ್ತಿರೂಪವಾದುದೆಂಬುದು ಕ್ರಮವಾಗಿ ಉಪಾಸನೆ ಯಿಂದ ಗೊತ್ತಾಗುತ್ತದೆ. ಕಾರ್ಯಕಾರಣವಾಗಿರುವ ಇವೆಲ್ಲವೂ ಪರಸ್ಪರವಾಗಿ ವಾಚ್ಯವಾಚಕಗಳಾಗಿವೆ, ಎಂದೂ ಲಕ್ಷ್ಯಲಕ್ಷಣರೂಪವೂ, ಬೋಧ್ಯಬೋಧಕವಾಗಿವೆ ಎಂದೂ ಉಪಾಸಕನು ಜ್ಞಾನದಿಂದ ಮನಗಾಣುತ್ತಾನೆ. ಅಜ್ಞಾನದಿಂದ ಎಂದರೆ ಪರಬ್ರಹ್ಮತತ್ತ್ವದ ಸಚ್ಚಿದಾನಂದಾನಂತಾದ್ವಯವಾದ ವಾಸ್ತವಸ್ವರೂಪದ ತಿಳುವಳಿಕೆ ಇಲ್ಲದಿದ್ದುದರಿಂದ, ತೋರುತ್ತಿದ್ದ ಇದೆಲ್ಲವೂ, ಜ್ಞಾನದಿಂದ ನಷ್ಟವಾಗಲು, ಎಂದರೆ ಇವೆಲ್ಲದರಲ್ಲೂ ಅಹಂಕಾರಮಮಕಾರಗಳು ತಪ್ಪಿ ರಾಗದ್ವೇಷಾದಿಗಳಿಲ್ಲದೆ, ಉಪಾಸಕನ ಆತ್ಮವೂ ವ್ಯಾವಹಾರಿಕವಾದ ಈ ಪ್ರಪಂಚವೆಲ್ಲಕ್ಕೂ ಅಧಿಷ್ಠಾನವಾದ ಪರಬ್ರಹ್ಮ

ಚೈತನ್ಯವೂ ಸಚ್ಚಿದಾನಂದರೂಪದಲ್ಲಿ ಒಂದೇ ಆಗಿವೆ, ಎಂಬ ಅದ್ವೈತದ ಸಾಕ್ಷಾತ್ಕಾರವಾಗಿ ಎಂದಿನಂತೆ ಮುಕ್ತನಾಗಿ ಉಳಿದಿರುತ್ತಾನೆ, ಎಂಬ ಅದ್ವೈತ ಸಿದ್ಧಾಂತವನ್ನು ಈ ಉಪನಿಷತ್ತೂ ಸೂಚಿಸುತ್ತದೆ.

ತಸ್ಯಾ ಏವ ಪ್ರಥಮಃ ಪಾದೋ ಭೂಸ್ತತ್ಸವಿತುರ್ವರೇಣ್ಯ ಮಿತಿ,
ಅಗ್ನಿರ್ವೈ ವರೇಣ್ಯಮಾಪೋ ವರೇಣ್ಯಂ ಚಂದ್ರಮಾ ವರೇಣ್ಯಂ ।

ಒಟ್ಟು ಗಾಯತ್ರೀ ಮಂತ್ರದ ಅರ್ಥವು ಹೀಗಿದೆ. ಸವಿತುಃ ಈ ಎಲ್ಲ ಪ್ರಪಂಚ ವನ್ನೂ ಉಂಟುಮಾಡುವ, ದೇವಸ್ಯ ಪ್ರಕಾಶರೂಪನಾದ ಸೂರ್ಯನ, ವರೇಣ್ಯಂ ಅಪೇಕ್ಷಿಸಿ ಪಡೆಯಬೇಕಾದ, ತತ್ ಆ ಪ್ರಸಿದ್ಧವಾದ, ಭರ್ಗಃ ತೇಜಸ್ಸನ್ನೂ ಶಕ್ತಿ ಯನ್ನೂ, ಧೀಮಹಿ ಧ್ಯಾನಮಾಡುತ್ತೇವೆ. ಯಃ ಆ ಸೂರ್ಯನು, ನಃ ನಮ್ಮ, ಧಿಯಃ ಬುದ್ಧಿಗಳನ್ನು, ಪ್ರಚೋದಯಾತ್ ತತ್ತ್ವವನ್ನು ತಿಳಿಯುವುದರಲ್ಲಿಯೂ, ಅದಕ್ಕೆ ತಕ್ಕಂತೆ ಧರ್ಮಾಚರಣೆಯಲ್ಲಿಯೂ ಪ್ರವರ್ತಿಸುತ್ತಿರುವಂತೆ, ಪ್ರಚೋ ದಯಾತ್ ಪ್ರೇರಿಸಲಿ. ಆ ಸಾವಿತ್ರೀ ಅಥವಾ ಗಾಯತ್ರೀ ಮಂತ್ರದಲ್ಲಿರುವ ಮೂರು ಪಾದಗಳಲ್ಲಿ ಮೊದಲನೆಯದು ತತ್ಸವಿತುರ್ವರೇಣ್ಯಂ ಎಂಬುದು. ಮೂರು ವ್ಯಾಹೃತಿ ಗಳಲ್ಲಿ ಮೊದಲನೆಯದಾದ ಭೂಃ ಎಂಬುದು ಈ ಪಾದಕ್ಕೆ ಸಂಬಂಧಿಸಿದುದು. ಅಗ್ನಿಯೂ, ಜಲವೂ, ಚಂದ್ರನೂ ಎಲ್ಲರಿಗೂ ಅಪೇಕ್ಷಣೀಯವಾದ ಭೂತಗಳಾಗಿವೆ. ಭೂಃ ಉಂಟಾಗಿರುವ ಭೂಮಿಯು.

ತಸ್ಯಾ ಏವ ದ್ವಿತೀಯಃ ಪಾದೋ ಭರ್ಗಮಯೋ (ಽಪೋ)
ಭುವೋ ಭರ್ಗೋ ದೇವಸ್ಯ ಧೀಮಹೀತಿ, ಅಗ್ನಿರ್ವೈಭರ್ಗ
ಆದಿತ್ಯೋ ವೈ ಭರ್ಗಶ್ಚಂದ್ರಮಾವೈ ಭರ್ಗಃ ।

ಅದೇ ಸಾವಿತ್ರೀಮಂತ್ರದ ಎರಡನೆಯ ಪಾದವಾದ "ಭರ್ಗೋ ದೇವಸ್ಯ ಧೀಮಹಿ" ಎಂಬುದಕ್ಕೆ ಭುವಃ ಎಂಬುದು ವ್ಯಾಹೃತಿಯಾಗಿದೆ. ಅಗ್ನಿಯೂ ಸೂರ್ಯನೂ ಚಂದ್ರನೂ ಪ್ರಕಾಶಸ್ವರೂಪರು. ಹೀಗೆ ಈ ಪಾದವು ತೇಜೋಮಯವೂ ಶಕ್ತಿಮಯವೂ ಆಗಿದೆ.

ತಸ್ಯಾ ಏವ ತೃತೀಯಃ ಪಾದಃ ಸ್ವರ್ಧಿಯೋ ಯೋನಃ
ಪ್ರಚೋದಯಾದಿತಿ ಸ್ತ್ರೀ ಚೈವ ಪುರುಷಶ್ಚ ಪ್ರಜನಯತಃ ।

ಆ ಸಾವಿತ್ರೀಮಂತ್ರದ ಮೂರನೆಯ ಪಾದವಾದ "ಧಿಯೋಯೋನಃ ಪ್ರಚೋ ದಯಾತ್" ಎಂಬುದಕ್ಕೆ ಸುವಃ ಎಂಬುದು ವ್ಯಾಹೃತಿಯಾಗಿದೆ. ಸ್ತ್ರೀಯೂ

ಪುರುಷನೂ ಮಕ್ಕಳು ಉಂಟಾಗುವಂತೆ ಮಾಡುತ್ತಾರೆ. ಇವರು ಸವಿತೃ ಮತ್ತು ಸಾವಿತ್ರೀ ಇವರ ಸ್ಥಾನದಲ್ಲಿದಾರೆ.

ಯೋ ವಾ ಏತಾಂ ಸಾವಿತ್ರೀಮೇವಂ ವೇದಸ

ಪುನರ್ಮೃತ್ಯುಂ ಜಯತಿ ||

ಯಾರು ಈ ಸಾವಿತ್ರೀ ಸ್ವರೂಪವನ್ನು ಮೇಲೆ ಹೇಳಿದ ವಿವರಗಳೊಡನೆ ತಿಳಿದುಕೊಂಡು ಧ್ಯಾನ ಉಪಾಸನೆಗಳನ್ನು ಮಾಡುತ್ತಾರೋ ಅಂಥವರು ಮರಣವನ್ನು ಜಯಿಸುವರು. ಮರಣವು ಜನನವನ್ನು ಪಡೆದಿರುವವರಿಗೆ ಸಂಭವಿಸುತ್ತದೆ. ಈ ಜನನ ಮರಣಗಳು ಫಲಭೋಗಕ್ಕಾಗಿ ಬರುತ್ತವೆ. ಫಲವು ಸುಖದುಃಖಗಳ ಅನುಭವ ರೂಪವಾದುದು. ಇದು ಕರ್ಮಗಳ ಫಲವಾದುದು. ಆದುದರಿಂದ ಫಲದಲ್ಲಿ ಕಾಮನೆಯನ್ನು ಹೊಂದಿ ಕರ್ಮವನ್ನು ಮಾಡುವ ಕರ್ತೃವು, ಅದರ ಫಲವನ್ನು ಅನುಭವಿಸುವಾಗ ಭೋಕ್ತೃ ಎನಿಸಿಕೊಳ್ಳುತ್ತಾನೆ. ಈ ಫಲಭೋಗಕ್ಕಾಗಿ ಅನೇಕಾವೃತ್ತಿ ಜನನ ಮರಣಗಳು ಉಂಟಾಗುತ್ತಿವೆ. ಈ ಕರ್ತೃತ್ವದಿಂದ ಜನನ ಮರಣಗಳು ಪ್ರವಾಹದಂತೆ ಅನಾದಿಕಾಲದಿಂದ ಮುಂದುವರಿಯುತ್ತಿವೆ. ಈ ಪ್ರವಾಹದಲ್ಲಿ ಸಿಕ್ಕಿರುವುದಕ್ಕೆ ಸಂಸಾರವೆಂದು ಹೆಸರು. ಈ ಸಂಸಾರ ಸಂಬಂಧವು ಜೀವರಿಗೆ ನಾನು ನನ್ನದು ಎಂಬ ಅಭಿಮಾನದ ಅಜ್ಞಾನದ ಫಲಪರಿಣಾಮವಾಗಿ ಗಂಟುಬಿದ್ದಿದೆ. ಇದು ತತ್ತ್ವಜ್ಞಾನದಿಂದ, ಜೀವಾತ್ಮ ಪರಮಾತ್ಮರು ಸಚ್ಚಿದಾನಂದರೂಪರೂ ಅಭಿನ್ನರೂ ಆಗಿದಾರೆಂಬ ತಿಳಿವಳಿಕೆ, ಅಪರೋಕ್ಷಾನುಭವದಿಂದ ತಪ್ಪುತ್ತವೆ. ಅಲ್ಲದೆ ಜೀವರಿಗೆ ಈ ಪ್ರಾಪಂಚಿಕ ಸಂಸಾರವು ಅಜ್ಞಾನಮೂಲಕವಾದುದು. ಏಕೆಂದರೆ ಜ್ಞಾನವು ಅಜ್ಞಾನವನ್ನು ಮಾತ್ರ ಕಳೆಯಬಲ್ಲುದು. ಹೀಗೆ ಈ ಜಗತ್ಸಂಸಾರವು ಸುಖಾಭಾಸರೂಪವೂ ದುಃಖರೂಪವೂ ಆಗಿದೆ. ತತ್ತ್ವಜ್ಞಾನದಿಂದ ಮರಣವು ತಪ್ಪಿ ಅಮೃತರೂಪವಾದ ಮೋಕ್ಷವನ್ನು ಪಡೆಯುವುದು ಈ ಧ್ಯಾನ, ಉಪಾಸನೆಗೆ ಕಡೆಯಫಲವಾಗಿದೆ.

ಈ ಒಂಬತ್ತು ಬಗೆಯ ಉಪದೇಶಕ್ಕೂ ಗಾಯತ್ರೀ ಮಂತ್ರದ ಮೊದಲನೆಯ ಪಾದ ಮತ್ತು ಭೂ ಎಂಬ ವ್ಯಾಹೃತಿಮಂತ್ರದ ಅರ್ಥವೇ ತಾತ್ಪರ್ಯಾರ್ಥವಾಗಿದೆ. ಅಗ್ನಿ ಜಲ ಚಂದ್ರ ಇವು ಶ್ರೇಷ್ಠವೂ ಅಪೇಕ್ಷಣೀಯವೂ ಆಗಿವೆ. ಇದರಂತೆಯೇ ಎರಡನೆಯಪಾದಕ್ಕೂ ಭುವಃ ಎಂಬ ವ್ಯಾಹೃತಿಗೂ ತಾತ್ಪರ್ಯದಲ್ಲಿ ಐಕ್ಯವಿದೆ. ಅಗ್ನಿ ಆದಿತ್ಯ ಚಂದ್ರ ಎಂಬ ತೇಜಸ್ಸುಗಳು ಕತ್ತಲೆಯನ್ನು ನಿವಾರಿಸುವಂತೆ ತತ್ತ್ವದ ಅಜ್ಞಾನದಿಂದ ಉಂಟಾಗಿರುವ ಈ ಸಂಸಾರದ ತೋರಿಕೆಯನ್ನು ಆತ್ಮಸ್ವರೂಪದ ತಿಳಿವಳಿಕೆಯು ನಿವಾರಿಸುತ್ತದೆ. ಇದೇ ರೀತಿಯಲ್ಲಿ ಗಾಯತ್ರಿಯ ಮೂರನೆಯ ಪಾದಕ್ಕೂ ಸ್ವಃ ಎಂಬ ವ್ಯಾಹೃತಿಗೂ ತಾತ್ಪರ್ಯದಲ್ಲಿ ಸಾಮರಸ್ಯವಿದೆ ಎಂಬುದನ್ನು ಉಪಾಸನಾ

ತತ್ತ್ವಜ್ಞಾನಗಳಿಂದ ಮನಗಾಣಬೇಕು. ಸಾವಿತ್ರೀದೇವಿಯ ಇಂತಹ ವಾಸ್ತವ ಸ್ವರೂಪವನ್ನು ತಿಳಿದವನು ಮೃತ್ಯುವನ್ನು ಜಯಿಸಿದವನಾಗುತ್ತಾನೆ. ಎಂದರೆ ಜನನ ಮರಣ ಕರ್ತೃತ್ವ ಭೋಕ್ತೃತ್ವ ಇವುಗಳಲ್ಲಿ ತೊಡಗಿರುವಿಕೆ ಎಂಬ ಸಂಸಾರದುಃಖವು ತಪ್ಪಿಹೋಗುತ್ತದೆ. ಆತ್ಮತತ್ತ್ವದ ಮತ್ತು ಬ್ರಹ್ಮತತ್ತ್ವದ ವಾಸ್ತವಸ್ವರೂಪದ ಅಜ್ಞಾನವೇ ಮರಣವು. ಉಪಾಸನೆಯು ಜ್ಞಾನದಲ್ಲಿ ಪರ್ಯವಸಾನವಾಗಿ ಆತ್ಮತತ್ತ್ವವೂ ಬ್ರಹ್ಮತತ್ತ್ವವೂ ಪಾರಮಾರ್ಥಿಕ ಸ್ವರೂಪದಲ್ಲಿ ಒಂದೇ ಎಂಬ ಅಪರೋಕ್ಷಾನುಭವ ದಿಂದ ಈ ಸಾಂಸಾರಿಕ ವ್ಯವಹಾರಗಳಲ್ಲಿ ನಾನು ನನ್ನದು ಎಂಬ ಅಭಿಮಾನಪೂರ್ವಕ ವಾದ ಪ್ರವೃತ್ತಿಯೂ, ಅದರ ಫಲವಾದ ದುಃಖವೂ ತಪ್ಪಿ ಅದರಲ್ಲಿ ಏಕದೇಶವಾಗಿರುವ ಮರಣವೂ ತಪ್ಪುತ್ತದೆ ಎಂದು ತಾತ್ಪರ್ಯವು. ಪರಿಣಾಮದಲ್ಲಿ ಈ ಆತ್ಮನಿಷ್ಠೆ ಬ್ರಹ್ಮನಿಷ್ಠೆಗಳು ಒಂದೇ ಆಗಿರುತ್ತವೆ.

ಬಲಾತಿಬಲಯೋಃ ವಿರಾಟ್‌ಪುರುಷಋಷಿಃ, ಗಾಯತ್ರೀ
ದೇವತಾ, ಗಾಯತ್ರೀ ಛಂದಃ, ಅಕಾರೋಕಾರಮಕಾರ
ಬೀಜಾದ್ಯಾಃ, ಕ್ಷುಧಾದಿನಿರಸನೇ ವಿನಿಯೋಗಃ ।
ಕ್ಲಾಮಿತ್ಯಾದಿ ಷಡಂಗನ್ಯಾಸಃ ।

ಈ ಉಪಾಸನೆಗೆ ಹಸಿವು ಬಾಯಾರಿಕೆಗಳು ಮೊದಲಿನಲ್ಲಿ ಅಡ್ಡಿಗಳಾಗಿರುತ್ತವೆ. ಆದುದರಿಂದ ಅವನ್ನು ನಿವಾರಿಸಲು ಉಪಾಸಕನು ಬಲಾ ಅತಿಬಲಾ ಎಂಬ ವಿದ್ಯೆಗಳಲ್ಲಿ ಪಾರಂಗತನಾಗಬೇಕೆಂದು ಅವುಗಳನ್ನೂ ಇಲ್ಲಿ ಉಪದೇಶಿಸಿದೆ. ಈ ವಿದ್ಯೆಗಳಿಗೆ ವಿರಾಟ್ಪುರುಷನೇ ಋಷಿಯು. ಇದರ ಛಂದಸ್ಸು ಗಾಯತ್ರೀ ಲಕ್ಷಣವುಳ್ಳದು. ಇದರಲ್ಲಿ ಉಪಾಸ್ಯಳಾದ ದೇವತೆಯೂ ಗಾಯತ್ರೀದೇವಿಯಾಗಿದ್ದಾಳೆ. ಪ್ರಣವಮಂತ್ರದ ಅಕಾರ ಉಕಾರ ಮಕಾರಗಳಿಂದ ಬೀಜಶಕ್ತಿಕೀಲಕಗಳನ್ನು ಭಾವಿಸಬೇಕು. ಹಸಿವು ಬಾಯಾರಿಕೆ ಮುಂತಾದ ವಿಘ್ನಗಳ ನಿವಾರಣೆಗಾಗಿಯೂ ಜಾಗ್ರತೆಯಲ್ಲಿ ಮಂತ್ರಸಿದ್ಧಿ ಯಾಗುವುದಕ್ಕೂ ಈ ಉಪಾಸನೆಯನ್ನು ಮಾಡಬೇಕೆಂದು ಹೇಳಿದೆ. ಕ್ಲಾಂ ಮುಂತಾದ ಆರು ವರ್ಣರೂಪಗಳಿಂದ ಆರುನ್ಯಾಸಗಳನ್ನೂ ಮಾಡಿಕೊಳ್ಳಬೇಕು.

ಧ್ಯಾನಂ । ಅಮೃತಕರತಲಾರ್ದ್ರೌ ಸರ್ವಸಂಜೀವನಾಢ್ಯೌ
ಅಘಹರಣಸುದಕ್ಷೌ ವೇದಸಾರೇ ಮಯೂಖೇ ।
ಪ್ರಣವಮಯವಿಕಾರೌ ಭಾಸ್ಕರಾಕಾರದೇಹೌ
ಸತತಮನುಭವೇಽಹಂ ತೌ ಬಲಾತೀಬಲೇಶೌ ॥

ಆಮೇಲೆ ದೇವತಾಧ್ಯಾನವು—ಕೈಗಳ ತುದಿಯಲ್ಲಿ ಅಮೃತದಿಂದ ಕೂಡಿರುವ, ಎಲ್ಲರನ್ನೂ ಧಾರಾಳವಾಗಿ ಅಜರಾಮರಣರನ್ನಾಗಿ ಮಾಡಿ ಬದುಕಿಸುವ, ಉಪಾಸಕರಲ್ಲಿ ರಬಹುದಾದ ಪಾಪಗಳನ್ನು ನಾಶಮಾಡಲು ಸಮರ್ಥರಾದ, ವೇದತತ್ತ್ವದ ಜ್ಞಾನ ಕಿರಣಗಳಂತಿರುವ, ಪ್ರಣವಸ್ವರೂಪರೂ ಆಗಿರುವ, ಸೂರ್ಯನಂತೆ ಪ್ರಕಾಶವಾದ ಜ್ಯೋತಿಸ್ಸ್ವರೂಪರಾಗಿರುವ ಬಲಾ ಮತ್ತು ಅತಿಬಲಾ ಎಂಬ ವಿದ್ಯೆಗಳನ್ನು ಉಪಾಸನೆಯ ಬಲದಿಂದ ನಾನು ಅವಿಚ್ಛಿನ್ನವಾಗಿ ಸಾಕ್ಷಾತ್ಕರಿಸಿಕೊಳ್ಳುವೆನು.

ಓಂ ಹ್ರೀಂ ಬಲೇ ಮಹಾದೇವಿ, ಹ್ರೀಂ ಮಹಾಬಲೇ
ಕ್ಲೀಂ ಚತುರ್ವಿಧಪುರುಷಾರ್ಥಸಿದ್ಧಿಪ್ರದೇ ತತ್ಸವಿತುರ್ವರ
ದಾತ್ಮಿಕೇ ಹ್ರೀಂ ವರೇಣ್ಯಂ ಭರ್ಗೋ ದೇವಸ್ಯ ವರದಾತ್ಮಿಕೇ
ಅತಿಬಲೇ ಸರ್ವದಯಾಮೂರ್ತೆ ಬಲೇ ಸರ್ವಕ್ಷುಚ್ಛ್ರಮೋ
ಪನಾಶಿನಿ ಧೀಮಹಿ ಧಿಯೋ ಯೋ ನರ್ಜಾತೇ ಪ್ರಚುರ್ಯಾ
ಪ್ರಚೋದಯಾತ್ಮಿಕೇ ಪ್ರಣವಶಿರಸ್ಕಾತ್ಮಿಕೆ ಹುಂ ಫಟ್ ಸ್ವಾಹಾ ॥

ಪ್ರಣವಸ್ವರೂಪಳೂ, ಹ್ರೀಂ ಮಂತ್ರ ಬೋಧ್ಯಳೂ, ಅತಿಶಯವಾದ ತೇಜೋ ರೂಪಳೂ ಆಗಿರುವ ಬಲಾವಿದ್ಯೆಯೇ, ಹ್ರೀಂ ಮಂತ್ರಬೋಧ್ಯಳಾದ ಅತಿಪರಾಕ್ರಮ ಶಾಲಿಯಾದ ಕ್ಲೀಂ ರೂಪಳಾಗಿ ಎಲ್ಲ ಉಪಾಸಕರಿಗೂ ಧರ್ಮ ಅರ್ಥ ಕಾಮ ಮೋಕ್ಷ ಗಳೆಂಬ ನಾಲ್ಕುಬಗೆಯ ಪುರುಷಾರ್ಥಗಳನ್ನೂ ಅನುಗ್ರಹಿಸುವ, ತತ್ಸವಿತುಃ ಎಂಬ ಗಾಯತ್ರೀಮಂತ್ರಪಾದದ ವರದದೇವೀಸ್ವರೂಪಳಾದ, ಹಾಗೆಯೇ ಎರಡನೆಯಪಾದದ ಶ್ರೇಷ್ಠವೂ ತೇಜೋರೂಪವೂ ಆಗಿರುವ ವರದದೇವತಾಸ್ವರೂಪಳೂ ಆದ ಅತಿಬಲಾ ವಿದ್ಯೆಯೇ, ಎಲ್ಲರಿಗೂ ಎಲ್ಲ ದೇಶ ಕಾಲಗಳಲ್ಲೂ ದಯಾರೂಪಳಾಗಿ ಕಾಣಬರುವ, ಬಲಾವಿದ್ಯೆಯೇ, ಎಲ್ಲ ಬಗೆಯ ಹಸಿವು, ಆಯಾಸ, ಅಜ್ಞಾನಗಳನ್ನು ನಿವಾರಿಸುವ, ಗಾಯತ್ರೀಮಂತ್ರದ ಮೂರನೆಯ ಪಾದದಲ್ಲಿ ಸೂಚಿತವಾಗಿರುವಂತೆ ಎಲ್ಲರಲ್ಲೂ ಧರ್ಮಪ್ರಚೋದನರೂಪಳೂ ಆಗಿರುವ ಪ್ರಣವವೇ ಶಿರಸ್ಸಾಗಿ ಉಳ್ಳ ದೇವಿಯೇ ನಿನ್ನನ್ನು ಧ್ಯಾನಿಸುತ್ತೇನೆ. ನೀನು ತೃಪ್ತಳಾಗಿ ನಿರ್ವಿಘ್ನವಾದ ಸಿದ್ಧಿಯನ್ನು ಅನುಗ್ರಹಿಸು. ಹೀಗೆ ಜಪಧ್ಯಾನಗಳನ್ನೂ ಉತ್ತರಾಂಗನ್ಯಾಸಗಳನ್ನೂ, ಸಿದ್ಧಿಯಾಗುವವರೆಗೂ ಪ್ರತಿದಿನವೂ ಮಾಡುತ್ತಿರಬೇಕು. ಹುಂ ಫಟ್ ಸ್ವಾಹಾ ಎಂಬುದು ಅರ್ಪಣಮಂತ್ರವಾಗಿದೆ.

ಏವಂ ವಿದ್ವಾನ್ ಕೃತಕೃತ್ಯೋ ಭವತಿ, ಸಾವಿತ್ರ್ಯಾ
ಏವ ಸಲೋಕತಾಂ ಜಯತಿ ಇತ್ಯುಪನಿಷತ್

ಈರೀತಿಯಲ್ಲಿ ಅರ್ಥಜ್ಞಾನಪೂರ್ವಕವಾಗಿ ಯಾರು ಉಪಾಸನೆಮಾಡುತ್ತಾರೋ ಅಂಥವರು ಇಷ್ಟಾರ್ಥಗಳನ್ನೂ ಪಡೆಯುವುದಲ್ಲದೆ, ಸಾವಿತ್ರೀಲೋಕವನ್ನೂ ಪಡೆದು ಸರ್ವೋತ್ಕೃಷ್ಟರಾಗಿರುತ್ತಾರೆ.

॥ ಓಂ ಆಪ್ಯಾಯನ್ತ್ವಿತಿ ಶಾಂತಿಃ ॥ ಇತಿ ಸಾವಿತ್ರ್ಯುಪನಿಷತ್ಸಮಾಪ್ತಾ ॥

॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಇಂತು ಸಾವಿತ್ರೀತತ್ತ್ವದ ರಹಸ್ಯೋಪದೇಶವು ಮುಗಿದುದು

ಮಾನವನು ಈ ಲೋಕದಲ್ಲಿ ಮಾಡಬೇಕಾದುದನ್ನು ನೆರವೇರಿಸಿದಂತಾಗುವುದು ಮುಖ್ಯವಾದ ಸದ್ಯಃ ಫಲವು. ಸಗುಣದೇವತಾಸ್ವರೂಪವಾದ ಆ ಪರಬ್ರಹ್ಮದ ಪದವಿಯನ್ನೂ ಪಡೆಯುವುದು ಆಂತರಾಳಿಕವಾದ ಕಡೆಯಫಲವೆಂದು ತಿಳಿಯಬೇಕು.

॥ ಓಂ ತತ್ಸತ್ ॥

|| ಶ್ರೀಃ ||

|| ಅಥರ್ವಣವೇದೀಯ ದೇವ್ಯುಪನಿಷತ್ ||

|| ಶ್ರೀಃ ||

|| ಶ್ರೀಗಣೇಶಶಾರದಾಗುರುಭ್ಯೋ ನಮಃ ||

|| ಅಥರ್ವಣವೇದೀಯ ದೇವ್ಯುಪನಿಷತ್ ||

ಅಥರ್ವಣವೇದಕ್ಕೆ ಸಂಬಂಧಿಸಿದ ಈ ದೇವೀಉಪನಿಷತ್ತು ಸ್ವಪ್ರಕಾಶರೂಪಳಾದ ದೇವಿಯ ರಹಸ್ಯತತ್ತ್ವವನ್ನು ಉಪದೇಶಿಸುತ್ತದೆ.

ಶಾಂತಿಮಂತ್ರವು

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ |
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ||
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ |
ವ್ಯಶೇಮ ದೇವಹಿತಂ ಯದಾಯುಃ ||

ಓ ದೇವತೆಗಳೇ, ನಮ್ಮ ಕಿವಿಗಳಿಂದ ಒಳ್ಳೆಯ ಸಮಾಚಾರಗಳನ್ನೇ ನಾವು ಕೇಳುತ್ತಿರುವಂತಾಗಲಿ. ಪ್ರತಿನಿತ್ಯವೂ ಪಂಚಮಹಾಯಜ್ಞಗಳ ಆಚರಣೆಯನ್ನು ಕಾಪಾಡಿಕೊಂಡು ಬರುತ್ತಿರುವವರಾಗಿ ನಾವು ನಮ್ಮ ಕಣ್ಣುಗಳಿಂದ ಶ್ರೇಯಸ್ಸುಗಳನ್ನೇ ಕಾಣುವಂತಾಗಲಿ. ದೃಢವಾದ ಅವಯವಗಳಿಂದ ಕೂಡಿದ ಶರೀರಗಳಿಂದ ನಾವು ನಿಮ್ಮ ಗುಣಗಳನ್ನು ಸ್ತೋತ್ರಮಾಡುತ್ತಿರುವವರಾಗಿ ದೇವತೆಗಳಿಗೆ ಹಿತಕರವಾದ ಧರ್ಮಾಚರಣೆಯಲ್ಲಿ ನಮ್ಮ ಆಯುಃಕಾಲವಿರುವವರೆಗೂ ನಾವು ಆದರದಿಂದ ತೊಡಗಿರುವಂತೆ ಆಗಲಿ ಎಂದು ನಿಮ್ಮನ್ನು ಪ್ರಾರ್ಥಿಸುತ್ತೇವೆ.

ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿ ನಃ ಪೂಷಾ ವಿಶ್ವವೇದಾಃ |
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿ ನೋ ಬೃಹಸ್ಪತಿರ್ದಧಾತು ||

ಓಂ ಶಾಂತಿಶ್ಶಾಂತಿಶ್ಶಾಂತಿಃ

ಹೆಚ್ಚಾದ ಕೀರ್ತಿಯುಳ್ಳ ಪುಣ್ಯಶ್ಲೋಕನಾದ ಇಂದ್ರನೂ, ಎಲ್ಲ ವೇದಗಳ ಸ್ವರೂಪನೂ ಸರ್ವಜ್ಞನೂ ಆದ ಸೂರ್ಯನೂ, ಎಲ್ಲ ವಾಙ್ಮಯಕ್ಕೂ ವಿಶೇಷವಾಗಿ ಋಗ್ವೇದಕ್ಕೂ ಅಧಿಪತಿಯಾದ ಬೃಹಸ್ಪತಿದೇವನೂ, ನಮಗೆ ಮಂಗಳಗಳನ್ನು ಅನುಗ್ರಹಿಸಿ ಹೆಚ್ಚಿಸುತ್ತಿರಲಿ.

ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳಾದ ತಾಪತ್ರಯಗಳೂ ಶಾಂತವಾಗಲೆಂಬುದು ಮೂರಾವೃತ್ತಿ ಶಾಂತಿಃ ಎಂಬ ಮಂತ್ರಪದವನ್ನು ಹೇಳಿರುವುದರ ತಾತ್ಪರ್ಯವಾಗಿದೆ.

ಉಪನಿಷತ್.

ಹರಿಃ ಓಂ ॥ ಸರ್ವೇ ವೈ ದೇವಾ ದೇವೀಮುಪತಸ್ಥುಃ,
ಕಾಽಸಿ ತ್ವಂ ಮಹಾದೇವಿ, ?

ಎಲ್ಲ ದೇವತೆಗಳೂ ಸ್ವಪ್ರಕಾಶಸ್ವಭಾವಳೂ ಚಿಚ್ಛಕ್ತಿಸ್ವರೂಪಳೂ ಆದ ದೇವಿಯನ್ನು ಧ್ಯಾನ, ಸ್ತೋತ್ರಗಳಿಂದ ಆರಾಧಿಸಿದರು. ಸರ್ವದೇವತೇಜೋರೂಪಳಾದ ದೇವಿಯೇ, ನೀನು ಯಾರು? ನಿನ್ನ ತತ್ತ್ವದ ಸ್ವರೂಪವೇನು? ಅದನ್ನು ನಮಗೆ ತಿಳಿಯಹೇಳು ಎಂದು ಕೇಳಿಕೊಂಡರು.

ಸಾಽಬ್ರವೀದಹಂ ಬ್ರಹ್ಮಸ್ವರೂಪಿಣೀ, ಮತ್ತಃ ಪ್ರಕೃತಿ
ಪುರುಷಾತ್ಮಕಂ ಜಗತ್, ಶೂನ್ಯಂ ಚಾಶೂನ್ಯಂ ಚ.

ದೇವಿಯು ಹೀಗೆ ಉತ್ತರವನ್ನು ಹೇಳಿದಳು—ನಾನು ಬ್ರಹ್ಮಸ್ವರೂಪಳಾಗಿದೇನೆ. ಬ್ರಹ್ಮವೆಂದರೆ ದೊಡ್ಡತತ್ತ್ವವೆಂದು ಅರ್ಥವು. ಸಂಕೋಚಕ ಪ್ರಮಾಣವಿಲ್ಲದುದರಿಂದ ಎಲ್ಲಕ್ಕಿಂತ ದೊಡ್ಡದೆಂದು ತಾತ್ಪರ್ಯವು. ಪ್ರಕೃತಿ ಮತ್ತು ಪುರುಷ ಎಂದರೆ, ಹೆಣ್ಣು ಮತ್ತು ಗಂಡು ಎಂಬ ಎರಡು ತತ್ತ್ವಗಳ ಸಹಕಾರದಿಂದ ಉಂಟಾಗಿ ಬೆಳೆಯುತ್ತಾ ಮುಂದುವರಿಯುತ್ತಿರುವ ಈ ಎಲ್ಲ ಪ್ರಪಂಚವೂ ನನ್ನಿಂದಲೇ ಉಂಟಾಗಿರುತ್ತದೆ. ಶೂನ್ಯ ಎಂದರೆ, ನಾಮರೂಪಗಳೆಂಬ ವಿಶೇಷ ಕಾರ್ಯರೂಪಗಳಲ್ಲಿ ತೋರದೆ ಇರುವ ಎಲ್ಲಕ್ಕೂ ಅಧಿಷ್ಠಾನವಾದ ತತ್ತ್ವರೂಪಳೂ, ಅಶೂನ್ಯವೆಂದರೆ ನಾಮರೂಪಗಳೆಂಬ ಸ್ಥೂಲಕಾರ್ಯ ಮತ್ತು ಸೂಕ್ಷ್ಮ ಕಾರಣರೂಪಳೂ ನಾನೇ ಆಗಿರುತ್ತೇನೆ.

ಅಹಮಾನಂದಾನಾನಂದಾಃ, ಅಹಂ ವಿಜ್ಞಾನಾವಿಜ್ಞಾನೇ,
ಅಹಂ ಬ್ರಹ್ಮಾಬ್ರಹ್ಮಣೀ, ವೇದಿತವ್ಯೇ, ಇತ್ಯಾಹಾಥರ್ವಶ್ರುತಿಃ ॥

ಅಲ್ಲದೆ ಪರಮಾನಂದರೂಪವಾದ ಆತ್ಮಸ್ವರೂಪಳೂ, ಅಂತಹ ಆನಂದವಲ್ಲದ ಸುಖಾಭಾಸರೂಪವಾದ ಈ ಜಗತ್ಸಂಸಾರರೂಪಳೂ ನಾನೇ ಆಗಿದೇನೆ. ನಾನೇ ಜ್ಞಾನಸ್ವರೂಪಳೂ ಅಜ್ಞಾನಸ್ವರೂಪಳೂ ಎಂದರೆ ಮೂಲಾವಿದ್ಯಾ ಮತ್ತು ಅದರ ಕಾರ್ಯಗಳಾದ ಸೂಕ್ಷ್ಮ ಸ್ಥೂಲ ಶರೀರರೂಪಳೂ ಆಗಿದೇನೆ. ಒಟ್ಟಿನಲ್ಲಿ ಹೇಳುವುದಾದರೆ ಬ್ರಹ್ಮತತ್ತ್ವ ಸ್ವರೂಪಳೂ ಚಿಜ್ಜಡರೂಪವಾದ ಈ ಜಗತ್ಸ್ವರೂಪಳೂ ಆಗಿದೇನೆ ಎಂಬುದಾಗಿ ತಿಳಿಯಬೇಕೆಂದು ಅಥರ್ವಣವೇದವು ಹೇಳುತ್ತದೆ.

ಅಹಂ ಪಂಚಭೂತಾನ್ಯಪಂಚಭೂತಾನಿ, ಅಹಮಖಿಲಂಜಗತ್,
ವೇದೋಽಹಮವೇದೋಽಹಂ, ವಿದ್ಯಾಹಮವಿದ್ಯಾಹಂ,
ಅಜಾಹಮನಜಾಹಂ, ಅಧಶ್ಚೋರ್ಧ್ವಂಚ ತಿರ್ಯಕ್ಚಾಹಂ ॥

ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಸ್ವರೂಪಳೂ, ಇತರ ಪದಾರ್ಥರೂಪಳೂ ನಾನೇ ಆಗಿದೇನೆ. ಈ ಎಲ್ಲ ಪ್ರಪಂಚವೂ ನಾನೇ. ಜ್ಞಾನಕ್ಕೆ ಸಾಧನವಾದ ವೇದವೇ ಮುಂತಾದ ವಾಙ್ಮಯವೂ ವೇದವಲ್ಲದ ಅನಾಪ್ತ ವಾಕ್ಯಗಳೂ, ಜ್ಞಾನವೂ, ಅಜ್ಞಾನವೂ, ಜನ್ಯವಲ್ಲದ ನಿತ್ಯವಸ್ತುವೂ, ಜನ್ಯವಾದ ಅನಿತ್ಯವಸ್ತುಗಳೂ ನಾನೇ ಆಗಿದೇನೆ. ಮತ್ತು ಮೇಲೆ ಕೆಳಗೆ ಅಡ್ಡಲಾಗಿ ಎಂಬ ವ್ಯವಹಾರಕ್ಕೆ ವಿಷಯವಾದ ದಿಗ್ರೂಪಳೂ ನಾನೇ ಆಗಿರುತ್ತೇನೆ.

ಅಹಗ್ಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತವಿಶ್ವದೇವೈಃ ।
ಅಹಂ ಮಿತ್ರಾವರುಣಾವುಭಾ ಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನಾವುಭೌ॥

ನಾನು ಏಕಾದಶರುದ್ರರ ರೂಪಗಳಿಂದಲೂ, ಅಷ್ಟವಸುಗಳ ರೂಪದಿಂದಲೂ ದ್ವಾದಶಾದಿತ್ಯರ ರೂಪದಿಂದಲೂ, ವಿಶ್ವೇದೇವತೆಗಳ ರೂಪದಿಂದಲೂ ಸಂಚರಿಸುತ್ತಾ ಈ ಜಗತ್ತಿನ ಕಾರ್ಯಗಳನ್ನು ನೆರವೇರಿಸುತ್ತಿರುತ್ತೇನೆ. ಅಲ್ಲದೆ ಮಿತ್ರಾವರುಣರೆಂಬ, ಇಂದ್ರಾಗ್ನಿಗಳೆಂಬ, ಅಶ್ವಿನಿಗಳೆಂಬ ಯಮಳ ದೇವತೆಗಳನ್ನೂ ನಾನೇ ಧರಿಸಿರುತ್ತೇನೆ.

ಅಹಗ್ಂ ಸೋಮಂ ತ್ವಷ್ಟಾರಂ ಪೂಷಣಂ ಭಗಂದಧಾಮ್ಯಹಂ ।
ವಿಷ್ಣುಮುರು ಕ್ರಮಂ ಬ್ರಹ್ಮಾಣಮುತ ಪ್ರಜಾಪತಿಂ ದಧಾಮಿ ॥

ಚಂದ್ರನನ್ನೂ, ಸೋಮಲತೆಯನ್ನೂ ತ್ವಷ್ಟೃ, ಪೂಷನ್, ಭಗ ಮುಂತಾದ ದೇವತೆಗಳನ್ನೂ, ವಿಸ್ತಾರವಾಗಿ ಆಕ್ರಮಿಸಬಲ್ಲ ವಿಷ್ಣುವನ್ನೂ (ತ್ರಿವಿಕ್ರಮ ದೇವನನ್ನೂ), ಪ್ರಜೆಗಳಿಗೆಲ್ಲಾ ಒಡೆಯನಾದ ಬ್ರಹ್ಮನನ್ನೂ ನಾನೇ ಅವಲಂಬನವನ್ನು ಕೊಟ್ಟು ಧರಿಸಿ ಕಾಪಾಡುತ್ತೇನೆ.

ಅಹಂದಧಾಮಿ ದ್ರವಿಣಗ್ಂ ಹವಿಷ್ಮತೇ ಸುಪ್ರಾವ್ಯೇ ಯಜಮಾನಾಯ ಸುನ್ವತೇ । ಅಹಗ್ಂ ರಾಷ್ಟ್ರೀ ಸಂಗಮನೀ ವಸೂನಾಮ ಹಗ್ಂಸುವೇ ಪಿತರಮಸ್ಯ ಮೂರ್ಧನ್ । ಮಮ ಯೋನಿರಪ್ಸ್ವಂತಸ್ಸಮುದ್ರೇಯ ಏವಂ ವೇದ ಸ ದೇವೀಪದಮಾಪ್ನೋತಿ ॥

ಯಾಗಗಳಲ್ಲಿ ದೇವತೆಗಳಿಗೆ ಸಮರ್ಪಿಸಬೇಕಾದ ಹವಿಸ್ಸಿನ ವಸ್ತುಗಳನ್ನು ಶೇಖರಿಸಿಕೊಂಡಿರುವ, ಅವನ್ನು ಅಗ್ನಿಯಲ್ಲಿ ಅರ್ಪಿಸಿ ದೇವತೆಗಳಿಗೆ ತಲಪುವಂತೆಮಾಡಿ

ಅವರನ್ನು ತೃಪ್ತಿಪಡಿಸುವ, ಸೋಮಲತೆಯನ್ನು ಹಿಂಡಿ ಅದರ ರಸದಿಂದ ಸೋಮ ಯಾಗವನ್ನು ನೆರವೇರಿಸುವ ಯಜಮಾನನಿಗೆ ಯಾಗಫಲವಾದ ಸದ್ಗತಿಯು ದೊರೆಯುವಂತೆ ಮಾಡುತ್ತೇನೆ. ನಾನು ಈ ಜಗತ್ತಿಗೆ ಅಧೀಶ್ವರಿಯಾಗಿದೇನೆ. ಉಪಾಸಕರಿಗೆ ಬೇಕಾಗುವ ದ್ರವ್ಯ ಮುಂತಾದ ಅನುಕೂಲ್ಯಗಳನ್ನು ಒದಗುವಂತೆ ಮಾಡಿ ಕಾಪಾಡುತ್ತೇನೆ.

ತಂದೆಯಂತಿರುವ ದ್ಯುಲೋಕಮುಂತಾದ ಉತ್ತಮಭೋಗಸ್ಥಾನಗಳನ್ನೂ ಎಲ್ಲಕ್ಕೂ ಅಧಿಷ್ಠಾನವಾಗಿರುವ ಬ್ರಹ್ಮತತ್ತ್ವದಲ್ಲಿ ತೋರುವಂತೆ ಉಂಟುಮಾಡುತ್ತೇನೆ. ನೀರಿನಂತೆ ವ್ಯಾಪಿಸುವ ಸ್ವಭಾವವುಳ್ಳ, ಎಲ್ಲ ಜಲಗಳಿಗೂ ಮೂಲಾಧಾರವಾದ, ಸಮುದ್ರದಂತಿರುವ ಬ್ರಹ್ಮತತ್ತ್ವವೇ ನನಗೂ ಕಾರಣವಾಗಿದೆ.

ಈ ರೀತಿಯಲ್ಲಿ ಯಾರು ತಿಳಿದು ಉಪಾಸನೆಮಾಡುತ್ತಾರೊ ಅಂಥವರು ದೇವಿಯ ಉತ್ತಮಲೋಕದಲ್ಲಿ ಮೇಲಾದ ಪದವಿಯನ್ನು ಪಡೆಯುತ್ತಾರೆ, ಎಂದು ದೇವಿಯು ದೇವತೆಗಳಿಗೆ ಹೇಳಿದಳು.

ತೇ ದೇವಾ ಅಬ್ರುವನ್ ।
ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ ।
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಸ್ಸ್ಮತಾಂ ॥

ಆ ದೇವಿಯನ್ನು ಕುರಿತು ದೇವತೆಗಳು ಈ ರೀತಿಯಲ್ಲಿ ಸ್ತೋತ್ರ ವಾಕ್ಯಗಳನ್ನು ಹೇಳಿದರು.—ಸ್ವಪ್ರಕಾಶರೂಪಳೂ ಶ್ರೇಷ್ಠಳೂ ಆದ, ಮಂಗಳಸ್ವರೂಪಳಾದ, ಎಲ್ಲ ಪ್ರಪಂಚಕ್ಕೂ ಮೂಲಕಾರಣಳಾದ, ಉಪಾಸಕರಿಗೆ ಕಲ್ಯಾಣಗಳನ್ನು ಅನುಗ್ರಹಿಸುವ ದೇವಿಗೆ ಯಾವಾಗಲೂ ನಮಸ್ಕಾರಗಳು ತಲಪುವಂತಾಗಲಿ. ಧರ್ಮನಿಯಮಗಳನ್ನು ಪಾಲಿಸುವವರಾಗಿ ನಾವು ಆ ತಾಯಿಯನ್ನು ಮರೆಹೊಕ್ಕಿದೇವೆ.

ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ ವೈರೋಚನೀಂ
ಕರ್ಮಫಲೇಷು ಜುಷ್ಟಾಂ । ದುರ್ಗಾಂ ದೇವೀಗ್ಂ ಶರಣ
ಮಹಂ ಪ್ರಪದ್ಯೇ (ಸುತರಸಿತರಸೇನಮಃ) ಸುತರಾಂ ನಾಶಯತೇ ತಮಃ ॥

ತಾಂ = ನವದುರ್ಗಾಕಲ್ಪ ಮುಂತಾದ ಮಂತ್ರಶಾಸ್ತ್ರಗಳಲ್ಲಿ ಪ್ರಸಿದ್ಧಳಾಗಿರುವ, ಅಗ್ನಿಯಬಣ್ಣವುಳ್ಳ ತೇಜಸ್ವಿನಿಯಾದ, ತನ್ನ ತೇಜಶ್ಶಕ್ತಿಯಿಂದ ಉಪಾಸಕರಾದ ನಮ್ಮ ಶತ್ರುಗಳನ್ನು ಸುಟ್ಟು ನಾಶಮಾಡುವ, ವೈರೋಚನೀಂ=ಚಿಜ್ಜ್ಯೋತೀರೂಪಳಾಗಿ ಬೆಳಗುತ್ತಿರುವ, ಪರಮಾತ್ಮನ ಇಚ್ಛಾದೃಷ್ಟಿಗೆ ಪಾತ್ರಳಾಗಿರುವ, ಭಕ್ತರು ಆಚರಿಸುವ

ಕರ್ಮಗಳಿಗೆ ಫಲವಾದ ಸ್ವರ್ಗ ಪಶು ಪುತ್ರ ಮುಂತಾದ ಐಹಿಕಾಮುಷ್ಮಿಕ ಫಲಗಳಿಗೋಸ್ಕರ ಉಪಾಸಕರಿಂದ ಸೇವಿಸಲ್ಪಡುತ್ತಿರುವ, ಪಾಪಗಳಿಂದ ಪಡೆಯಲು ಅಸಾಧ್ಯಳಾದ, ಪುಣ್ಯಶಾಲಿಗಳಿಂದ ಅರ್ಚನೆ ಉಪಾಸನೆಗಳಲ್ಲಿ ಶ್ರಮಿಸಿ ಪಡೆಯಲು ಸಾಧ್ಯಳಾದ, ಸ್ವಪ್ರಕಾಶರೂಪಳಾದ ದೇವಿಯನ್ನು ಮರೆಹೊಕ್ಕಿರುತ್ತೇನೆ. ಇಂತಹ ದೇವಿಯು ಭಕ್ತರ ಅಜ್ಞಾನವನ್ನು ನಿರ್ಮೂಲವಾಗಿ ನಾಶಮಾಡುತ್ತಾಳೆ. ಈ ಸಂಸಾರಸಾಗರವನ್ನು ಸುಲಭವಾಗಿ ದಾಟಿಸುವವಳಾದ ದೇವಿಯೇ ನಿನಗೆ ನಮಸ್ಕಾರವು.

ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ ।
ಸಾನೋ ಮಂದ್ರೇಷಮೂರ್ಜಂದು ಹಾನಾ ಧೇನುರ್ವಾಗಸ್ಮಾನುಪ ಸುಷ್ಟುತೈತು ॥

ದೇವೀಂ ವಾಚಂ ಎಂದರೆ ಜ್ಞಾನಪ್ರಕಾಶರೂಪಳಾದುದರಿಂದ ಜ್ಞಾನಸಾಧನವಾಗಿರುವ ಅಖಿಲವಾಙ್ಮಯಕ್ಕೂ ಅಭಿಮಾನಿ ದೇವತೆಯು ಸರಸ್ವತೀದೇವಿಯಾಗಿದಾಳೆ. ಸ್ವಪ್ರಕಾಶರೂಪಳಾದ ಆ ಸರಸ್ವತೀದೇವಿಯನ್ನು ಆರಾಧಿಸಿ ಆ ದೇವಿಯ ಸುವ್ಯಕ್ತವಾದ ಭಾಷಾರೂಪವನ್ನು ಎಂದರೆ ವರ್ಣಪದವಾಕ್ಯಗಳ ರೂಪವನ್ನು ಮೊದಲು ದೇವತೆಗಳು ಮನಗಂಡು ಪ್ರಚಾರಕ್ಕೆ ತಂದರು. ಅವರು ಅದನ್ನು ಮಾನವರಲ್ಲಿಯೂ ರೂಢಿಗೆ ಬರುವಂತೆ ಸಹಾಯಮಾಡಿದರು. ಈ ವಾಕ್ತತ್ತ್ವದ ಅಲ್ಪವ್ಯಕ್ತರೂಪಗಳಾದ ನಾದ ಧ್ವನಿ ಶಬ್ದಗಳಲ್ಲಿ ಧ್ವನಿ ಶಬ್ದಗಳನ್ನು ಪಶುಪಕ್ಷಿಗಳೂ ವ್ಯಕ್ತಗೊಳಿಸುತ್ತಿವೆ. ಇಂತಹ ವಾಙ್ಮಯಕ್ಕೆಲ್ಲ ಅಭಿಮಾನಿನೀ ದೇವತೆಯಾದ ಸರಸ್ವತೀದೇವಿಯು ನಮ್ಮ ಈ ಸ್ತೋತ್ರವಾಕ್ಯಗಳಿಂದ ಸಂತುಷ್ಟಳಾಗಿ, ನಮಗೆ ಅನ್ನ ಮುಂತಾದ ಘನವಸ್ತುಗಳನ್ನೂ ಹಾಲು ತುಪ್ಪ ಮುಂತಾದ ರಸವಸ್ತುಗಳನ್ನೂ ಧಾರಾಳವಾಗಿ ದೊರೆಯುವಂತೆ ಮಾಡುತ್ತಾ, ಕರೆಯುವ ಹಸುವಿನಂತೆ, ನಮ್ಮನ್ನು ಹೆಚ್ಚು ಸುಖವುಳ್ಳವರನ್ನಾಗಿ ಮಾಡುತ್ತಾ ನಮ್ಮಲ್ಲಿ ಬಂದು ನೆಲಸಿರಲಿ.

ಕಾಳರಾತ್ರಿಂ ಬ್ರಹ್ಮಸ್ತುತಾಂ ವೈಷ್ಣವೀಗ್ಂ ಸ್ಕಂದಮಾತರಂ ।
ಸರಸ್ವತೀಮದಿತಿಂ ದಕ್ಷದುಹಿತರಂ ನಮಾಮಃ ಪಾವನಾಗ್ ಶಿವಾಂ ॥

ಷಣ್ಮುಖನಿಗೆ ತಾಯಿಯಾದ, ವಿಷ್ಣುಶಕ್ತಿಸ್ವರೂಪಳಾದ, ಬ್ರಹ್ಮನಿಂದ ಸ್ತೋತ್ರ ಮಾಡಲ್ಪಟ್ಟಿರುವ, ಪಾಪಿಗಳಿಗೆ ಭಯಂಕರವಾದ ಪ್ರಳಯಕಾಲದ ರಾತ್ರಿಯಂತಿರುವ, ಸರಸ್ವತೀರೂಪಳಾಗಿ ಜ್ಞಾನವನ್ನು ಅನುಗ್ರಹಿಸುವ, ದೇವತೆಗಳಿಗೂ ತಾಯಿಯಾಗಿ ಕಾಪಾಡುವವಳಾದ, ದಕ್ಷಬ್ರಹ್ಮನ ಮಗಳಾಗಿ ದಾಕ್ಷಾಯಿಣೀ ಎಂದುಪ್ರಸಿದ್ಧಳಾಗಿರುವ, ಭಕ್ತರ ಪಾಪಗಳನ್ನು ನಿವಾರಿಸಿ ಶುದ್ಧರನ್ನಾಗಿ ಮಾಡುವ, ಮಂಗಳಕರಳಾದ ಪಾರ್ವತೀದೇವಿಯನ್ನು ನಮಸ್ಕರಿಸುತ್ತೇವೆ.

ಮಹಾಲಕ್ಷ್ಮ್ಯೈ ಚ ವಿದ್ಮಹೇ ಸರ್ವಸಿದ್ಧ್ಯೈ ಚ ಧೀಮಹಿ ।
ತನ್ನೋ ದೇವೀ ಪ್ರಚೋದಯಾತ್ ॥

ಮಹಾಲಕ್ಷ್ಮೀಸ್ವರೂಪಳಾದ ದೇವಿಯ ಅರಿವೆಂಬ ಬೆಳಕಿನ ಸ್ವರೂಪವನ್ನು ತಿಳಿಯುತ್ತೇವೆ. ಎಲ್ಲ ಮನೋರಥಗಳೂ ನೆರವೇರಲೆಂದು ಉಪಾಸನೆಮಾಡುತ್ತೇವೆ. ಬೆಳಕಿನಂತೆ ತಾನೇ ಹೊಳೆಯುವ ಚಿಜ್ಜ್ಯೋತಿಸ್ವರೂಪಳಾದ ದೇವಿಯು ನಮ್ಮನ್ನು ಧರ್ಮಾಚರಣೆಯಲ್ಲಿರುವಂತೆ ಪ್ರೇರಿಸಲಿ.

ಅದಿತಿರಿಹ ಜನಿಷ್ಟ ದಕ್ಷಯಾ ದುಹಿತಾ ತವ,
ತಾಂದೇವಾ ಅನ್ವಜಾಯನ್ತ ಭದ್ರಾ ಅಮೃತಬಂಧವಃ ॥

ಓ ದಕ್ಷಬ್ರಹ್ಮನೇ, ಪ್ರಸಿದ್ಧಳಾದ ನಿನ್ನ ಮಗಳು ಅದಿತಿಯ ರೂಪದಲ್ಲಿ ಅವತರಿಸಿರುವಳಷ್ಟೆ. ಆ ಅದಿತಿ ದೇವಿಯನ್ನು ಅನುಸರಿಸಿ ಮರಣಸಂಬಂಧವಿಲ್ಲದ ಅಮರರಾದ ದೇವತೆಗಳು ಮಂಗಳಕರರಾಗಿ ಅವತರಿಸಿದರು. ಆದುದರಿಂದ ದೇವತೆಗಳಲ್ಲಿ ಆದಿತೇಯರೆಂದೂ ಆದಿತ್ಯರೆಂದೂ ಪ್ರಸಿದ್ಧರಾಗಿ ಸ್ತೋತ್ರಾರ್ಹರಾಗಿಯೂ ಸೇವಿಸುವುದಕ್ಕೆ ಅರ್ಹರಾಗಿಯೂ ಇದಾರೆ.

ಕಾಮೋ ಯೋನಿಃ ಕಾಮಕಲಾ ವಜ್ರಪಾಣಿರ್ಗುಹಾ ಹಸ
ಮಾತರಿಶ್ವಾಭ್ರಮಿಂದ್ರಃ। ಪುನರ್ಗುಹಾ ಸಕಲಾ ಮಾಯ
ಯಾ ಚ ಪುನಃ ಕೋಶಾವಿಶ್ವಮಾತಾದಿ ವಿದ್ಯೋಮ್ ।

'ಕಾಮಃ' ಎಂದು ಮೊದಲುಮಾಡಿ 'ವಿದ್ಯೋಮ್' ಎನ್ನುವವರೆಗಿನ ಪದಗಳಿಂದ ದೇವಿಯ ಪಂಚದಶಾಕ್ಷರೀಮಂತ್ರವನ್ನು ತಿಳಿಸಿದೆ. ಇದನ್ನು ಸದ್ಗುರುವಿನಿಂದ ಉಪದೇಶವನ್ನು ಪಡೆಯಬೇಕು.

ಕಏಈಲಹ್ರೀಂ। ಹಸಕಹಲಹ್ರೀಂ। ಸಕಲಹ್ರೀಂ।

ಎಂಬುದು ಈ ಮಂತ್ರದ ಸ್ವರೂಪವು. ಕಾಮಃ ಮುಂತಾದುವು ಕ್ರಮವಾಗಿ ಈ ಅಕ್ಷರಗಳ ಸಂಜ್ಞೆಗಳಾಗಿವೆ ಎಂಬುದು ಮಂತ್ರಮಹೋದಧಿ ಎಂಬ ಗ್ರಂಥದಿಂದ ತಿಳಿಯಬರುತ್ತದೆ. ಈ ವಿದ್ಯೆಗೆ ಅಭಿಮಾನಿನಿಯಾದ ದೇವತೆಯು ಪರಮಾತ್ಮನ ಶಕ್ತಿಸ್ವರೂಪಳಾದವಳು.

ತ್ರಿಪುರೋಪನಿಷತ್ತಿನಲ್ಲಿ ಹೀಗೆ ವಿವರಿಸಿದೆ. ಕಾಮಃ, ಕ; ಯೋನಿಃ, ಎ; ಕಮಲಾ–ಈ, ವಜ್ರಪಾಣಿಃ–ಲ, ಗುಹಾ–ಹ್ರೀಂ, ಹಸಾ–ಹಸ, ಮಾತರಿಶ್ವಾ–ಕ, ಅಭ್ರಂ–ಹ, ಇಂದ್ರಃ–ಲ, ಪುನಃ, ಗುಹಾ–ಹ್ರೀಂ, ಸಕಲಾ–ಸಕಲ, ಮಾಯಯಾ–ಹ್ರೀಂ, ಚ, ಪುನಃ, ಕೋಶಾ–ಶ್ರೀಃ, ವಿಶ್ವಮಾತಾ ಶಬ್ದಾರ್ಥಸ್ವರೂಪವಾಗಿರುವ ಈ ಪ್ರಪಂಚಕ್ಕೇ ತಾಯಿಯಂತೆ ಈ ಪಂಚದಶಾಕ್ಷರೀ ವಿದ್ಯೆಯು ಎಲ್ಲ ತಿಳಿವಳಿಕೆಗೂ ಕಾರಣವಾಗಿ ಜನನಿಯಾಗಿದಾಳೆ. ಪುನಃ ಗುಹಾ ಎಂಬಲ್ಲಿ ಗುಹಾ ಎಂಬುದಕ್ಕೆ ಬದಲಾಗಿ ಕೋಶಾ ಎಂದೂ ಪಾಠಪ್ರಭೇದವಿದೆ. ಇವುಗಳಲ್ಲಿ ಸಾಂಪ್ರದಾಯಿಕವಾದ ಪಾಠವನ್ನು ಗುರೂಪದೇಶದಿಂದ ಪಡೆಯಬೇಕು.

ಏಷಾ (ತ್ಮ) ಶಕ್ತಿರೇಷಾ ವಿಶ್ವಮೋಹಿನೀ ಪಾಶಾಂಕುಶಧನು
ರ್ಬಾಣಧರಾ, ಏಷಾ ಶ್ರೀ ಮಹಾವಿದ್ಯಾ, ಯ ಏವಂ
ವೇದ ಸ ಶೋಕಂ ತರತಿ, ನಮಸ್ತೇ ಅಸ್ತು ಭಗವತೀ
ಭವತೀ ಮಾತರಸ್ಮಾನ್ಪಾತು ಸರ್ವತಃ ||

ಮಹಾಮಾಯಾ ಎಂಬ ಹೆಸರುಳ್ಳ ಈ ಅಂತರಾತ್ಮಶಕ್ತಿಯಿಂದಲೇ ಈ ಪ್ರಪಂಚವೆಲ್ಲವೂ ಮೋಹವುಳ್ಳದ್ದಾಗಿ ವ್ಯವಹರಿಸುತ್ತಿದೆ. ಪಾಶ, ಅಂಕುಶ, ಬಿಲ್ಲು, ಬಾಣ, ಮುಂತಾದ ಆಯುಧಗಳನ್ನು ಈ ದೇವಿಯು ಧರಿಸಿರುತ್ತಾಳೆ. ಈ ಮಂತ್ರದೇವತೆಯೇ ಶ್ರೀ ಮಹಾವಿದ್ಯಾ ಎಂದು ಯೋಗಿಗಳು ಹೇಳುತ್ತಾರೆ. ಹೀಗೆ ಈ ಶ್ರೀವಿದ್ಯಾದೇವಿಯ ಸ್ವರೂಪವನ್ನು ಯಾರು ತಿಳಿಯುತ್ತಾರೋ ಅವರು ದುಃಖವೆಲ್ಲವನ್ನೂ ದಾಟುತ್ತಾರೆ. ಇಂತಹ ಮಹಾಮಹಿಮಶಾಲಿನಿಯಾದ ನಿನಗೆ ನಮಸ್ಕಾರವು. ಓ ತಾಯಿಯೇ, ನೀನು ನಮ್ಮನ್ನು ಎಲ್ಲ ಬಗೆಯ ವಿಪತ್ತುಗಳಿಂದಲೂ ಕಾಪಾಡು.

ಸೈಷಾಷ್ಟೌ ವಸವಸ್ಸೈಷೈಕಾದಶ ರುದ್ರಾಸ್ಸೈಷಾ ದ್ವಾದಶಾ
ದಿತ್ಯಾಸ್ಸೈಷಾ ವಿಶ್ವೇ ದೇವಾಸ್ಸೋಮಪಾ ಅಸೋಮಪಾಶ್ಚ,
ಸೈಷಾ ಯಾತುಧಾನಾ ಅಸುರಾ ರಕ್ಷಾಗ್ಂಸಿ ಪಿಶಾಚಾ
ಯಕ್ಷಾ ಸ್ಸಿದ್ಧಾಸ್ಸೈಷಾ ಸತ್ತ್ವರಜಸ್ತಮಾಗ್ಂಸಿ, ಸೈಷಾ
ಪ್ರಜಾಪತೀಂದ್ರಮನವಃ, ಸೈಷಾ ಗ್ರಹನಕ್ಷತ್ರ ಜ್ಯೋತೀಗ್ಂಷಿ
ಕಲಾಕಾಷ್ಠಾದಿ ಕಾಲರೂಪಿಣೀ,

ಈ ಮಂತ್ರದೇವತೆಯು ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ವಿಶ್ವದೇವರು, ಸೋಮಯಾಜಿಗಳು, ಇತರ ಉಪಾಸಕರು ಮತ್ತು ಈ ದೇವಿಯು

ಸರ್ವರೂಪಳಾದುದರಿಂದ ದೈತ್ಯರು, ರಾಕ್ಷಸರು, ಅಸುರರು, ಪಿಶಾಚರು, ಯಕ್ಷರು, ಸಿದ್ಧರು ಇವರೆಲ್ಲರ ಸ್ವರೂಪವುಳ್ಳವಳಾಗಿಯೂ ಇದಾಳೆ. ಸತ್ವ, ರಜಸ್, ತಮಸ್ ಎಂಬ ಗುಣತ್ರಯರೂಪಳೂ ಇವಳೇ. ಬ್ರಹ್ಮ, ಇಂದ್ರ, ಮನುಸ್ವರೂಪಳೂ ಇವಳೇ, ಸೂರ್ಯಾದಿಗ್ರಹಗಳೂ, ಅಶ್ವಿನ್ಯಾದಿನಕ್ಷತ್ರಗಳೂ, ಸಪ್ತರ್ಷಿ, ಧ್ರುವ ಮುಂತಾದ ಜ್ಯೋತಿಗಳು, ಕಲಾ, ಕಾಷ್ಠಾ, ಘಳಿಗೆ, ದಿನ, ವರ್ಷ, ಯುಗ ಮುಂತಾದ ಕಾಲಭಾಗಗಳಿಂದ ಕೂಡಿದ ಮಹಾಕಾಲ ಇವೆಲ್ಲವೂ ಆ ದೇವಿಯ ಸಗುಣವೂ ಸಾಕಾರವೂ ಆಗಿರುವ ಪರಿಮಿತರೂಪಗಳೇ ಆಗಿವೆ.

ತಾಮಹಂ ಪ್ರಣೌಮಿ ನಿತ್ಯಂ,
ತಾ (ಪಾ) ಪಹಾರಿಣೀಂ ದೇವೀಂ ಭುಕ್ತಿಮುಕ್ತಿ ಪ್ರದಾಯಿನೀಂ ||

ಇಂತಹ ಸರ್ವಾತ್ಮಕಳಾದ ಭಕ್ತರ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ತಾಪತ್ರಯಗಳನ್ನು ನಿವಾರಿಸುವ, ಐಹಿಕಾಮುಷ್ಮಿಕಗಳಾದ ಭೋಗಗಳನ್ನೂ, ಕಡೆಗೆ ನಿತ್ಯಸುಖವಾದ ಮೋಕ್ಷವನ್ನೂ ಅನುಗ್ರಹಿಸುವ, ಆ ಜಗನ್ಮಾತೆಯಾದ ದೇವಿಯನ್ನು ನಮಸ್ಕರಿಸುತ್ತೇನೆ.

ಅನಂತಾಂ ವಿಜಯಾಂ ಶುದ್ಧಾಂ ಶರಣ್ಯಾಂ ಶಿವದಾಂ ಶಿವಾಂ |

ಅಪರಿಮಿತವಾದ ಸ್ವರೂಪವುಳ್ಳ, ಎಲ್ಲ ಕಾರ್ಯಗಳಲ್ಲೂ ಸಿದ್ಧಿಯನ್ನುಂಟುಮಾಡುವ, ದೋಷವಿಲ್ಲದೆ ನಿರ್ಮಲವಾದ, ಭಕ್ತರನ್ನು ಕಾಪಾಡುವ, ಮಂಗಳಸ್ವರೂಪಳಾದ, ಶ್ರೇಯಸ್ಸುಗಳನ್ನು ಅನುಗ್ರಹಿಸುವ, ಈ ಮಂತ್ರದಿಂದ ಧ್ಯಾನಿಸಬೇಕಾಗಿರುವ, ದೇವಿಯನ್ನು ನಮಸ್ಕರಿಸುತ್ತೇನೆ.

ವಿಯದಾಕಾರಸಂಯುಕ್ತಂ ವೀತಿಹೋತ್ರಸಮನ್ವಿತಂ |
ಅರ್ಧೇಂದುಲಸಿತಂ ದೇವ್ಯಾ ಬೀಜಂ ಸರ್ವಾರ್ಥಸಾಧಕಂ |
ಏವಮೇಕಾಕ್ಷರಂ ಮಂತ್ರಂ ಯತಯಶ್ಶುದ್ಧಚೇತಸಃ |
ಧ್ಯಾಯನ್ತಿ ಪರಮಾನಂದಮಯಾ ಜ್ಞಾನಾಂಬುರಾಶಯಃ ||

'ವಿಯದಾಕಾರ' ಎಂದು ಮೊದಲುಮಾಡಿ ವಿವರಿಸಿರುವ ಈ ಏಕಾಕ್ಷರಮಂತ್ರವನ್ನು ತಿಳಿಸುತ್ತಾರೆ. ಈ ಮಂತ್ರವು ಎಲ್ಲ ಇಷ್ಟಾರ್ಥಗಳನ್ನೂ ಕೊಡಬಲ್ಲುದು. ಈ ಮಂತ್ರವನ್ನು ನಿರ್ಮಲವಾದ ಮನಸ್ಸುಳ್ಳ ಯತಿಗಳು ಜಪಿಸುತ್ತಾರೆ. ಅವರು ಸಮುದ್ರದಂತೆ ಅಪಾರವಾದ ಜ್ಞಾನವನ್ನು ಪಡೆದು ಸರ್ವೋತ್ತಮವಾದ ಆನಂದವನ್ನು ಅನುಭವಿಸುತ್ತಾರೆ.

ವಾಙ್ಮಯಾ ಬ್ರಹ್ಮಭೂಸ್ತಸ್ಮಾತ್ ಷಷ್ಠಂ ವಕ್ತ್ರಸಮನ್ವಿತಂ ।
ಸೂರ್ಯೋಽವಾಮಶ್ರೋತ್ರಬಿಂದುಸ್ಸಂಯುತ್ಯಷ್ಟತೃತೀಯಕಂ ।
ನಾರಾಯಣೇನ ಸಂಯುಕ್ತೋ ವಾಯುಶ್ಚಾಧರಸಂಯುತಃ ।
ವಿಚ್ಚೇ ನವಾರ್ಣಕೋಽರ್ಣಸ್ಸ್ಯಾನ್ಮಹದಾನಂದದಾಯಕಃ ॥

'ವಾಙ್ಮಯಾ' ಎಂದು ಮೊದಲುಮಾಡಿ ನವಾರ್ಣಮಂತ್ರವನ್ನು ತಿಳಿಸಿರುತ್ತಾರೆ. ಈ ಮಂತ್ರವು ಶ್ರೇಷ್ಠವಾದ ತತ್ತ್ವಸಾಕ್ಷಾತ್ಕಾರದ ಆನಂದವನ್ನುಂಟುಮಾಡುತ್ತದೆ. ಈ ಮಂತ್ರವನ್ನು ದುರ್ಗಾಸಪ್ತಶತಿಯಲ್ಲಿ ವಿವರಿಸಿದೆ.

ಹೃತ್ಪುಂಡರೀಕಮಧ್ಯಸ್ಥಾಂ ಪ್ರಾತಸ್ಸೂರ್ಯಸಮಪ್ರಭಾಂ ।
ಪಾಶಾಂಕುಶಧರಾಂ ಸೌಮ್ಯಾಂ ವರದಾಭಯಹಸ್ತಕಾಂ ।
ತ್ರಿನೇತ್ರಾಂ ರಕ್ತವಸನಾಂ ಭಕ್ತಕಾಮದುಘಾಂ ಭಜೇ ॥

ಕಮಲದ ಹಾಗಿರುವ ಭಕ್ತರ ಹೃದಯದ ಮಧ್ಯದಲ್ಲಿ ನೆಲಸಿರುವ, ಪ್ರಾತಃಕಾಲದ ಸೂರ್ಯನಂತೆ ಪ್ರಕಾಶಿಸುವ, ಪಾಶಾಂಕುಶ ಮುಂತಾದ ಆಯುಧಗಳನ್ನು ಧರಿಸಿರುವ, ಹಿತಕರವಾದ ಸ್ವರೂಪವುಳ್ಳ, ವರದ ಅಂದರೆ ಇಷ್ಟಾರ್ಥಗಳನ್ನು ಅನುಗ್ರಹಿಸುವ, ವಿಪತ್ತಿನಿಂದ ಕಾಪಾಡುತ್ತೇನೆ ಎಂಬ ಭರವಸೆಯನ್ನು ಕೊಡುವ ವರದ ಮತ್ತು ಅಭಯ ಎಂಬ ಹಸ್ತಮುದ್ರೆಗಳಿಂದ ಕೂಡಿರುವ, ಚಂದ್ರಸೂರ್ಯಾಗ್ನಿರೂಪಗಳಾದ ಮೂರು ಕಣ್ಣುಗಳುಳ್ಳ, ಕೆಂಪುಬಣ್ಣದ ವಸ್ತ್ರಗಳನ್ನು ಧರಿಸಿರುವ, ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿಕೊಡುವ ದೇವಿಯನ್ನು ಸೇವಿಸುತ್ತೇನೆ.

ನಮಾಮಿ ತ್ವಾಮಹಂ ದೇವಿ ಮಹಾಭಯವಿನಾಶಿನೀಂ ।
ಮಹಾದುರ್ಗಪ್ರಶಮನೀಂ ಮಹಾಕಾರುಣ್ಯರೂಪಿಣೀಂ ॥

ಓ ದೇವಿಯೇ, ಮಹಾಭಯಗಳನ್ನು ನಿವಾರಿಸುವಂಥ, ದೊಡ್ಡ ವಿಪತ್ತುಗಳನ್ನು ಹೋಗಲಾಡಿಸುವಂಥ, ಹೆಚ್ಚಾದ ದಯೆಯಿಂದ ಕೂಡಿರುವ ಸ್ವರೂಪವುಳ್ಳ ನವದುರ್ಗಾಶಕ್ತಿರೂಪಳಾದ ನಿನ್ನನ್ನು ನಮಸ್ಕರಿಸುತ್ತೇನೆ.

ಯಸ್ಯಾಃ ಸ್ವರೂಪಂ ಬ್ರಹ್ಮಾದಯೋ ನ ಜಾನನ್ತಿ ತಸ್ಮಾ
ದುಚ್ಯತೇ ಽ ಜ್ಞೇಯಾ, ಯಸ್ಯಾ ಅಂತೋ ನ ವಿದ್ಯತೇ
ತಸ್ಮಾದುಚ್ಯತೇಽನನ್ತಾ, ಯಸ್ಯಾ ಗ್ರಹಣಂ ನೋಪಲಭ್ಯತೇ
ತಸ್ಮಾದುಚ್ಯತೇ ಲಕ್ಷ್ಯಾ, ಯಸ್ಯಾ ಜನನಂ ನೋಪಲಭ್ಯತೇ
ತಸ್ಮಾದುಚ್ಯತ ಅಜಾ,

ಬ್ರಹ್ಮನೇ ಮೊದಲಾದವರೂ ಯಾವ ನಿನ್ನ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಲಾರರು, ಆದುದರಿಂದ ನೀನು ಅಜ್ಞೇಯಳೆನ್ನಿಸಿಕೊಂಡಿರುವೆ. ನೀನು ತುದಿ ಇಲ್ಲದವಳಾದುದರಿಂದ ಅನಂತಳು. ನೀನು ಇಂದ್ರಿಯಗೋಚರಳಲ್ಲವು, ಆದುದರಿಂದ ಲಕ್ಷ್ಯಸ್ವರೂಪಳು, ಎಂದರೆ ಯಾವ ಪದಗಳಾಗಲೀ ನಿನ್ನ ವಾಸ್ತವಸ್ವರೂಪವನ್ನು ಅಭಿಧಾವೃತ್ತಿಯಿಂದ ತಿಳಿಸಲಾರವು, ಆದುದರಿಂದ ಲಕ್ಷಣಾವೃತ್ತಿಯಿಂದ ನಿನ್ನನ್ನು ತಿಳಿಯಬೇಕಾಗಿರುತ್ತದೆ. ನಿನ್ನ ಹುಟ್ಟನ್ನು ಯಾರೂ ನೋಡಿಲ್ಲವಾದುದರಿಂದ ನೀನು ಅಜಳು.

ಏಕೈವ ಸರ್ವತ್ರ ವರ್ತತೆ ತಸ್ಮಾದುಚ್ಯತ ಏಕಾ, ಏಕೈವ
ವಿಶ್ವರೂಪಿಣೀ ತಸ್ಮಾದುಚ್ಯತೇನೈಕಾ, ಅತ ಏವೋಚ್ಯತೇಽ
ಜ್ಞೇಯಾಽನನ್ತಾ ಲಕ್ಷ್ಯಾಜೈಕಾ ನೈಕೇತಿ ॥

ನೀನೊಬ್ಬಳೇ ಬೆಳಕಿನಂತೆಯೂ, ಆಕಾಶದಂತೆಯೂ, ಎಲ್ಲೆಡೆಗಳಲ್ಲಿಯೂ ಚೈತನ್ಯಶಕ್ತಿರೂಪಳಾಗಿ ವ್ಯಾಪಿಸಿರುವೆಯಾದುದರಿಂದ ನೀನು ಏಕಾ ಎನ್ನಿಸಿರುವೆ. ಆದರೂ ಸಗುಣವಾದ ಅನೇಕರೂಪಗಳಲ್ಲಿಯೂ ತೋರುತ್ತಿರುವೆಯಾದುದರಿಂದ ನೈಕಾ (ಅನೇಕಾ) ಎನ್ನಿಸಿಯೂ ಇರುವೆ. ಹೀಗೆ ನಿನಗೆ ಅಜ್ಞೇಯಾ, ಅನಂತಾ, ಲಕ್ಷ್ಯಾ, ಅಜಾ ಏಕಾ, ನೈಕಾ, ಎಂಬ ಹೆಸರುಗಳು ಪ್ರಸಿದ್ಧವಾಗಿವೆ.

ಮಂತ್ರಾಣಾಂ ಮಾತೃಕಾ ದೇವೀ ಶಬ್ದಾನಾಂ ಜ್ಞಾನರೂಪಿಣೀ ।
ಜ್ಞಾನಾನಾಂ ಚಿನ್ಮಯಾತೀತಾ ಶೂನ್ಯಾನಾಂ ಶೂನ್ಯಸಾಕ್ಷಿಣೀ ॥

ಈ ಲೋಕದಲ್ಲಿ ಪ್ರಸಿದ್ಧಿಯಾಗಿರುವ ಎಲ್ಲ ಬಗೆಯ ಮಂತ್ರಗಳೂ ವರ್ಣ ಮಾಲೆಯ ಅಕ್ಷರಗಳಿಂದ ಉಂಟಾಗುತ್ತವೆ. ಆದುದರಿಂದ ಮಂತ್ರಗಳಿಗೆ ತಾಯಿಯು ವರ್ಣಮಾಲೆಯು. ಶಬ್ದಗಳು ತಿಳುವಳಿಕೆಯನ್ನುಂಟುಮಾಡುವ ಸಾಧನಗಳಾಗಿವೆ. ತಿಳಿವಳಿಕೆ ಎಲ್ಲವೂ ಚಿದ್ರೂಪವಾದುದು. ಆದುದರಿಂದ ನೀನು ಚಿಜ್ಜ್ಯೋತೀರೂಪಳು. ಈ ವೃತ್ತಿರೂಪಜ್ಞಾನವೆಲ್ಲವೂ ಪರಿಮಿತವಾದುದರಿಂದಲೂ ನೀನು ಅಪರಿಮಿತಳಾದುದ ರಿಂದಲೂ, ಆ ಚಿತ್ತನ್ನೂ ಮೀರಿರುವೆ. ಖಂಡವೃತ್ತಿಗಳೆಲ್ಲವೂ ಅಳಿದುಹೋದರೂ ವೃತ್ತಿಶೂನ್ಯವಾದ ಆ ಅಖಂಡಚಿತ್ತಿಗೂ ನೀನು ಸಾಕ್ಷಿರೂಪಳಾಗಿರುವೆ.

ಯಸ್ಯಾಃ ಪರತರಂ ನಾಸ್ತಿ ಸೈಷಾ ದುರ್ಗಾ ಪ್ರಕೀರ್ತಿತಾ ।
ದುರ್ಗಾತ್ಸಂತ್ರಾಯತೇ ಯಸ್ಮಾದ್ದೇವೀ ದುರ್ಗೇತಿ ಕಥ್ಯತೇ ॥

ಯಾವ ದೇವಿಗಿಂತ ಮಿಗಿಲಾದ ದೇವತೆ ಇಲ್ಲವೋ ಆ ದೇವಿಯೇ ದುರ್ಗಾ ಎಂದು ಹೇಳಿದೆ. ಕಷ್ಟಕ್ಕೆ ಸಿಕ್ಕಿರುವವರನ್ನು ಕಾಪಾಡುತ್ತಾಳಾದುದರಿಂದ ದುರ್ಗಾ ಎಂದು ಹೆಸರುಗೊಂಡಿರುತ್ತಾಳೆ.

ಪ್ರಪದ್ಯೇ ಶರಣಂ ದೇವೀಂ ದುಂ ದುರ್ಗೇ ದುರಿತಂ ಹರ ।
ತಾಂ ದುರ್ಗಾಂ ದುರ್ಗಮಾಂ ದೇವೀಂ ದುರಾಚಾರವಿಘಾತಿನೀಂ ॥
ನಮಾಮಿ ಭವಭೀತೋಽಹಂ ಸಂಸಾರಾರ್ಣವತಾರಿಣೀಂ ॥

ಆ ದೇವಿಯನ್ನು ರಕ್ಷಕಳೆಂದು ಮರೆಹೊಕ್ಕಿರುತ್ತೇನೆ. ಓ ದುರ್ಗಾದೇವಿಯೇ, ನನ್ನ ಪಾಪಗಳನ್ನು ಪರಿಹರಿಸಿ ಕಾಪಾಡು. ಕೆಟ್ಟವರಿಂದ ಪಡೆಯಲು ಅಸಾಧ್ಯಳಾಗಿರುವ, ದುಷ್ಟನಡವಳಿಕೆಗಳನ್ನು ನಾಶಮಾಡುವ, ಈ ಲೋಕದಲ್ಲಿ ಕಾಮನೆಯಿಂದ ಕರ್ಮಗಳನ್ನು ಆಚರಿಸುವುದು, ಅವುಗಳ ಫಲಗಳಿಂದ ಸುಖದುಃಖಗಳನ್ನು ಅನುಭವಿಸುವುದು, ಇದಕ್ಕಾಗಿ ಪುನಃ ಪುನಃ ಹುಟ್ಟುವುದು ಸಾಯುವುದು, ಕರ್ಮ ಮಾಡುತ್ತಿರುವುದು, ಈ ರೀತಿಯಲ್ಲಿ ಮೊದಲು ತುದಿಗಳಿಲ್ಲದ ಈ ಪರಂಪರೆಯ ನಿರ್ಬಂಧದಲ್ಲಿ ಸಿಕ್ಕಿ ಸುತ್ತುತ್ತಿರುವಿಕೆಗೆ ಸಂಸಾರವೆಂದು ಹೆಸರು. ಈ ಸಂಸಾರವೆಂಬ ಸಮುದ್ರದಿಂದ ವಿವೇಕಿಗಳನ್ನು ಎಂದರೆ ಕಾಮ್ಯ ಮತ್ತು ನಿಷಿದ್ಧಕರ್ಮಗಳನ್ನೂ ಬಿಟ್ಟು, ನಿತ್ಯಕರ್ಮಗಳನ್ನು ಫಲಾಶೆ ಇಲ್ಲದೆ, ಈಶ್ವರಪ್ರೀತಿಗೆಂದೂ, ಲೋಕಸಂಗ್ರಹಕ್ಕೆಂದೂ ಆಚರಿಸುತ್ತಾ ಚಿತ್ತವು ಶುದ್ಧವಾಗಲು ಪರತತ್ತ್ವಜ್ಞಾನವನ್ನು ಪಡೆಯುವ ವಿವೇಕಿಗಳನ್ನು, ದಾಟಿಸಿ ಬಿಡುಗಡೆಯ ನಿತ್ಯಾನಂದಸ್ಥಿತಿಯನ್ನು ಪಡೆಯಿಸುವ, ದೇವಿಯನ್ನು ನಾನು, ಈಸಂಸಾರದಿಂದ ಹೆದರಿದವನಾಗಿ ನಮಸ್ಕರಿಸುತ್ತೇನೆ.

ಇದಮಥರ್ವಶೀರ್ಷಂ ಯೋಽಧೀತೇ ಸ ಪಂಚಾಥರ್ವಣ
ಶೀರ್ಷ ಜಪಫಲಮವಾಪ್ನೋತಿ, ಇದಮಥರ್ವಶೀರ್ಷಂ
ಜ್ಞಾತ್ವಾಯೋಽರ್ಚಾಂ ಸ್ಥಾಪಯತಿ,
ಶತಲಕ್ಷಂ ಪ್ರಜಪ್ತ್ವಾಪಿ ಸೋಽರ್ಚಾಸಿದ್ಧಿಂ ವಿಂದತಿ।

ಅಥರ್ವಣವೇದಕ್ಕೆ ಸಂಬಂಧಿಸಿದ ಈ ಉಪನಿಷತ್ತನ್ನು ಯಾರು ಗುರುಮುಖದಿಂದ ಅಧ್ಯಯನಮಾಡುತ್ತಾರೋ ಅಂಥವರು ಈ ವೇದದ ಗ್ರಂಥಜಪದ ಐದರಷ್ಟು ಫಲವನ್ನು ಪಡೆಯುತ್ತಾರೆ. ಇದರ ಅರ್ಥವನ್ನು ತಿಳಿದು ಯಾರು ಪ್ರತಿಮೆಯನ್ನು ಸ್ಥಾಪಿಸಿ ಆರಾಧಿಸುತ್ತಾರೋ, ಯಾರು ನೂರುಲಕ್ಷ ಜಪವನ್ನು ಮಾಡುತ್ತಾರೋ, ಅಂಥವರು ಫಲಸಿದ್ಧಿಯನ್ನು ಪಡೆಯುತ್ತಾರೆ. ಗುರೂಪದೇಶದಿಂದ ಸಿದ್ಧಿಯು ಶೀಘ್ರವೂ ಸುಲಭವೂ ಆಗುತ್ತದೆ.

ಶತಮಷ್ಟೋತ್ತರಂ ಚಾಸ್ಯಾಃ ಪುರಶ್ಚರ್ಯಾವಿಧಿಸ್ಸ್ಮೃತಃ ।
ದಶವಾರಂ ಪಠೇದ್ಯಸ್ತು ಸದ್ಯಃ ಪಾಪೈಃ ಪ್ರಮುಚ್ಯತೇ ।
ಮಹಾದುರ್ಗಾಣಿ ತರತಿ ಮಹಾದೇವ್ಯಾಃ ಪ್ರಸಾದತಃ ॥

ಒಂದುನೂರೆಂಟುಸಲ ಈ ಉಪನಿಷತ್ತನ್ನೂ ಮಂತ್ರಗಳನ್ನೂ ಜಪಿಸಿದರೆ ಪುರಶ್ಚರಣವಿಧಿಯು ಸಮಗ್ರವಾಗುತ್ತದೆ. ಹತ್ತುಸಲ ಯಾರು ಇದನ್ನು ಪಾರಾಯಣ ಮಾಡುತ್ತಾರೋ ಅಂಥವರು ಆ ಕೂಡಲೇ ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ಈ ಮಹಾದೇವಿಯ ಅನುಗ್ರಹದಿಂದ ಉಪಾಸಕನು ದೊಡ್ಡ ದೊಡ್ಡ ವಿಪತ್ತುಗಳನ್ನೂ ದಾಟಿ ಸುಖವಾಗಿರುತ್ತಾನೆ.

ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ ।
ಸಾಯಮಧೀಯಾನೋ ದಿವಸಕೃತಂ ಪಾಪಂ ನಾಶಯತಿ ।
ತತ್ಸಾಯಂ ಪ್ರಾತಃ ಪ್ರಯುಂಜಾನಃ ಪಾಪೋಽಪಾಪೋ
ಭವತಿ । ನಿಶೀಥೇ ತುರೀಯಸಂಧ್ಯಾಯಾಂ ಜಪ್ತ್ವಾ
ವಾಕ್ಸಿದ್ಧಿರ್ಭವತಿ ।

ಇದನ್ನು ಬೆಳಿಗ್ಗೆ ಪಾರಾಯಣಮಾಡುವುದರಿಂದ ಹಿಂದಿನ ರಾತ್ರಿಯಲ್ಲಿ ಮಾಡಿದ್ದ ಪಾಪಗಳು ನಷ್ಟವಾಗುತ್ತವೆ. ಸಾಯಂಕಾಲದಲ್ಲಿ ಪಾರಾಯಣ ಮಾಡುವುದರಿಂದ ಹಗಲಿನಲ್ಲಿ ಮಾಡಿದ್ದ ಪಾಪವೆಲ್ಲವೂ ನಾಶವಾಗುತ್ತದೆ. ಸಾಯಂಪ್ರಾತಃ ಕಾಲಗಳೆರಡರಲ್ಲೂ ಜಪಿಸುವವನು ಪಾಪಿಯಾಗಿದ್ದರೂ ಅವನ ಪಾಪಗಳೆಲ್ಲವೂ ನಷ್ಟವಾಗುತ್ತದೆ. ಅರ್ಧರಾತ್ರಿಯಲ್ಲೂ, ನಾಲ್ಕನೆಯ ಸಂಧ್ಯಾಕಾಲದಲ್ಲೂ ಪಾರಾಯಣ ಮಾಡುವುದರಿಂದ ಚೆನ್ನಾಗಿ ಉಪನ್ಯಾಸಮಾಡುವ ಶಕ್ತಿಯೂ ಅಥವಾ ಆಡಿದ ಮಾತು ನಿಜವಾಗುವಿಕೆಯೂ ಸಿದ್ಧಿಸುತ್ತದೆ.

ನೂತನಪ್ರತಿಮಾಯಾಂ ಜಪ್ತ್ವಾ ದೇವತಾಸಾನ್ನಿಧ್ಯಂ
ಭವತಿ । ಪ್ರಾಣಪ್ರತಿಷ್ಠಾಯಾಂ ಜಪ್ತ್ವಾ ಪ್ರಾಣಾನಾಂ
ಪ್ರತಿಷ್ಠಾ ಭವತಿ । ಭೌಮಾಶ್ವಿನ್ಯಾಂ ಮಹಾದೇವೀ ಸನ್ನಿಧೌ
ಜಪ್ತ್ವಾ ಮಹಾಮೃತ್ಯುಂ ತರತಿ ಯ ಏವಂ ವೇದ
ಇತ್ಯುಪನಿಷತ್ ॥

ಹೊಸದಾಗಿ ಮಾಡಿದ ದೇವತಾವಿಗ್ರಹದ ಸಮೀಪದಲ್ಲಿ ಪಾರಾಯಣಮಾಡಿದರೆ ಆ ದೇವತೆಯು ಅಲ್ಲಿ ಬಂದು ನೆಲಸುವಂತಾಗುತ್ತದೆ. ಪ್ರಾಣಪ್ರತಿಷ್ಠಾಕಾಲದಲ್ಲಿ ಜಪಿಸಿದರೆ ಆ ಕಾರ್ಯವು ಚೆನ್ನಾಗಿ ನೆರವೇರುತ್ತದೆ. ಮಂಗಳವಾರ ಅಶ್ವಿನೀನಕ್ಷತ್ರ ಯೋಗದಲ್ಲಿ ಮಹಾದೇವಿಯ ಸಮೀಪದಲ್ಲಿ ಜಪಿಸಿದರೆ ಮಹಾಮೃತ್ಯುವನ್ನೂ ದಾಟುತ್ತಾನೆ, ಮರಣವು ತಪ್ಪುತ್ತದೆ. ಈ ತತ್ತ್ವರಹಸ್ಯವನ್ನು ತಿಳಿದವನಿಗೆ ಈ ಫಲಗಳೆಲ್ಲವೂ ದೊರೆಯುತ್ತವೆ. ಇಂತು ಈ ರಹಸ್ಯೋಪದೇಶವು ಮುಗಿದುದು.

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ॥
ಸ್ವಸ್ತಿನ ಇಂದ್ರೋ ವೃದ್ಧಶ್ರವಾಃ
ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ
ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಓಂ ಶಾಂತಿಶ್ಶಾಂತಿಶ್ಶಾಂತಿಃ॥

ಪಾರಾಯಣಾನಂತರದಲ್ಲಿ ಈ ಶಾಂತಿಪಾಠವನ್ನು ಪುನಃ ಜಪಿ ವಿವರಣೆಯನ್ನು ಹಿಂದೆಯೇ ತಿಳಿಸಿದೆ. ದೇವಿಯ ಉಪನಿಷ

॥ ಓಂ ತತ್ಸತ್ ॥

॥ ಶ್ರೀಃ ॥

ಅಥ

॥ ಗಾಯತ್ರ್ಯುಪನಿಷತ್ ॥

|| ಶ್ರೀಃ ||

|| ಗಾ ಯ ತ್ರ್ಯು ಪ ನಿ ಷ ತ್ ||

|| ಶ್ರೀ ಗಣೇಶಶಾರದಾಗುರುಭ್ಯೋ ನಮಃ ||

ಅಸ್ಯ ಶ್ರೀ ಗಾಯತ್ರ್ಯುಪನಿಷನ್ಮಹಾಮಂತ್ರಸ್ಯ ಪ್ರಹ್ಲಾದೋ ಭಗವಾನೃಷಿಃ । ಗಾಯತ್ರೀ ಛಂದಃ । ಅಗ್ನಿರ್ದೇವತಾ । ಅಂ ಬೀಜಂ । ಉಂ ಶಕ್ತಿಃ । ಮಂ ಕೀಲಕಂ । ಮಮ ಸಕಲಾಭೀಷ್ಟಸಿದ್ಧ್ಯರ್ಥೇ ಗಾಯತ್ರ್ಯುಪನಿಷನ್ಮಂತ್ರಜಪೇ ವಿನಿಯೋಗಃ ॥

ಶ್ರೀಗಾಯತ್ರ್ಯುಪನಿಷತ್—ಗಾಯನ್ತಂ ತ್ರಾಯತ ಇತಿ ಗಾಯತ್ರೀ । ಎಂದರೆ ಈ ಮಂತ್ರವನ್ನು ಅರ್ಥಜ್ಞಾನಪೂರ್ವಕವಾಗಿ ಜಪಿಸುತ್ತಾ ಧ್ಯಾನಮಾಡುವವರನ್ನೂ ಕಾಪಾಡುವ ಶಕ್ತಿರೂಪಳಾದ ದೇವಿಯು ಎಂದು ಅರ್ಥವು.

ಉಪನಿಷತ್ ಎಂದರೆ, ಉಪ=ಗುರುವಿನ ಸಮೀಪದಲ್ಲಿ ನಿ=ಕೆಳಗೆ ಸತ್=ಕುಳಿತಿರುವಿಕೆ ಎಂದು ಅವಯವಾರ್ಥವು, ತಿಳುವಳಿಕೆಯನ್ನು ಪಡೆಯ ಬೇಕೆಂಬ ಇಚ್ಛೆಯುಳ್ಳ ಶಿಷ್ಯನು ಸದ್ಗುರುವಿನ ಸಮೀಪದಲ್ಲಿ ವಿನಯದಿಂದ ರಹಸ್ಯ ತತ್ತ್ವಗಳನ್ನು ತಿಳಿದುಕೊಳ್ಳುವುದಕ್ಕಾಗಿ ಕೂತಿರುವನು. ಅಂತಹ ಶಿಷ್ಯನಿಗೆ ಗುರುವು ರಹಸ್ಯವಾದ ಪರಮಾರ್ಥತತ್ತ್ವಗಳನ್ನು ಉಪದೇಶಿಸುವನು. ಈ ರೀತಿಯಲ್ಲಿ ಮಾಡಿದ ಉಪದೇಶಗಳಿಗೂ ಅವನ್ನು ತಿಳಿಯಿಸುವ ಗ್ರಂಥಗಳಿಗೂ ಉಪನಿಷತ್ ಎಂದು ಹೆಸರು.

ಅಸ್ಯ=ಈ, ಶ್ರೀ=ಚಿಜ್ಜ್ಯೋತಿಯ ಬೆಳಕನ್ನು ನಮ್ಮ ಹೃದಯದಲ್ಲಿ ಬೆಳಗುವಂತೆ ಮಾಡುವ, ಗಾಯತ್ರ್ಯುಪನಿಷತ್ತೆಂಬ ಮಹಾ ಮಂತ್ರಸ್ಯ=ಶ್ರೇಷ್ಠವಾದ ಮಂತ್ರಕ್ಕೆ, ಭಗವಾನ್=ಷಡ್ಗುಣೈಶ್ವರ್ಯಶಾಲಿಯಾದ ಪ್ರಹ್ಲಾದಃ=ಪ್ರಹ್ಲಾದನೆಂಬ ಭಕ್ತಶಿಖಾ ಮಣಿಯು ಋಷಿಃ=ಋಷಿಯು. ಪರಮಾರ್ಥತತ್ತ್ವಗಳನ್ನು ನಮ್ಮ ಹೃದಯದಲ್ಲಿ

ಅನುಭವಕ್ಕೆ ತಂದುಕೊಡುವ ವಾಕ್ಯಪದ ವರ್ಣಗಳಿಗೆ ಮಂತ್ರವೆಂದು ಹೆಸರು. ಇಂತಹ ಮಂತ್ರಗಳನ್ನು ಮೊದಲು ಮನಗಂಡು ಪ್ರಚಾರಮಾಡಿದ ಮಹಾನುಭಾವನಿಗೆ ಋಷಿ ಎಂದು ವ್ಯವಹಾರವಿದೆ. ಈ ಮಂತ್ರದ ಛಂದಸ್ಸಿಗೆ ಗಾಯತ್ರೀ ಎಂದು ಹೆಸರು. ಎಂಟು ಅಕ್ಷರಗಳುಳ್ಳ ಮೂರುಪಾದಗಳುಳ್ಳ ವೇದಮಂತ್ರಕ್ಕೆ ಗಾಯತ್ರೀ ಛಂದಸ್ಸು ಎಂದು ಲಕ್ಷಣವನ್ನು ಹೇಳಿದೆ.

ಈ ಮಂತ್ರದಿಂದ ಧ್ಯಾನಮಾಡಬೇಕಾದ ದೇವತೆಯು ಅಗ್ನಿಯು। ಅಂ ವರ್ಣವು ಬೀಜವು। ಉಂ ವರ್ಣವು ಶಕ್ತಿಯು। ಮಂ ವರ್ಣವು ಕೀಲಕವು। ನನ್ನ ಎಲ್ಲಾ ಇಷ್ಟಾರ್ಥಗಳೂ ಮನೋರಥಗಳೂ ಸಿದ್ಧಿಯಾಗಿ ಕೈಗೂಡಲಿ ಎಂಬ ಫಲಕ್ಕೋಸ್ಕರ ಈ ಗಾಯತ್ರ್ಯುಪನಿಷತ್ ಎಂಬ ಮಂತ್ರಕ್ಕೆ ಜಪಧ್ಯಾನಗಳಲ್ಲಿ ವಿನಿಯೋಗವು ಎಂದು ಹೇಳಿದೆ.

ಓಂ ಆಂ ಅಂಗುಷ್ಠಾಭ್ಯಾಂ ನಮಃ । ಓಂ ಈಂ ತರ್ಜನೀಭ್ಯಾಂ
ನಮಃ ಓಂ ಊಂ ಮಧ್ಯಮಾಭ್ಯಾಂ ನಮಃ । ಓಂ ಐಂ ಅನಾ
ಮಿಕಾಭ್ಯಾಂ ನಮಃ । ಓಂ ಔಂ ಕನಿಷ್ಠಿಕಾಭ್ಯಾಂ ನಮಃ । ಓಂ
ಅಃ ಕರತಲಕರಪೃಷ್ಠಾಭ್ಯಾಂ ನಮಃ ।

ಟೀ॥ ಓಂ ಆಂ ಎಂದು ಜಪಿಸಿ ಎರಡು ಕೈಗಳ ಹೆಬ್ಬೆರಳುಗಳನ್ನೂ ಮೂಲ ದಿಂದ ತುದಿಯವರಿಗೆ ಸ್ಪರ್ಶಮಾಡಬೇಕು. ಹೀಗೆಯೇ ಓಂ ಈಂ ಎಂದು ತೋರು ಬೆರಳನ್ನೂ, ಓಂ ಊಂ ಎಂದು ಮಧ್ಯದ ಬೆರಳನ್ನೂ, ಓಂ ಐಂ ಎಂದು ಪವಿತ್ರದ ಉಂಗುರದ ಬೆರಳನ್ನೂ, ಓಂ ಔಂ ಎಂದು ಕಿರುಬೆರಳನ್ನೂ, ಓಂ ಅಃ ಎಂದು ಎರಡು ಕೈಗಳ ಅಂಗೈಮುಂಗೈಗಳನ್ನೂ ಪರಸ್ಪರವಾಗಿ ಸವರಿ ಸ್ಪರ್ಶಿಸಬೇಕು। ಹೀಗೆ ಮಾಡು ವುದಕ್ಕೆ ಕರನ್ಯಾಸವೆಂದು ಹೆಸರು.

ಓಂ ಆಂ ಹೃದಯಾಯ ನಮಃ । ಓಂ ಈಂ ಶಿರಸೇ ಸ್ವಾಹಾ ।
ಓಂ ಊಂ ಶಿಖಾಯೈ ವಷಟ್ । ಓಂ ಐಂ ಕವಚಾಯ ಹುಂ ।
ಓಂ ಔಂ ನೇತ್ರತ್ರಯಾಯ ವೌಷಟ್ । ಓಂ ಅಃ ಅಸ್ತ್ರಾಯ ಫಟ್ ।
ಓಂ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥

ಇದರಂತೆಯೇ ಓಂ ಆಂ ಎಂದು ಹೃದಯವನ್ನೂ, ಓಂ ಈಂ ಎಂದು ಶಿರಸ್ಸನ್ನೂ, ಓಂ ಊಂ ಎಂದು ಶಿಖೆಯನ್ನೂ, ಓಂ ಐಂ ಎಂದು ಎರಡು ಹೆಗಲು ಗಳನ್ನೂ, ಓಂ ಔಂ ಎಂದು ಮೂರು ಕಣ್ಣುಗಳನ್ನೂ (ಎರಡು ಪಾರ್ಥಿವ ಚಕ್ಷುಸ್ಸುಗಳು,

ಒಂದು ಜ್ಞಾನಚಕ್ಷುಸ್ಸು ಎಂದು ತಾತ್ಪರ್ಯವು.) ಓಂ ಅಃ ಎಂದು ಅಸ್ತ್ರಾಯ ಫಟ್ ಎಂದೂ ಹೃದಯದಿಂದ ಶಿರಸ್ಸಿನವರೆಗೆ ಸ್ಪರ್ಶಮಾಡಬೇಕು. ಇದಕ್ಕೆ ಅಂಗನ್ಯಾಸವೆಂದು ಹೆಸರು. ಇಂದ್ರಿಯಗಳೂ ಮನಸ್ಸೂ ಇತರ ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆಯುವುದಕ್ಕೆ ದಿಗ್ಬಂಧನವೆಂದು ವ್ಯವಹಾರವಿದೆ. ಈ ಸಮಯದಲ್ಲಿ ಭೂರ್ಭುವಸ್ಸುವರೋಮ್ ಎಂದು ವ್ಯಾಹೃತಿಪ್ರಣವಗಳನ್ನು ಧ್ಯಾನಿಸಬೇಕು.

ಧ್ಯಾನಂ ||

ಅಚಲಮಚಲವರ್ಣಂ ವರ್ಣರೂಪಂ ತಮೇಕಂ
ತ್ವಖಿಲಮಖಿಲಗುಹ್ಯಂ ಗುಹ್ಯಮೇಕಂ ತು ಸೂಕ್ಷ್ಮಂ |
ಅಮಲಮಮಲತತ್ತ್ವಂ ಯೇ ಭಜನ್ತೀಹ ಧೀರಾಃ
ಹೃದಯಕಮಲಮಧ್ಯೇ ತೇ ಭವಂತೀಹ ಮುಕ್ತಾಃ ||

ಟೀ || ಅನಂತರದಲ್ಲಿ ದೇವತಾಧ್ಯಾನವು || ಯೇ=ಯಾವ ಉಪಾಸಕರು, ಧೀರಾಃ=ಸಂಸ್ಕೃತವಾದ ಬುದ್ಧಿಯುಳ್ಳವರಾಗಿ ಎಂದರೆ ಗುರೂಪದೇಶ, ಶಾಸ್ತ್ರಾಭ್ಯಾಸ, ಉಪನಯನ ಮುಂತಾದ ಸಂಸ್ಕಾರಗಳನ್ನು ಪಡೆದವರಾಗಿ, ಅಚಲಂ=ವಾಸ್ತವಸ್ವರೂಪದಲ್ಲಿ ಚಲನವಿಕ್ಷೇಪಗಳಿಲ್ಲದಿರುವ, ಅಚಲವರ್ಣಂ=ಬದಲಾಯಿಸದೆ ಇರುವ ಸ್ವರೂಪವುಳ್ಳ ನಿತ್ಯವಾದ ಓಂಕಾರಸ್ವರೂಪವಾದ, ವರ್ಣರೂಪಂ=ಅಕಾರಾದಿಹಕಾರಾಂತವಾದ ವರ್ಣಸ್ವರೂಪವಾಗಿರುವ, ಏಕಂ=ಒಂದೇ ಪರಮಾರ್ಥತತ್ತ್ವರೂಪವಾದ, ತಂ=ಶ್ರುತಿಸ್ಮೃತಿಗಳಲ್ಲೂ ಸಿದ್ಧರಅನುಭವದಲ್ಲೂ ಪ್ರಸಿದ್ಧವಾಗಿರುವ, ಅಖಿಲಂ=ಸರ್ವಸ್ವರೂಪಿಯಾದ, ಅಖಿಲಗುಹ್ಯಂ=ಅಸಂಸ್ಕೃತರಾದ ಅನಧಿಕಾರಿಗಳಿಂದ ತಿಳಿಯದೆ ಇರುವ, ಏಕಂ ಗುಹ್ಯಂ=ಒಂದೇ ಮುಖ್ಯವಾದ ರಹಸ್ಯವಾದ, ಸೂಕ್ಷ್ಮಂ=ಸೂಕ್ಷ್ಮಬುದ್ಧಿಯುಳ್ಳವರಿಂದ ಮಾತ್ರ ತಿಳಿಯಬಹುದಾದ, ಅಮಲಂ=ದೋಷಶೂನ್ಯವಾದ, ಅಮಲತತ್ತ್ವಂ–ರಜಸ್ತಮೋಮಲ ಸಂಬಂಧವು ತಪ್ಪಿ ಶುದ್ಧ ಸಾತ್ವಿಕಚಿದ್ರೂಪವಾದ ಅಗ್ನಿದೇವತಾತತ್ತ್ವವನ್ನೂ, ಚಿತ್‌ಶಕ್ತಿಚೈತನ್ಯರೂಪವನ್ನು, ಹೃದಯಕಮಲಮಧ್ಯೆ=ಕಮಲದಂತಿರುವ ತಮ್ಮ ಹೃದಯದ ಮಧ್ಯದಲ್ಲಿ, ಭಜಂತಿ=ಸೇವಿಸಿ, ಧ್ಯಾನಿಸಿ, ಸಾಕ್ಷಾತ್ಕರಿಸಿಕೊಳ್ಳುತ್ತಾರೋ, ತೇ=ಅಂಥಾ, ಉಪಾಸಕರಾದ ಯೋಗಿಗಳು, ಇಹ=ಇಲ್ಲಿಯೇ, ಈಗಲೇ, ಮುಕ್ತಾಃ=ಸಂಸಾರ ದುಃಖದಿಂದ, ಅಜ್ಞಾನದ ಸಂಕೋಲೆಯಿಂದ ಬಿಡುಗಡೆಯನ್ನು ಪಡೆದವರು, ಭವಂತಿ=ಆಗುತ್ತಾರೆ. ಇಂತಹ ಚೈತನ್ಯಪರತತ್ತ್ವವನ್ನು ಯಾರು ಶ್ರವಣಮನನ ನಿದಿಧ್ಯಾಸನಗಳಿಂದ ಅಪರೋಕ್ಷಾನುಭವಕ್ಕೆ ಬರುವಂತೆ ಮಾಡಿಕೊಳ್ಳುತ್ತಾರೋ ಅಂಥವರು ಅಜ್ಞಾನದ ಆವರಣ ದುಃಖವು ತೊಲಗಿ ನಿತ್ಯಸುಖರೂಪದಲ್ಲಿರುತ್ತಾರೆಂದು ತಾತ್ಪರ್ಯವು.

ಉಪನಿಷತ್ ||

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ । ಓಂ ಶಾಂತಿಶ್ಶಾಂತಿಶ್ಶಾಂತಿಃ ||

ಟೀ || ಮೊದಲಿನಲ್ಲಿ ತಾಪತ್ರಯದ ಅಡ್ಡಿಗಳ ನಿವಾರಣೆಗಾಗಿಯೂ ದೇವತೆಗಳ ಸಹಾಯಕ್ಕಾಗಿಯೂ ಶಾಂತಿಪಾಠವನ್ನು ಮಾಡಬೇಕು. ನಾವು ಮಾಡುತ್ತಿರುವ ಪಾಠಪ್ರವಚನಗಳು ನಮ್ಮಿಬ್ಬರ (ಗುರುಶಿಷ್ಯರಿಬ್ಬರ)ನ್ನೂ ಒಟ್ಟಿಗೆ ಕಾಪಾಡಲಿ. ನಾವಿಬ್ಬರೂ ನಿತ್ಯಸುಖಾನುಭವವನ್ನು ಪಡೆಯುವಂತೆ ಅನುಗ್ರಹಿಸಲಿ. ನಾವಿಬ್ಬರೂ ಸಹಕರಿಸಿ ಜ್ಞಾನಶಕ್ತಿಯನ್ನುಂಟುಮಾಡಿ ಬೆಳೆಯಿಸುತ್ತೇವೆ. ನಮ್ಮ ಈ ಅಧ್ಯಯನ ಕಾರ್ಯವು ವೀರ್ಯವುಳ್ಳದ್ದಾಗಿ ಸಫಲವಾಗಲಿ. ನಮ್ಮಿಬ್ಬರಲ್ಲೂ ಭಿನ್ನಾಭಿಪ್ರಾಯಗಳು ಉಂಟಾಗದೆ ದ್ವೇಷಾಸೂಯೆಗಳು ತಲೆದೋರದೆ ಒಮ್ಮತಿಸಮ್ಮತಿಯಿಂದ ಪ್ರೀತಿಯುಂಟಾಗುವಂತೆ ಮಾಡೋಣ. ಎಂದು ಈ ಶಾಂತಿಮಂತ್ರದ ಭಾವವಾಗಿದೆ. ತಾಪತ್ರಯ ನಿವಾರಣೆಗಾಗಿ ಶಾಂತಿ ಎಂಬ ಪದವನ್ನು ಮೂರಾವೃತ್ತಿ ಹೇಳಬೇಕು.

ನಮಸ್ಕೃತ್ಯ ಭಗವಾನ್ ಯಾಜ್ಞವಲ್ಕ್ಯಃ ಸ್ವಯಂಭುವಂ ಪರಿಪಪ್ರಚ್ಛ-ತ್ವಂ ಬ್ರೂಹಿ ಬ್ರಹ್ಮನ್ ಗಾಯತ್ರ್ಯಾ ಉತ್ಪತ್ತಿಂ ಶ್ರೋತುಮಿಚ್ಛಾಮಿ ||

ಟೀ|| ಭಗವಂತನಾದ ಉತ್ತಮಲಕ್ಷಣಗಳಿಂದ ಕೂಡಿರುವ ಯಾಜ್ಞವಲ್ಕ್ಯನು ತಾನೇ ಉಂಟಾದ ಪರಬ್ರಹ್ಮರೂಪನಾದ ಚತುರ್ಮುಖಬ್ರಹ್ಮನನ್ನು ನಮಸ್ಕರಿಸಿ— ಓ ಬ್ರಹ್ಮನೇ, ಗಾಯತ್ರಿಯ ಉತ್ಪತ್ತಿಯನ್ನು ತಿಳಿಯಲು ಇಚ್ಛಿಸುತ್ತೇನೆ. ನೀನು ನನಗೆ ಅದನ್ನು ಉಪದೇಶಮಾಡು ಎಂದು ಕೇಳಿಕೊಂಡನು.

ಬ್ರಹ್ಮೋವಾಚ || ಶಬ್ದಬ್ರಹ್ಮಾತ್ಮಕಃ ಪ್ರಣವೋ ನಿರಂಜನೋ ನಿತ್ಯೋ ಭವತಿ । ಪ್ರಣವೇನ ವ್ಯಾಹೃತಯಃ ಪ್ರವರ್ತಂತ ಇತಿ ||

ಬ್ರಹ್ಮನು ಹೇಳಿದನು—ನಿತ್ಯವಾದುದರಿಂದ ಶಬ್ದಬ್ರಹ್ಮಸ್ವರೂಪವಾದ ಎಲ್ಲ ವಾಙ್ಮಯವನ್ನೂ ಕಾರಣವಾಗಿ ವ್ಯಾಪಿಸಿರುವ ಪ್ರಣವವು ಓಂಕಾರವು, ದೋಷ

ಸಂಪರ್ಕವಿಲ್ಲದೆ ಶಾಶ್ವತವಾಗಿದೆ. ಆ ಪ್ರಣವದಿಂದ ಭೂರ್ಭುವಃಸುವಃ ಎಂಬ ಮೂರು ವ್ಯಾಹೃತಿಮಂತ್ರಗಳು ಉಂಟಾಗಿವೆ.

**ಯಾಜ್ಞವಲ್ಕ್ಯಃ ಪಪ್ರಚ್ಛ-ಕಥಂ ಪುನಃ ಪ್ರಪಂಚಸ್ಯೋ
ತ್ಪತ್ತಿರಿತಿ । ತಸ್ಮೈ ಸ ಹೋವಾಚ ।**

ಯಾಜ್ಞವಲ್ಕ್ಯನು ಪ್ರಶ್ನೆ ಮಾಡಿದನು—ಈ ಚರಾಚರಾತ್ಮಕವಾದ ಪ್ರಪಂಚದ ಉತ್ಪತ್ತಿಯು ಹೇಗಾಯಿತು ? ಆ ಯಾಜ್ಞವಲ್ಕ್ಯನಿಗೆ ಬ್ರಹ್ಮನು ಹೀಗೆ ಹೇಳಿದನು.

**ತಮಸಸ್ತು ಪರಂಜ್ಯೋತಿಃ ಖಂ ಪುರುಷಃ ಸ್ವಯಂಭೂ
ರ್ವಿಷ್ಣುರಿತಿ ಹಿ ಸಃ ಸ್ವಾಂಗುಳೀರ್ಮಂಥಯತಿ ಮಥ್ಯ
ಮಾನಾತ್ಫೇನೋ ಭವತಿ । ಫೇನಾದ್ಬುದ್ಬುಧಂ ಭವತಿ ।
ಬುದ್ಬುದಾದಂಡಂ ಭವತಿ। ಅಂಡಾದಾತ್ಮಾ ಭವತಿ ।**

ಅಜ್ಞಾನವೆಂಬ ಕತ್ತಲೆಯನ್ನು ದಾಟಿ ಆಚೆಗಿರುವ ಉತ್ತಮವಾದ ಚಿತ್ಪ್ರಕಾಶವು ನಿತ್ಯನಿರ್ಲಿಪ್ತವಾದ ಆಕಾಶರೂಪವಾಗಿರುತ್ತಾ, ಶರೀರಗಳಲ್ಲಿರುವ ಜೀವರ ಸ್ವರೂಪ ನಾದ, ತಾನೇ ಉಂಟಾಗುವ, ಎಂದರೆ ತನಗೆ ಜನಕವಾದ ಇನ್ನೊಂದು ಕಾರಣವಿಲ್ಲದೆ, ಜನ್ಯವಲ್ಲದೆ, ನಿತ್ಯವಾಗಿರುವ ವಿಷ್ಣುಸ್ವರೂಪವಾಗಿದೆಯಷ್ಟೆ. ಆ ವಿಷ್ಣುವು ತನ್ನ ಬೆರಳುಗಳನ್ನು ಕಡೆಯುತ್ತಾನೆ. ಅದರಿಂದ ನೊರೆಯೂ, ಅದರಿಂದ ಐದುದಿನ ಬೆಳೆದ ಗರ್ಭವೂ, ಅದರಿಂದ ಮೊಟ್ಟೆಯೂ, ಅದರಿಂದ ಜೀವಾತ್ಮನೂ ಕ್ರಮವಾಗಿ ಉಂಟಾಗುತ್ತಾರೆ.

**ಆತ್ಮನ ಆಕಾಶೋ ಭವತಿ । ಆಕಾಶಾದ್ವಾಯುರ್ಭವತಿ ।
ವಾಯೋರಗ್ನಿರ್ಭವತಿ । ಅಗ್ನೇರೋಂಕಾರೋ ಭವತಿ ।
ಓಂಕಾರಾದ್ವ್ಯಾಹೃತಯೋ ಭವನ್ತಿ । ವ್ಯಾಹೃತೀಭ್ಯೋ
ಗಾಯತ್ರೀ ಭವತಿ । ಗಾಯತ್ರ್ಯಾಃ ಸಾವಿತ್ರೀ ಭವತಿ ।
ಸಾವಿತ್ರ್ಯಾಃ ಸರಸ್ವತೀ ಭವತಿ । ಸರಸ್ವತ್ಯಾ ವೇದಾಭವನ್ತಿ ।
ವೇದೇಭ್ಯೋ ಬ್ರಹ್ಮಾ ಭವತಿ । ಬ್ರಹ್ಮಣೋ ಲೋಕಾ ಭವನ್ತಿ ।**

ಈ ಜೀವಾತ್ಮನೇ ಮೊದಲನೆಯ ಜೀವನು, ಮಾಯೋಪಾಧಿಕನಾದ ಹಿರಣ್ಯಗರ್ಭನು. ಈ ಆತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿರೂಪತೇಜಸ್ಸೂ, ಆ ಅಗ್ನಿಯಿಂದ ಓಂಕಾರವೂ, ಓಂಕಾರದಿಂದ ವ್ಯಾಹೃತಿಮಂತ್ರ

ಗಳೂ, ಆ ವ್ಯಾಹೃತಿಮಂತ್ರಗಳಿಂದ ಗಾಯತ್ರಿಯೂ, ಅದರಿಂದ ಕ್ರಮವಾಗಿ ಸಾವಿತ್ರೀ ಸರಸ್ವತೀದೇವಿಯರೂ, ಆ ಸರಸ್ವತಿಯಿಂದ ವೇದಗಳೂ, ಅವುಗಳಿಂದ ಚತುರ್ಮುಖ ಬ್ರಹ್ಮನೂ, ಅವನಿಂದ ಈ ಲೋಕಗಳೂ, ಕ್ರಮವಾಗಿ ಉಂಟಾಗುತ್ತವೆ.

ತಸ್ಮಾಲ್ಲೋಕಾಃ ಪ್ರವರ್ತಂತೇ । ಚತ್ವಾರೋ ವೇದಾ
ಸ್ಸಾಂಗಾಸ್ಸೋಪನಿಷದಸ್ಸೇತಿಹಾಸಾಃ ಸರ್ವೇ ಗಾಯತ್ರ್ಯಾಃ
ಪ್ರವರ್ತಂತೇ । ಯಥಾಗ್ನಿರ್ದೇವಾನಾಂ, ಬ್ರಾಹ್ಮಣೋ
ಮನುಷ್ಯಾಣಾಂ, ಮೇರುಶ್ಶಿಖರಿಣಾಂ, ಗಂಗಾ ನದೀನಾಂ,
ವಸಂತ ಋತೂನಾಂ, ಬ್ರಹ್ಮಾ ಪ್ರಜಾಪತೀನಾಮಿವಾಸೌ
ಮುಖ್ಯಾ ಗಾಯತ್ರೀಗಾಯತ್ರ್ಯಾ ಛಂದೋ ಭವತಿ ॥

ಹಾಗೆಯೇ ಲೋಕಗಳಲ್ಲಿ ಜನರೂ ಉಂಟಾಗಿ ವ್ಯವಹರಿಸುತ್ತಾರೆ. ಹಾಗೆಯೇ ಗಾಯತ್ರೀಮಂತ್ರದಿಂದ ನಾಲ್ಕು ವೇದಗಳೂ, ಶಿಕ್ಷಾ ವ್ಯಾಕರಣ ಛಂದಸ್ಸು ನಿರುಕ್ತ ಜ್ಯೋತಿಷ ಕಲ್ಪ ಎಂಬ ಆರು ವೇದಾಂಗಗಳಿಂದ ಕೂಡಿದವುಗಳಾಗಿಯೂ, ಆಯಾ ವೇದಶಾಖೆಗಳ ಉಪನಿಷತ್ತುಗಳಿಂದ ಕೂಡಿದವುಗಳಾಗಿಯೂ, ಇತಿಹಾಸಗಳೊಡನೆ ಎಲ್ಲವೂ ಉಂಟಾಗುತ್ತವೆ. ದೇವತೆಗಳ ಮಧ್ಯದಲ್ಲಿ ಅಗ್ನಿಯಂತೆಯೂ, ಮಾನವರಲ್ಲಿ ಬ್ರಾಹ್ಮಣನಂತೆಯೂ, ಪರ್ವತಗಳಲ್ಲಿ ಮೇರುಪರ್ವತದ ಹಾಗೂ, ನದಿಗಳ ಮಧ್ಯದಲ್ಲಿ ಗಂಗಾನದಿಯಂತೆಯೂ, ಋತುಗಳ ಸಾಲಿನಲ್ಲಿ ವಸಂತಋತುವಿನಂತೆಯೂ, ಸೃಷ್ಟಿ ಕಾರ್ಯವನ್ನು ನೆರವೇರಿಸುವ ಪ್ರಜಾಪತಿಗಳ ಮಧ್ಯದಲ್ಲಿ ಚತುರ್ಮುಖಬ್ರಹ್ಮನಂತೆಯೂ, ಈ ವೇದಗಳಲ್ಲಿ ಗಾಯತ್ರೀಮಂತ್ರವು ಮುಖ್ಯವೂ ಶ್ರೇಷ್ಠವೂ ಆಗಿರುತ್ತದೆ ಎಂದು ವಿವರಿಸಿದನು.

ಕಿಂ ವೈ ಭೂಃ ಕಿಂ ಭುವಃ ಕಿಂ ಸುವಃ ಕಿಂ ಮಹಃ ಕಿಂ ಜನಃ
ಕಿಂ ತಪಃ ಕಿಂ ಸತ್ಯಂ ಕಿಂ ತತ್ ಕಿಂ ಸವಿತುಃ ಕಿಂ ವರೇಣಿಯಂ
ಕಿಂಭರ್ಗಃ ಕಿಂ ದೇವಸ್ಯ ಕಿಂ ಧೀಮಹಿ ಕಿಂ ಧಿಯಃ ಕಿಂ ಯಃ
ಕಿಂ ನಃ ಕಿಂ ಪ್ರಚೋದಯಾದಿತಿ ॥

ಆಮೇಲೆ ಯಾಜ್ಞವಲ್ಕ್ಯನು ಆ ಗಾಯತ್ರೀಮಂತ್ರದಲ್ಲಿನ ಪ್ರತಿಯೊಂದು ಪದವನ್ನೂ ಅನುವಾದಮಾಡಿ ಅದರ ತಾತ್ಪರ್ಯವೂ ಉದ್ದೇಶವೂ ಏನೆಂದು ಪ್ರಶ್ನೆಮಾಡಿದನು.

ಭೂರಿತಿ ಭೂಲೋಕೋ ಭುವ ಇತ್ಯಂತರಿಕ್ಷಲೋಕಸ್ಸುವರಿತಿ ಸ್ವರ್ಗಲೋಕೋ ಮಹ ಇತಿ ಮಹರ್ಲೋಕೋ ಜನ ಇತಿ ಜನೋಲೋಕಸ್ತಪ ಇತಿ ತಪೋಲೋಕಸ್ಸತ್ಯಮಿತಿ ಸತ್ಯ ಲೋಕೋ ಭೂರ್ಭುವಸ್ಸುವರಿತಿ ತ್ರೈಲೋಕ್ಯಂ ತದಿತಿ ।

ಆ ಪ್ರಶ್ನೆಗೆ ಬ್ರಹ್ಮನು ಹೀಗೆ ಉತ್ತರವನ್ನು ಹೇಳಿದನು—ಭೂ ಎಂದರೆ ಈ ಭೂಲೋಕವು, ಭುವಃ ಎಂದರೆ ಅಂತರಿಕ್ಷಲೋಕಗಳು, ಸುವಃ ಎಂದರೆ ಸ್ವರ್ಗ ಲೋಕವು, ಮಹಃ—ಮಹರ್ಲೋಕವು, ಜನಃ—ಜನೋಲೋಕವು, ತಪಃ—ತಪೋ ಲೋಕವು, ಸತ್ಯಂ—ಬ್ರಹ್ಮನ ವಾಸ ಮತ್ತು ಅಧಿಕಾರ ಕೇಂದ್ರಸ್ಥಾನವಾದ ಸತ್ಯ ಲೋಕವು. ಭೂಮಿ ಮೊದಲಾದ ಈ ಏಳೂ ಮೇಲಿನ ಲೋಕಗಳು, ಉಪಾಸಕನು ಧ್ಯಾನದ ದಾರಿಯಲ್ಲಿ ಮುಂದುವರಿಯುತ್ತಿರುವಾಗ ಏರಿ ಪಡೆಯುವ ಅಂತಸ್ತುಗಳು. ಇವನ್ನು ಧ್ಯಾನಮಾಡಬೇಕು. ಭೂರ್ಭುವಸ್ಸುವಃ ಎಂಬುದು ಮೊದಲಿನ ಮೂರು ಲೋಕಗಳ ಒಟ್ಟಿನ ಹೆಸರು.

ತದಿದಂ ತೇಜೋ ಯತ್ತೇಜಸ್ಸೋಽಗ್ನಿರ್ದೇವತಾ ಸವಿತುರಿತಿ ಸಾವಿತ್ರಂ ವರೇಣಿಯಮಿತ್ಯನ್ನಂ ಅನ್ನಮೇವ ಪ್ರಜಾಪತಿಃ ।

ಇನ್ನು ಗಾಯತ್ರೀ ಮಂತ್ರದಲ್ಲಿನ ಪದಗಳು, ತತ್=ಆ ಪ್ರಸಿದ್ಧವಾದ ಮತ್ತು ನಮ್ಮ ಹೃದಯದಲ್ಲೂ ಅಪರೋಕ್ಷಾನುಭವಕ್ಕೆ ಗೋಚರವಾಗುವ, ಸವಿತುಃ=ಪ್ರಪಂಚ ವೆಲ್ಲವನ್ನೂ ಪ್ರಸವಿಸುವ, ಸೃಜಿಸುವ, ಉಂಟುಮಾಡುವ, ವರೇಣಿಯಂ=ಅಪೇಕ್ಷಿಸಿ ಪಡೆಯಬೇಕಾದ, ಅತ್ಯುತ್ತಮವಾದ, ಅನ್ನರೂಪವಾದ, 'ಅದ್ಯತೇಽತ್ತಿ ಚ ಭೂತಾನಿ, ತಸ್ಮಾದನ್ನಂ ತದುಚ್ಯತ ಇತಿ' ಎಂದು ತೈತ್ತಿರಿಯೋಪನಿಷತ್ತಿನಲ್ಲಿ ವರ್ಣಿಸಿರುವ, ಪ್ರಜಾಪತಿಸ್ವರೂಪವಾದ ಸೃಷ್ಟಿಯನ್ನು ನೆರವೇರಿಸುವ ಬ್ರಹ್ಮಸ್ವರೂಪವು.

ಭರ್ಗ ಇತ್ಯಾಪೋ ವೈ ಭರ್ಗಃ ತಾ ವಾ ಏತಾಸ್ಸರ್ವಾ ದೇವತಾಃ ದೇವಸ್ಯೇತೀಂದ್ರೋ ವೈ ದೇವತಾಯದಿದಂ ತದಿಂದ್ರಃ ತಸ್ಮಾತ್ಸರ್ವಕೃತ್ ಪುರುಷೋನಾಮ ವಿಷ್ಣುಃ ।

ಭರ್ಗಃ=ತೇಜಸ್ಸನ್ನು, ಜಲರೂಪವಾದ, ಜಲದಲ್ಲೂ ಕಾರಣವಾಗಿ ಅಡಗಿರುವ ಜಲಾಧಿಷ್ಠಾನದೇವತಾಸ್ವರೂಪವೂ ಆದ, ಈ ಎಲ್ಲಾ ದೇವತಾಸ್ವರೂಪವಾದ ತೇಜ ಸ್ತತ್ತ್ವವು. ದೇವಸ್ಯ=ಪ್ರಕಾಶರೂಪನಾಗಿ ಹೊಳೆಯುತ್ತಿರುವ ಸೂರ್ಯದೇವನ, ಈ ದೇವತೆಯೇ ಪ್ರಭುವಾದ ಇಂದ್ರನು. ಆದುದರಿಂದ ಎಲ್ಲವನ್ನೂ ಉಂಟುಮಾಡುವ, ಎಲ್ಲಾ ಶರೀರಗಳಲ್ಲೂ ಧ್ಯಾನಗೋಚರನಾಗುವ ಸರ್ವವ್ಯಾಪಿಯಾದ ವಿಷ್ಣುರೂಪನು.

ಧೀಮಹೀತ್ಯಂತರಾತ್ಮಾ ಯದಂತರಾತ್ಮಾ ತತ್ಸರ್ವಂ ಪ್ರಣವೋ ವಿಷ್ಣುರ್ಧಿಯ ಇತ್ಯಂತರಾತ್ಮಾಽಧ್ಯಾತ್ಮಂ ತತ್ಪರಮಂ ಪದಂ ಯ ಇತಿ ಪೃಥಿವೀ ವೈ ನ ಇತಿ ಸ್ವಸ್ಮಿನ್ನೈಕ್ಯಂ ಪ್ರಚೋದಯಾ ದಿತಿ ಕಾಮ ಇಮಾನ್ಲೋಕಾನ್ಪ್ರತ್ಯಾವಯತಿ ಯೋಽನೃಶಂಸ್ಯೋ ಹ್ಯನೃಶಂಸ್ಯಸ್ತೋಽಷ್ಯಸ್ತತ್ಪರಮಂ ಪದಂ ಇತ್ಯೇಷಾ ಗಾಯತ್ರೀ ॥

ಇಂತಹವನನ್ನು ಧೀಮಹಿ=ಧ್ಯಾನಮಾಡುತ್ತೇವೆ. ಇವನು ನಮ್ಮ ಹೃದಯ ದಲ್ಲಿ ಸಾಕ್ಷಾತ್ಕಾರಕ್ಕೆ ಗೋಚರನಾಗುವ ಅಂತರಾತ್ಮಸ್ವರೂಪನು. ಇದೆಲ್ಲವೂ ಆ ಪ್ರಣವಸ್ವರೂಪವಾದುದು. ಹೀಗೆಂದು ವಾಚ್ಯ ವಾಚಕಗಳಿಗೆ, ಪ್ರಣವಪರತತ್ತ್ವಗಳಿಗೆ, ಸರ್ವವಾಙ್ಮಯವ್ಯಾಪಿತ್ವ, ಸರ್ವಪ್ರಪಂಚವ್ಯಾಪಿತ್ವರೂಪಗಳಲ್ಲಿ ಅಭೇದದಿಂದ ವಿಷ್ಣು ವೆಂದು ಧ್ಯಾನಮಾಡಬೇಕು. ಧಿಯಃ=ನಮ್ಮ ಬುದ್ಧಿಗಳನ್ನು, ವೃತ್ತಿರೂಪಗಳನ್ನು ನಿಶ್ಚಯಾತ್ಮಕವಾದ ಬುದ್ಧಿಯು ನಮ್ಮೆಲ್ಲರ ಹೃದಯಗಳಲ್ಲೂ ಗೋಚರಿಸಿ ಬೆಳಗು ತ್ತಿರುವ, ಅವಸ್ಥಾತ್ರಯಾದಿಗಳಿಗೆ ಸಾಕ್ಷಿರೂಪವಾಗಿಯೂ ನಿತ್ಯವಾಗಿಯೂ ಇರುವ, ಚೈತನ್ಯಜ್ಯೋತಿಯು. ಇದೇ ಉತ್ತಮ ತತ್ತ್ವವು ಎಂದು ಅಭೇದಜ್ಞಾನದಿಂದ ಧ್ಯಾನಿಸಬೇಕು. ಯಃ=ಯಾವ ಚಿಜ್ಜ್ಯೋತೀರೂಪನಾದ ಅಗ್ನಿದೇವನು, (ಈ ಚಿಚ್ಛಕ್ತಿಯೇ ಸ್ಥೂಲರೂಪದಲ್ಲಿ ಈ ಪ್ರಪಂಚರೂಪವಾಗಿದೆ.) ನಃ=ನಮ್ಮ ಪ್ರತ್ಯಗಾತ್ಮ ಪರಾತ್ಮಗಳಿಗೆ ಅಭೇದವನ್ನು ಧ್ಯಾನಿಸಬೇಕು. ಪ್ರಚೋದಯಾತ್=ಪ್ರೇರಿಸುತ್ತಾನೋ, ಧರ್ಮವಿಷಯಗಳಲ್ಲೇ ಪ್ರವರ್ತಿಸುವಂತೆ ಮಾಡುತ್ತಾನೋ ಅಂತಹ ಚೈತನ್ಯಶಕ್ತಿ ಯನ್ನು ಧ್ಯಾನಮಾಡುತ್ತೇವೆ.

ಇಲ್ಲಿ ಧರ್ಮ ಎಂದರೆ ಉಪಾಸಕರು ತಮ್ಮ ತಮ್ಮ ಸಂಸ್ಕೃತಿಯ ಮಟ್ಟಕ್ಕೆ ಅಧಿಕಾರಕ್ಕೆ ತಕ್ಕಂತೆ ಎಂದರೆ ಉಪಾಸನೆಯ ಮೊದಲನೆಯ ಅಂತಸ್ತಿನಲ್ಲಿ ಸಗುಣ ಸಾಕಾರಮೂರ್ತಿಯನ್ನೂ, ಮುಂದುಮುಂದಿನ ತರಗತಿಗಳಲ್ಲಿ ಕ್ರಮವಾಗಿ, ನಿರಾಕಾರ ಸಗುಣಮೂರ್ತಿ, ನಿರಾಕಾರನಿರ್ಗುಣಪರತತ್ತ್ವಗಳನ್ನು ಧ್ಯಾನಿಸುತ್ತಾ ಮುಂದುವರಿ ಯುತ್ತಾರೆ. ಈ ಧ್ಯಾನವನ್ನೇ ಧರ್ಮವೆಂದು ಅವರವರಿಗೆ ವಿವರಿಸಿ ಹೇಳಿ ಸೂಚಿಸಿದೆ. ಆ ಪರಮಪುರುಷನು ಕಾಮರೂಪನು 'ಕಾಮಮಯ ಏವಾಯಂ ಪುರುಷಃ' ಎಂದು ಹೇಳಿದೆ. 'ಸೋಽಕಾಮಯತ ಬಹು ಸ್ಯಾಂ ಪ್ರಜಾಯೇಯ' ಎಂದು ಹೇಳಿರುವಂತೆ ಆ ಪರಬ್ರಹ್ಮವು ಈ ಪ್ರಪಂಚವೆಲ್ಲವನ್ನೂ ಹೊರಹೊಮ್ಮಿಸಿ ತೋರುತ್ತಿರುವಂತೆ ಮಾಡಿರುತ್ತದೆ. ಯಾವ ತತ್ತ್ವವು ಮಾನವರಿಂದಲೂ ಮಾನವೇತರ ಪದಾರ್ಥ ಗಳಿಂದಲೂ ಸ್ತುತಿಸಲು ಅರ್ಹವಾದುದೋ, ಸಂತೋಷಪಡಿಸಲು ಯೋಗ್ಯವಾದುದೋ ಅದೇ ಎಲ್ಲಕ್ಕಿಂತ ಮೇಲಾದ ಶ್ರೇಷ್ಠವಾದ ಸ್ಥಿತಿಯೂ ತತ್ತ್ವವೂ ಆಗಿದೆ. ಇದೇ ಗಾಯತ್ರೀಮಂತ್ರದ ಅರ್ಥ ಮತ್ತು ತಾತ್ಪರ್ಯವು.

ಕಿಂ ಗೋತ್ರಂ ಕತ್ಯಕ್ಷರಾಣಿ ಕತಿಪಾದಾಃ ಕತಿಕುಕ್ಷಿಃ ಕತಿ ಶೀರ್ಷಂ ||

ಇದಕ್ಕೆ ಗೋತ್ರವಾವುದು ? ಎಷ್ಟು ಅಕ್ಷರಗಳು ? ಎಷ್ಟು ಪಾದಗಳು ? ಎಷ್ಟು ಉದರಗಳು ? ಎಷ್ಟು ಶಿರಸ್ಸುಗಳು ? ಎಂದು ವಿಶೇಷಸ್ವರೂಪದ ವಿವರಗಳನ್ನು ಉಪಾಸನೆಯ ಸೌಕರ್ಯಕ್ಕಾಗಿ ಕೇಳಿ ತಿಳಿಸುತ್ತಾರೆ.

ಬ್ರಹ್ಮಕವಚಾ ಸಾಂಖ್ಯಾಯನಸಗೋತ್ರಿಕಾ ತದಿತ್ಯಾದಿ ಚತುರ್ವಿಂಶತ್ಯಕ್ಷರಾಣಿ ಋಗ್ವೇದೋಽಸ್ಯಾಃ ಪ್ರಥಮಃ ಪಾದೋ ಭವತಿ, ಯಜುರ್ವೇದೋ ದ್ವಿತೀಯಃ, ಸಾಮವೇದಸ್ತೃತೀಯಃ

ಇದಕ್ಕೆ ಬ್ರಹ್ಮವೇ ಕವಚವು, ಕವಚದಂತೆ ರಕ್ಷಕತತ್ತ್ವವು. ಬುದ್ಧಿಯಲ್ಲಿ ನೆಲಸಿರುವ ಸಾಂಖ್ಯಾಯನಸ್ವರೂಪವೇ ಕಿರೀಟದಂತೆ ಮೇಲಾದ ಮೂಲರೂಪವು. ಇದರಲ್ಲಿ ತತ್ ಎಂದು ಮೊದಲಾಗಿ ಇಪ್ಪತ್ತುನಾಲ್ಕು ವರ್ಣಗಳಿವೆ. ಈ ಗಾಯತ್ರೀ ಮಂತ್ರಕ್ಕೆ ಋಗ್ವೇದವೇ ಮೊದಲನೆಯ ಪಾದವು, ಯಜುರ್ವೇದವೇ ಎರಡನೆಯ ಪಾದವು, ಸಾಮವೇದವೇ ಮೂರನೆಯ ಪಾದವು, ವೇದತ್ರಯದ ಸಾರಭೂತವಾದ ಅರ್ಥವನ್ನೇ ಗಾಯತ್ರಿಯು ತಿಳಿಸುತ್ತದೆ ಎಂಬ ಭಾವವು. ಮೂರು ವೇದಗಳಿಗೆ ಮಾತ್ರವೇ ಉಪನಯನಸಂಸ್ಕಾರವಾಗಿರುವುದರಿಂದ ಮೂರು ಪಾದಗಳುಳ್ಳ ಗಾಯತ್ರೀ ಧ್ಯಾನವು ವಿಹಿತವಾಗಿದೆ. ನಾಲ್ಕನೆಯ ಪಾದವು ಅಥರ್ವಣಕ್ಕೆ ಸೇರಿದುದು ಎಂದು ತಿಳಿಯಬೇಕು.

ಪೂರ್ವಾ ದಿಕ್ಪ್ರಥಮಾ ಕುಕ್ಷಿರ್ಭವತಿ, ದಕ್ಷಿಣಾ ದಿಕ್ ದ್ವಿತೀಯಾ, ಪಶ್ಚಿಮಾ ದಿಕ್ ತೃತೀಯಾ, ಉತ್ತರಾ ಚತುರ್ಥೀ, ಊರ್ಧ್ವಾ ಪಂಚಮೀ, ಅಧರಾ ಷಷ್ಠೀ ಕುಕ್ಷಿಃ । ವ್ಯಾಕರಣಮಸ್ಯಾಃ ಪ್ರಥಮಂ ಶೀರ್ಷಂ ಭವತಿ, ಶಿಕ್ಷಾ ದ್ವಿತೀಯಂ, ಕಲ್ಪಸ್ತೃತೀಯಂ, ನಿರುಕ್ತಂ ಚತುರ್ಥಂ, ಜ್ಯೋತಿಷಮಯನಮಿತಿ ಪಂಚಮಂ ||

ಹೀಗೆ ಗಾಯತ್ರೀಪಾದಗಳ ಸ್ವರೂಪಗಳನ್ನು ತಿಳಿಸಿ ಕುಕ್ಷಿಗಳ ಸ್ವರೂಪವನ್ನು ಉಪದೇಶಿಸುತ್ತಾರೆ. ಪೂರ್ವದಿಕ್ಕೇ ಇದರ ಮೊದಲನೆಯ ಕುಕ್ಷಿಯು, ಉದರವು. ಎಂದರೆ, ಸ್ಥೂಲವಿಶೇಷರೂಪವು. ದಕ್ಷಿಣದಿಕ್ಕು ಎರಡನೆಯ ಕುಕ್ಷಿಯು, ಪಶ್ಚಿಮದಿಕ್ಕು

ಮೂರನೆಯದು, ಉತ್ತರದಿಕ್ಕು ನಾಲ್ಕನೆಯದು, ಮೇಲಿನದಿಕ್ಕು ಐದನೆಯದು, ಮತ್ತು ಕೆಳಗಿನದಿಕ್ಕು ಆರನೆಯ ಕುಕ್ಷಿಯಾಗಿದೆ. ಎಂದರೆ ಸರ್ವತ್ರ ಪೂರ್ಣವಾಗಿರುವ ಚಿತ್ ಜ್ಯೋತಿಶ್ಶಕ್ತಿಯೇ ಇದರ ಸ್ವರೂಪವೆಂದು ತಾತ್ಪರ್ಯವು. ಇದರಂತೆಯೇ ಆರು ವೇದಾಂಗಗಳನ್ನೂ ಇದರ ಅವಯವಗಳಾಗಿವೆ ಎಂದು ಉಪಾಸನೆಗಾಗಿ ಉಪದೇಶಿಸುತ್ತಾರೆ. ವ್ಯಾಕರಣವು ಈ ಗಾಯತ್ರೀರೂಪಕ್ಕೆ ಮೊದಲನೆಯ ಶಿರಸ್ಸು, ಶಿಕ್ಷೆಯು ಎರಡನೆಯ ಶಿರಸ್ಸು, ಕಲ್ಪವು ಮೂರನೆಯದು, ನಿರುಕ್ತವು ನಾಲ್ಕನೆಯದು, ಮತ್ತು ಜ್ಯೋತಿಷವೇ ಐದನೆಯ ಶೀರ್ಷವು.

ಕಿಮು ಲಕ್ಷಣಂ ? ಕಿಮು ಚೇಷ್ಟಿತಂ ? ಕಿಮುದಾಹೃತಂ ?
ಮೀಮಾಂಸಾ ಸರ್ವಂ ಲಕ್ಷಣಂ, ಅಥರ್ವಣವೇದೋ
ವಿಚೇಷ್ಟಿತಮಕ್ಷರಾತ್ಮಕಂ ಪರಂ ಬ್ರಹ್ಮೇತ್ಯುದಾಹೃತಂ,
ಲಕ್ಷಣಂ ಚ ಛಂದೋವಿತಿರಿತ್ಯುದಾಹೃತಂ । ಕೋ ವರ್ಣಃ ?
ಕಸ್ಸ್ವರಃ ? ಶ್ವೇತೋ ವರ್ಣಃ, ಷಟ್ ಸ್ವರಾಣೀ ಮಾನ್ಯಕ್ಷ
ರಾಣಿ ದೈವತಾನಿ ಭವಂತಿ ॥

ಛಂದಸ್ಸು ಗಾಯತ್ರೀಲಕ್ಷಣವುಳ್ಳದೆಂದು ಮೇಲೆ ಹೇಳಿದ್ದಾಗಿದೆ. ಪೂರ್ವೋತ್ತರಮೀಮಾಂಸೆ ಎಲ್ಲವೂ ಈ ಗಾಯತ್ರೀತತ್ತ್ವದ ಲಕ್ಷಣವಾಗಿದೆ. ಅಥರ್ವಣವೇದವೆಲ್ಲವೂ ಇದರ ಕ್ರಿಯಾತ್ಮಕವಾದ ವ್ಯಾಪಾರ ವ್ಯವಹಾರರೂಪವಾಗಿದೆ. ನಶ್ವರವಲ್ಲದ ನಿರ್ವಿಕಾರ ನಿತ್ಯವಾದ ಪರಬ್ರಹ್ಮವೇ ಇದರ ಉದಾಹರಣವೂ ಆಗಿದೆ. ಈ ಲಕ್ಷಣವನ್ನೇ ಛಂದಸ್ಸೆಂದೂ ತಿಳಿಯಬೇಕು. ಇದರಂತೆಯೇ ಈ ಗಾಯತ್ರಿಯ ಉಪಾಸ್ಯರೂಪಕ್ಕೆ ಶುಭ್ರವಾದ ಶುದ್ಧಸಾತ್ತ್ವಿಕವರ್ಣವಿದೆ. ಆರು ಸ್ವರಗಳಿವೆ. ಈ ಅಕ್ಷರಗಳೆಲ್ಲವೂ ದೇವತಾಸ್ವರೂಪಗಳಾಗಿವೆ ಎಂದು ಧ್ಯಾನಿಸಬೇಕು.

ಪೂರ್ವಾ ಸನ್ಧ್ಯಾ ಭವತಿ ಗಾಯತ್ರೀ, ಮಧ್ಯಮಾ ಭವತಿ
ಸಾವಿತ್ರೀ, ಪಶ್ಚಿಮಾ ಸಂಧ್ಯಾ ಸರಸ್ವತೀ ॥

ಹಾಗೆಯೇ ಪ್ರತಿದಿನದಲ್ಲೂ ಮೊದಲು ಆಚರಿಸುವ ಪ್ರಾತಃಕಾಲದ ಸಂಧ್ಯಾವಂದನೆಯಲ್ಲಿ ಉಪಾಸ್ಯದೇವತೆಯು ಗಾಯತ್ರೀರೂಪವಾದುದು. ಮಧ್ಯಾಹ್ನದಲ್ಲಿ ನೆರವೇರಿಸುವ ಮಾಧ್ಯಾಹ್ನಿಕ ಸಂಧ್ಯಾವಂದನೆಯಲ್ಲಿನ ಉಪಾಸ್ಯದೇವತೆಯು ಸಾವಿತ್ರೀರೂಪವಾದುದು, ಮತ್ತು ಸಾಯಂಕಾಲದಲ್ಲಿ ಮಾಡುವ ಸಂಧ್ಯಾವಂದನೆಯಲ್ಲಿ ಉಪಾಸ್ಯವಾದ ದೇವತೆಯು ಸರಸ್ವತೀರೂಪವುಳ್ಳದು ಎಂದು ಭಾವಿಸಬೇಕು.

ಪ್ರಾತಃಸ್ಸಂಧ್ಯಾ ರಕ್ತಪದ್ಮಾಸನಸ್ಥಾ ರಕ್ತಾಂಬರಧರಾ
ರಕ್ತವರ್ಣಾ ರಕ್ತಮಾಲ್ಯಾ ರಕ್ತಗಂಧಾನುಲೇಪನಾ
ಚತುರ್ಮುಖೀ ಅಷ್ಟಭುಜಾ ಅಷ್ಟನೇತ್ರಾ ದಂಡಾಕ್ಷಮಾಲಾ
ಕಮಂಡಲುಸ್ರುಕ್ಸ್ರುವಧಾರಿಣೀ ಸರ್ವಾಭರಣಭೂಷಿತಾ
ಗಾಯತ್ರೀ

ಇವುಗಳಲ್ಲಿ ಪ್ರಾತಸ್ಸಂಧ್ಯಾದೇವತೆಯು ಕೆಂಪಾದ ಕಮಲದ ಆಸನದಲ್ಲಿ ಮಂಡಿಸಿರುತ್ತಾಳೆ. ಕೆಂಪುಬಣ್ಣದ ವಸ್ತ್ರವನ್ನು ಧರಿಸಿದವಳೂ, ಕೆಂಪಾದ ಚಂದನ ಗಂಧವನ್ನು ತೊಡೆದುಕೊಂಡಿರುವವಳೂ, ನಾಲ್ಕು ಮುಖಗಳುಳ್ಳವಳೂ, ಎಂಟು ಭುಜಗಳು ಮತ್ತು ಕಣ್ಣುಗಳುಳ್ಳವಳೂ, ದಂಡಾಯುಧದ ಆಕಾರದಲ್ಲಿ ರಚಿತವಾಗಿರುವ ಜಪಸರದಿಂದ ಕೂಡಿರುವವಳೂ, ಕಮಂಡಲು ಎಂಬ ಜಲಪಾತ್ರೆಯನ್ನೂ ಸ್ರುಕ್ಕುಸ್ರುವ ಎಂಬ ಹೋಮಪಾತ್ರೆಗಳನ್ನೂ ಧರಿಸಿರುಪವಳೂ, ಎಲ್ಲಾ ಬಗೆಯ ಒಡವೆಗಳಿಂದ ಅಲಂಕರಿಸಿಕೊಂಡಿರುವವಳೂ, ಆಗಿರುವ ಗಾಯತ್ರೀ ದೇವಿಯು.

ಕೌಮಾರೀ ಬ್ರಾಹ್ಮೀ ಹಂಸವಾಹನಾ
ಋಗ್ವೇದಸಹಿತಾ ಬ್ರಹ್ಮದೈವತ್ಯಾ ತ್ರಿಪದಾ ಗಾಯತ್ರ್ಯಗ್ನಿ
ರ್ಮುಖಂ ರುದ್ರಶ್ಶಿಖಾ ವಿಷ್ಣುರ್ಹೃದಯಂ ಬ್ರಹ್ಮಕವಚಾ
ಸಾಂಖ್ಯಾಯನಸಗೋತ್ರಾ ರಕ್ತವರ್ಣಾ ಕರ್ಮಜ್ಞಾನೇ
ವಿನಿಯೋಗ ಇತ್ಯೇಷಾ ಗಾಯತ್ರೀ ||

ಈ ದೇವಿಯು ವಯಸ್ಸಿನಲ್ಲಿ ಕೌಮಾರೀರೂಪಳೂ, ಬ್ರಹ್ಮಶಕ್ತಿಸ್ವರೂಪಳೂ, ಹಂಸವೇ ವಾಹನವಾಗಿ ಉಳ್ಳವಳೂ, ಋಗ್ವೇದದಿಂದ ಕೂಡಿರುವವಳೂ, ಬ್ರಹ್ಮನೇ ದೇವತೆಯಾಗಿ ಉಳ್ಳವಳೂ, ಮೂರು ಪಾದಗಳುಳ್ಳವಳೂ, ಆಗಿರುವ ಗಾಯತ್ರೀದೇವತೆಯು. ಈ ದೇವಿಗೆ ಅಗ್ನಿಯೇ ಮುಖವು. ರುದ್ರದೇವನೇ ಶಿಖೆಯು. ವಿಷ್ಣುವೇ ಹೃದಯವು. ಬ್ರಹ್ಮನೇ ಕವಚವು. ಇವಳು ಸಾಂಖ್ಯಾಯನಸ ಗೋತ್ರವುಳ್ಳವಳೂ ಕೆಂಪುಬಣ್ಣ ಉಳ್ಳವಳೂ ಆಗಿದ್ದಾಳೆ. ಇಂತಹ ದೇವಿಯನ್ನು ಈ ಸಂಧ್ಯಾಕರ್ಮದ ಸ್ವರೂಪದ ತಿಳಿವಳಿಕೆಯಲ್ಲಿ ಧ್ಯಾನಕ್ಕೋಸ್ಕರ ವಿನಿಯೋಗಿಸಬೇಕೆಂದು ಹೇಳಿದೆ. ಹೀಗೆ ಧ್ಯಾನಿಸಬೇಕು. ಇದೇ ಗಾಯತ್ರೀದೇವತೆಯ ಸಗುಣಸಾಕಾರ ರೂಪವು.

ಮಾಧ್ಯಾಹ್ನಿಕಸಂಧ್ಯಾ ಶ್ವೇತಪದ್ಮಾಸನಸ್ಥಾ ಶ್ವೇತಾಂಬರ
ಧರಾ ಶ್ವೇತವರ್ಣಾ ಶ್ವೇತಮಾಲ್ಯಾ ಶ್ವೇತಗಂಧಾನುಲೇಪನಾ
ಪಂಚಮುಖೀ ದಶಭುಜಾ ತ್ರಿನೇತ್ರಾ ತ್ರಿಶೂಲಾಕ್ಷಮಾಲಾ
ಕಮಂಡಲುಧಾರಿಣೀ ಸರ್ವಾಭರಣಭೂಷಿತಾ ಸಾವಿತ್ರೀ

ಮಾಧ್ಯಾಹ್ನಿಕ ಸಂಧ್ಯಾವಂದನೆಯಲ್ಲಿನ ಉಪಾಸ್ಯದೇವತೆಯು ಬಿಳಿಯದಾದ ಕಮಲದ ಆಸನವಲ್ಲಿ ಮಂಡಿಸಿರುವವಳೂ, ಶುಭ್ರವೂ ಶುದ್ಧವೂ ಆದ ವಸ್ತ್ರಗಳನ್ನು ಧರಿಸಿರುವವಳೂ, ಶುಕ್ಲವರ್ಣದ ದೇಹವುಳ್ಳವಳೂ, ಬಿಳಿಯ ಹೂವುಗಳಿಂದ ರಚಿತವಾದ ಮಾಲೆಯನ್ನು ಧರಿಸಿರುವವಳೂ, ಬಿಳಿಯ ಶ್ರೀ ಗಂಧವನ್ನು ಮೈಗೆ ಲೇಪಿಸಿಕೊಂಡಿರುವವಳೂ, ಐದು ಮುಖಗಳುಳ್ಳವಳೂ, ಹತ್ತು ತೋಳುಳ್ಳವಳೂ, ಮೂರು ಕಣ್ಣುಗಳುಳ್ಳವಳೂ, ತ್ರಿಶೂಲಾಯುಧದ ಆಕಾರದಲ್ಲಿ ರಚಿಸಿರುವ ಜಪಮಾಲೆಯುಳ್ಳವಳೂ, ಜಲಪಾತ್ರೆಯನ್ನು ಧರಿಸಿರುವವಳೂ, ಎಲ್ಲಾ ಬಗೆಯ ಅಲಂಕಾರಗಳಿಂದ ಶೃಂಗರಿಸಿಕೊಂಡಿರುವವಳೂ, ಆಗಿರುವ ಸಾವಿತ್ರೀ ದೇವತೆಯು.

ಯುವತೀ ಯಜುರ್ವೇದಸಹಿತಾ ಮಾಹೇಶ್ವರೀ ವೃಷಭ
ವಾಹಿನೀ ಯಜುರ್ವೇದಸಹಿತಾ ರುದ್ರದೈವತ್ಯಾ ತ್ರಿಪದಾ
ಷಟ್ಕುಕ್ಷಿಃ ಪಂಚಶೀರ್ಷಾಗ್ನಿರ್ಮುಖಂ ರುದ್ರಶ್ಶಿಖಾ ವಿಷ್ಣು
ರ್ಹೃದಯಂ ಬ್ರಹ್ಮಕವಚಾ ಸಾಂಖ್ಯಾಯನಸಗೋತ್ರಿಕಾ ಶ್ವೇತ
ವರ್ಣಾ ಬ್ರಹ್ಮಜ್ಞಾನೇ ವಿನಿಯೋಗಃ । ಇತ್ಯೇಷಾ ಸಾವಿತ್ರೀ ॥

ಇಂತಹ ದೇವಿಯು ವಯಸ್ಸಿನಲ್ಲಿ ಯುವತಿಯೂ, ಯಜುರ್ವೇದದೊಡನೆ ಪ್ರತಿಪಾದ್ಯ ಪ್ರತಿಪಾದಕಭಾವವೆಂಬ ಸಂಬಂಧದಿಂದ ಕೂಡಿರುವವಳೂ, ಮಹೇಶ್ವರನ ಶಕ್ತಿಸ್ವರೂಪಳೂ, ವೃಷಭವನ್ನೇ ವಾಹನವಾಗಿ ಪಡೆದಿರುವವಳೂ, ರುದ್ರದೇವನೇ ಮೂಲದೇವತೆಯಾಗಿ ಉಳ್ಳವಳೂ, ಮೂರುಪಾದಗಳುಳ್ಳ ಗಾಯತ್ರೀಸ್ವರೂಪಳೂ, ಮೇಲೆ ಹೇಳಿದಂತೆ ಆರು ಕುಕ್ಷಿಗಳುಳ್ಳವಳೂ, ಐದು ಶಿರಸ್ಸುಗಳಿಂದ ಕೂಡಿರುವವಳೂ, ಆಗಿದಾಳೆ. ಈ ದೇವಿಗೆ ಅಗ್ನಿದೇವನೇ ಮುಖವೂ, ರುದ್ರದೇವನೇ ಶಿಖೆಯೂ, ವಿಷ್ಣುದೇವನೇ ಹೃದಯವೂ, ಬ್ರಹ್ಮದೇವನೇ ಕವಚವೂ ಆಗಿರುವರಲ್ಲದೆ, ಇವಳು ಸಾಂಖ್ಯಾಯನಸಗೋತ್ರವುಳ್ಳವಳೂ, ಬಿಳಿಯ ನಿರ್ಮಲವರ್ಣದ ದೇಹವುಳ್ಳವಳೂ, ಆಗಿದಾಳೆ. ಇಂತಹ ದೇವೀರೂಪವನ್ನು ಬ್ರಹ್ಮತತ್ತ್ವಜ್ಞಾನದಲ್ಲಿ ವಿನಿಯೋಗಿಸಬೇಕೆಂದು ಹೇಳಿದೆ. ಈ ಸ್ವರೂಪವುಳ್ಳದೇವಿಯೇ ಸಾವಿತ್ರೀದೇವತೆಯು ಎಂದು ಧ್ಯಾನಿಸಬೇಕು.

ಸಾಯಂಸಂಧ್ಯಾ ಕೃಷ್ಣಪದ್ಮಾಸನಸ್ಥಾ ಕೃಷ್ಣಾಂಬರಧರಾ
ಕೃಷ್ಣವರ್ಣಾ ಕೃಷ್ಣಮಾಲ್ಯಾ ಕೃಷ್ಣಗಂಧಾನುಲೇಪನಾ
ಏಕಮುಖೀ ಚತುರ್ಭುಜಾ ದ್ವಿನೇತ್ರಾ ಚಕ್ರಾಕ್ಷಮಾಲಾ
ಕಮಂಡಲುಶಂಖಧಾರಿಣೀ ಸರ್ವಾಭರಣಭೂಷಿತಾ ಸರಸ್ವತೀ

ಸಾಯಂಕಾಲದಲ್ಲಿ ನೆರವೇರಿಸುವ ಸಂಧ್ಯಾವಂದನೆಯಲ್ಲಿ ಉಪಾಸ್ಯವಾಗಿರುವ ದೇವತೆಯು ಕನ್ನೈೖದಿಲೆ ಎಂಬ ಕಪ್ಪುಬಣ್ಣದ ಕಮಲದ ಆಸನದಲ್ಲಿ ಮಂಡಿಸಿರುವವಳೂ, ಕಪ್ಪುಬಣ್ಣದ ಅಗರುಗಂಧವನ್ನು ತೊಡೆದುಕೊಂಡಿರುವವಳೂ, ಕಪ್ಪುಬಣ್ಣದ ವಸ್ತ್ರಗಳನ್ನು ಧರಿಸಿರುವವಳೂ, ಕಪ್ಪುಬಣ್ಣದ ದೇಹವುಳ್ಳವಳೂ, ಕರಿಯ ಹೂವುಗಳಿಂದ ಕಟ್ಟಿದ ಮಾಲೆಯನ್ನು ಧರಿಸಿರುವವಳೂ, ಒಂದೇ ಮುಖವುಳ್ಳವಳೂ, ನಾಲ್ಕು ತೋಳುಗಳುಳ್ಳವಳೂ, ಎರಡು ಕಣ್ಣುಳ್ಳವಳೂ, ಚಕ್ರಾಯುಧದ ಆಕಾರದಲ್ಲಿ ರಚಿಸಿರುವ ಜಪಮಾಲೆಯುಳ್ಳವಳೂ, ಜಲಪಾತ್ರೆ, ಶಂಖಗಳನ್ನು ಧರಿಸಿರುವವಳೂ, ಎಲ್ಲಾ ಬಗೆಯ ಒಡವೆಗಳಿಂದ ಶೃಂಗರಿಸಿಕೊಂಡಿರುವವಳೂ ಆಗಿರುವ ಸರಸ್ವತೀ ದೇವಿಯು.

ವೃದ್ಧಾ ವೈಷ್ಣವೀ ಗರುಡವಾಹನಾ
ಸಾಮವೇದಸಹಿತಾ ವಿಷ್ಣುದೈವತ್ಯಾ ತ್ರಿಪದಾ ಸರಸ್ವತೀ
ಷಟ್ಕುಕ್ಷಿಃ ಪಂಚಶೀರ್ಷಾ ಅಗ್ನಿರ್ಮುಖಂ ಬ್ರಹ್ಮಶಿರೋ
ರುದ್ರಶ್ಶಿಖಾ ವಿಷ್ಣುರ್ಹೃದಯಂ ಬ್ರಹ್ಮಕವಚಾ
ಸಾಂಖ್ಯಾಯನಸಗೋತ್ರಾ ಕೃಷ್ಣವರ್ಣಾ ಮೋಕ್ಷಜ್ಞಾನೇ
ವಿನಿಯೋಗ ಇತ್ಯೇಷಾ ಸರಸ್ವತೀ ರಕ್ತಾ ಗಾಯತ್ರೀ
ಶ್ವೇತಾ ಸಾವಿತ್ರೀ ಕೃಷ್ಣವರ್ಣಾ ಸರಸ್ವತೀ

ಈ ದೇವತೆಯು ವಯಸ್ಸಿನಲ್ಲಿ ವೃದ್ಧಳೂ, ವಿಷ್ಣುಶಕ್ತಿ ಸ್ವರೂಪಳೂ, ಗರುಡನನ್ನೇ ವಾಹನವಾಗಿ ಪಡೆದಿರುವವಳೂ, ಸಾಮವೇದದೊಡನೆ ಬೋಧ್ಯಬೋಧಕಭಾವವೆಂಬ ಸಂಬಂಧದಿಂದ ಕೂಡಿರುವವಳೂ, ವಿಷ್ಣುವೇ ಮೂಲದೇವತೆಯಾಗಿ ಉಳ್ಳವಳೂ, ಮೂರು ಪಾದಗಳುಳ್ಳ ಗಾಯತ್ರೀಮಂತ್ರದಲ್ಲಿ ಪ್ರತಿಪಾದ್ಯಳೂ ಆಗಿದಾಳೆ. ಈ ಸರಸ್ವತೀದೇವಿಯು ಆರು ಕುಕ್ಷಿಗಳುಳ್ಳವಳೂ, ಐದು ಶೀರ್ಷ ಶಿಖೆಗಳುಳ್ಳವಳೂ ಆಗಿದಾಳೆ. ಈ ದೇವಿಗೆ ಅಗ್ನಿದೇವನೇ ಮುಖವೂ, ಬ್ರಹ್ಮದೇವನೇ ಶಿರಸ್ಸೂ, ರುದ್ರದೇವನೇ ಶಿಖೆಯೂ, ವಿಷ್ಣುದೇವನೇ ಹೃದಯವೂ ಬ್ರಹ್ಮನೇ ಕವಚರಕ್ಷಣೆಯೂ ಆಗಿರುವರು. ಈ ಸರಸ್ವತೀದೇವಿಯು ಸಾಂಖ್ಯಾಯನಸ ಗೋತ್ರವುಳ್ಳವಳೂ, ಕಪ್ಪುಬಣ್ಣವುಳ್ಳವಳೂ, ಆಗಿರುತ್ತಾಳೆ. ಇಂತಹ ದೇವತೆಯನ್ನು ಮೋಕ್ಷಜ್ಞಾನವನ್ನು ಪಡೆಯುವುದರಲ್ಲಿ ವಿನಿಯೋಗಿಸಿಕೊಳ್ಳಬೇಕೆಂದು ಹೇಳಿದೆ. ಇಂತಹ ದೇವತೆಯೇ ಸರಸ್ವತೀದೇವಿಯು. ಈ ಮೇಲೆ ಹೇಳಿರುವಂತೆ ಗಾಯತ್ರಿಯು ಕೆಂಪುಬಣ್ಣವುಳ್ಳವಳೂ, ಸಾವಿತ್ರಿಯು ಬಿಳಿಯಬಣ್ಣವುಳ್ಳವಳೂ, ಸರಸ್ವತಿಯು ಕಪ್ಪುಬಣ್ಣವುಳ್ಳವಳೂ ಆಗಿರುತ್ತಾರೆ.

ಈ ಪ್ರಕಾರವಾಗಿ— ಯೋ ದೇವಸ್ಸವಿತಾಽಸ್ಮಾಕಂ ಧಿಯೋಧರ್ಮಾದಿಗೋಚರಾಃ। ಪ್ರೇರಯೇತ್ತಸ್ಯ ತದ್ಭರ್ಗಸ್ತದ್ವರೇಣ್ಯಮುಪಾಸ್ಮಹೇ॥ ಎಂದು ವಿವರಿಸುವಂತೆ ಗಾಯತ್ರೀ ಮಂತ್ರಾರ್ಥವನ್ನು ಧ್ಯಾನವಮಾಡುತ್ತಾ ಜಪಿಸಿದರೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುವು ವಲ್ಲದೆ, ನಿಷ್ಕಾಮವಾದ ಸಾತ್ತ್ವಿಕೋಪಾಸನೆಯಿಂದ ಕಡೆಗೆ ಉತ್ತಮವಾದ ಮೋಕ್ಷ ಫಲವೂ ದೊರೆಯುತ್ತದೆ. ಹೀಗೆ ಗಾಯತ್ರೀಜಪಧ್ಯಾನಗಳನ್ನು ನಿತ್ಯಕರ್ಮದರೂಪದಲ್ಲಿ ವಿವರಿಸಿ, ಈಗ ಅವನ್ನು ಪ್ರಾಯಶ್ಚಿತ್ತರೂಪದಲ್ಲೂ ವಿನಿಯೋಗಿಸಿ ತಿಳಿಸುತ್ತಾರೆ.

ಪ್ರಣವೇ ನಿತ್ಯಯುಕ್ತಸ್ಯ ವ್ಯಾಹೃತೀಷು ಚ ಸಪ್ತಸು ।
ಸರ್ವೇಷಾಮೇವ ಪಾಪಾನಾಂ ಸಂಕರೇ ಸಮುಪಸ್ಥಿತೇ ॥
ದಶಸಾಹಸ್ರಮಭ್ಯರ್ಚ್ಯ ಗಾಯತ್ರೀಂ ಪಾವನೀಂ ಜಪೇತ್ ।

ಪ್ರತಿನಿತ್ಯದಲ್ಲೂ ಪ್ರಣವದ (ಓಂಕಾರದ) ಜಪದಲ್ಲೂ ಭೂಃ ಮುಂತಾದ ಏಳು ವ್ಯಾಹೃತಿಮಂತ್ರಗಳ ಜಪಧ್ಯಾನಗಳಲ್ಲೂ ಆಸಕ್ತನಾಗಿರುವ ಮನುಷ್ಯನಿಗೆ ಎಲ್ಲಾ ಬಗೆಯ ಪಾಪಗಳ ಸಂಪರ್ಕವು ಬಂದೊದಗಿದರೆ ಪಾಪಗಳನ್ನು ಹೋಗಲಾಡಿಸಿ ಶುದ್ಧಿ ಯನ್ನುಂಟುಮಾಡುವುದರಿಂದ ಪಾವನಳಾದ ಗಾಯತ್ರೀದೇವಿಯನ್ನು ಪೂಜಿಸಿ ಹತ್ತು ಸಾವಿರಸಲ ಗಾಯತ್ರೀಮಂತ್ರದ ಜಪವನ್ನು ಮಾಡಬೇಕೆಂದು ವಿಧಿಸಿದೆ.

ಋಷ್ಯಾದೀನಥ ವಕ್ಷ್ಯೇಽಹಂ ಸಾವಧಾನಮನಾಶ್ಶೃಣು ।
ತಾನಜ್ಞಾತ್ವಾ ಜಪಂ ಸರ್ವಂ ಭಸ್ಮನೀವ ಹುತಂ ಭವೇತ್ ॥
ವಾಮದೇವೋಽತ್ರಿರ್ವಸಿಷ್ಠಶ್ಚ ಶುಕಃ ಕಣ್ವಃ ಪರಾಶರಃ ।
ವಿಶ್ವಾಮಿತ್ರೋ ಮಹಾತೇಜಾಃ ಕಪಿಲಃ ಶೌನಕೋ ಮಹಾನ್ ।
ಯಾಜ್ಞವಲ್ಕ್ಯೋ ಭರದ್ವಾಜೋ ಜಮದಗ್ನಿಸ್ತಪೋನಿಧಿಃ ॥
ಗೌತಮೋ ಮುದ್ಗಲಶ್ರೇಷ್ಠೋ ವೇದವ್ಯಾಸಶ್ಚ ರೋಮಶಃ ।
ಅಗಸ್ತ್ಯಃ ಕೌಶಿಕೋ ವತ್ಸಃ ಪುಲಸ್ತ್ಯೋ ಮಾಂಡುಕಸ್ತಥಾ ।
ದುರ್ವಾಸಾಸ್ತಪ (ತಾ) ಸಾಂ ಶ್ರೇಷ್ಠೋ ನಾರದಃ ಕಾಶ್ಯಪಸ್ತಥಾ ।

ಓ ಯಾಜ್ಞವಲ್ಕ್ಯನೇ, ಈ ಮಂತ್ರಗಳಿಗೆ ಈಗ ಋಷಿಛಂದಸ್ಸುದೇವತಾಗಳನ್ನು ಹೇಳುವೆನು. ಏಕಾಗ್ರವಾದ ಮನಸ್ಸಿನಿಂದ ಕೇಳುವವನಾಗು. ಏಕೆಂದರೆ ಆ ಋಷಿ ದೇವತಾಛಂದಸ್ಸುಗಳನ್ನು ತಿಳಿಯದೆ ಮಂತ್ರಜಪವನ್ನು ಮಾಡಿದರೆ ಅಂತಹ ಜಪವು ಬೂದಿಯಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗುತ್ತದೆ. ಈ ಮಂತ್ರಾಕ್ಷರಗಳ ಋಷಿಗಳು ಯಾರು ಯಾರೆಂದರೆ, ವಾಮದೇವನು, ಅತ್ರಿಯು, ವಸಿಷ್ಠನು, ಶುಕನು,

ಕಣ್ವನು ಪರಾಶರನು, ಅತಿತೇಜಸ್ವಿಯಾದ ವಿಶ್ವಾಮಿತ್ರನು, ಕಪಿಲನು, ಗೌರವಾರ್ಹನಾದ ಶೌನಕನು, ಯಾಜ್ಞವಲ್ಕ್ಯನು, ಭರದ್ವಾಜನು, ಜಮದಗ್ನಿಯು, ಬಹುತಪಸ್ವಿಯಾದ ಗೌತಮನು, ಉತ್ತಮನಾದ ಮುದ್ಗಲನು, ವೇದವ್ಯಾಸನು, ರೋಮಶನು, ಅಗಸ್ತ್ಯನು, ಕೌಶಿಕನು, ವತ್ಸನು, ಪುಲಸ್ತ್ಯನು, ಮಾಂಡುಕನು, ದುರ್ವಾಸನು, ತಾಪಸಶ್ರೇಷ್ಠನಾದ ನಾರದನು, ಕಾಶ್ಯಪನು, ಇವರು ಕ್ರಮವಾಗಿ ಋಷಿಗಳು.

ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀಪಂಕ್ತಿರೇವಚ ।
ತ್ರಿಷ್ಟುಪ್ ಚ ಜಗತೀಚೈವ ತಥಾತಿಜಗತೀ ಮತಾ ।
ಸ್ಯಾಚ್ಛಕ್ವರ್ಯತಿಶಕ್ವರ್ಯೌ ತತಃ ಪ್ರೋಕ್ತಾ ಮಹಾಮುನೇ ॥
ಧೃತಿಶ್ಚಾತಿಧೃತಿಶ್ಚೈವ ವಿರಾಟ್ಪ್ರಸ್ತಾರಪಂಕ್ತಿಕಃ ।
ಕೃತಿಶ್ಚ ಪ್ರಕೃತಿಶ್ಚೈವ ತತಶ್ಚಾಕೃತಿರುಚ್ಯತೇ ।
ವಿಕೃತಿಸ್ಸಂಕೃತಿಶ್ಚೈವಾಕ್ಷರಪಂಕ್ತಿಸ್ತಥೈವ ಚ ।
ಭೂರ್ಭುವಸ್ಸ್ವರಿತಿ ಛಂದಸ್ತಥಾ ಜ್ಯೋತಿಷ್ಮತೀ ಸ್ಮೃತಾ ।
ಇತ್ಯೇತೇ ಛಂದಸಾಂ ಸಂಜ್ಞಾಃ ಕ್ರಮಶೋ ವಚ್ಮಿ ಸಾಂಪ್ರತಂ ॥

ಹಾಗೆಯೇ, ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ, ಅತಿಜಗತೀ, ಶಕ್ವರೀ, ಅತಿಶಕ್ವರೀ, ಧೃತಿ, ಅತಿಧೃತಿ, ವಿರಾಟ್, ಪ್ರಸ್ತಾರಪಂಕ್ತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅಕ್ಷರಪಂಕ್ತಿ, ಇವುಗಳೇ ಕ್ರಮವಾಗಿ ಆ ಮಂತ್ರಗಳ ಛಂದಸ್ಸುಗಳು. ಭೂಃ ಭುವಃ, ಸುವಃ ಇವುಗಳಿಗೆ ಜ್ಯೋತಿಷ್ಮತೀ ಛಂದಸ್ಸು ಎಂದು ಹೇಳಿದೆ. ಇದಕ್ಕೇ ದೈವೀಗಾಯತ್ರೀ ಛಂದಸ್ಸೆಂದೂ ಹೇಳಿದೆ.

ಭೂರಿತಿಛಂದೋ ಭುವ ಇತಿ ಛಂದಸ್ಸುವರಿತಿ ಛಂದೋ
ಭೂರ್ಭುವಸ್ಸುವರಿತಿ ಛಂದಾಂಸಿ ದೈವೀ ಗಾಯತ್ರೀ
ತಾನಿ ಛಂದಾಂಸೀತಿ । ಪ್ರಥಮಮಾಗ್ನೇಯಂ, ದ್ವಿತೀಯಂ
ವಾಯುವ್ಯಂ, ತೃತೀಯಂ ಸೌರ್ಯಂ, ಚತುರ್ಥಮೈಶಾನಂ
ಪಂಚಮಂ ಯಮದೈವತ್ಯಂ ಷಷ್ಠಂ ವಾರುಣಂ ಸಪ್ತಮಂ
ಬಾರ್ಹಸ್ಪತ್ಯಮಷ್ಟಮಂ ಭರ್ಗದೈವತ್ಯಂ ನವಮಮಾರ್ಯಮ್ಣಂ
ದಶಮಂ ಸಾವಿತ್ರಂ ಏಕಾದಶಂ ತ್ವಾಷ್ಟ್ರಂ ದ್ವಾದಶಂ
ಮೈತ್ರಾವರುಣಂ ತ್ರಯೋದಶಂ ಪೌಷ್ಣಂ ಚತುರ್ದಶಂ
ವಾಮದೇವ್ಯಂ ಪಂಚದಶಂ ಮಾರುತಂ ಷೋಡಶಂ

ಸೌಮ್ಯಂ ಸಪ್ತದಶಮಾಂಗಿರಸಂ, ಅಷ್ಟಾದಶಂ ವೈಶ್ವದೇವ್ಯಂ,
ಏಕೋನವಿಂಶಂ ವೈಷ್ಣವಂ ವಿಂಶತಿಃ ಪ್ರಾಜಾಪತ್ಯಂ,
ಏಕವಿಂಶತಿಃ ಸರ್ವದೈವತಂ ದ್ವಾವಿಂಶತಿಃ ಕೌಬೇರಂ
ತ್ರಯೋವಿಂಶಮಾಶ್ವಿನಂ ಚತುರ್ವಿಂಶತಿರ್ಬ್ರಾಹ್ಮಂ ॥

ಭೂಃ ಮಂತ್ರಕ್ಕೆ ಅಗ್ನಿಯೂ, ಭುವಃ ಮಂತ್ರಕ್ಕೆ ವಾಯುವೂ, ಸುವಃ ಮಂತ್ರಕ್ಕೆ ಸೂರ್ಯನೂ ದೇವತೆಗಳು, ನಾಲ್ಕನೆಯ ದೇವತೆಯು ಈಶಾನನು, ಯಮನು ವರುಣನು, ಬೃಹಸ್ಪತಿಯು, ಭರ್ಗ (ಸೂರ್ಯ ಅಥವಾ ಈಶ್ವರ)ನು, ಅರ್ಯಮನೆಂಬ ಸೂರ್ಯನು, ಸವಿತೃವು, ತ್ವಷ್ಟೃವು, ಮಿತ್ರಾವರುಣರು, ಪೂಷನು, ವಾಮದೇವನು, ಮರುತ್ತು, ಸೋಮನು, ಆಂಗಿರಸನು, ವಿಶ್ವದೇವರು, ವಿಷ್ಣುವು, ಪ್ರಜಾಪತಿಯು, ಸರ್ವದೇವತೆಯು, ಕುಬೇರನು, ಅಶ್ವಿನೀದೇವತೆಗಳು, ಬ್ರಹ್ಮನು, ಇವರುಗಳನ್ನು ಕ್ರಮವಾಗಿ ಮಂತ್ರಗಳ ದೇವತೆಗಳೆಂದು ಧ್ಯಾನಿಸಬೇಕೆಂದು ಹೇಳಿದೆ.

ಆಕಾರಾದೀಂಶ್ಚ ಷಡ್ವರ್ಣಾನ್ ದೀರ್ಘಾನ್ ತಾನ್ ಶಶಿಬಿಂದುಕಾನ್ ।
ಕಚವರ್ಗಾದಿಕಾಂಶ್ಚೈವ ಳಕ್ಷಾಂತಾಂ ಚ ಸ ಬಿಂದುಕಾಂ ॥
ಠಂ ಹಂ ಜಿಹ್ವಾ ಇತಿ ಪ್ರೋಕ್ತಂ ಬೀಜಾನ್ಯೇತಾನ್ಯನುಕ್ರಮಾತ್ ॥

ಅಲ್ಲದೆ ಇವುಗಳಿಗೆ ಮೇಲೆ ಹೇಳಿರುವಂತೆ ಪುಟ ೬೮ ರಲ್ಲಿ ವಿವರಿಸಿರುವ ದೀರ್ಘವೂ ಅನುಸ್ವಾರಯುತವೂ ಆಗಿರುವ ಆಂ ಮುಂತಾದ ಆರು ವರ್ಣಗಳನ್ನೂ ಅನುಸ್ವಾರಯುತವಾದ ವರ್ಗೀಯಪ್ರಥಮವರ್ಣಗಳನ್ನೂ, ಅವರ್ಗೀಯಗಳಾದ ರಂ ವಂ ಳಂ ಹಂ ಕ್ಷಂ ಜಿಹ್ವಾ (ಮೂಲೀಯ) ಇವನ್ನೂ ಕ್ರಮವಾಗಿ ಬೀಜಗಳೆಂದೂ ಹೇಳಿದೆ.

ಪ್ರಹ್ಲಾದಿನೀ ಪ್ರಭಾ ಸತ್ಯಾ ವಿಶ್ವಭದ್ರಾ ವಿಲಾಸಿನೀ ।
ಪ್ರಭಾವತೀ ಜಯಾ ಶಾಂತಾ ಕಾಂತಾ ದುರ್ಗಾ ಸರಸ್ವತೀ ॥
ವಿದ್ರುಮಾ ಚ ವಿಶಾಲಾ ಚ ವ್ಯಾಪಿನೀ ವಿಮಲಾ ತಥಾ ।
ತಥೈವ ಷೋಡಶೇಶಾನೀ ಬ್ರಾಹ್ಮೀ ಪ್ರೋಕ್ತಾ ತತಃ ಪರಂ ।
ತಮೋಽಪಹಾರಿಣೀ ಸೂಕ್ಷ್ಮಾ ವಿಶ್ವಯೋನಿರ್ಜಯಾವಹಾ ।
ಪದ್ಮಾಲಯಾ ಪದ್ಮಶೋಭಾ ಪದ್ಮರೂಪಾಶ್ಚ ಶಕ್ತಯಃ ॥

ಅಲ್ಲದೆ ಈ ಮಂತ್ರಗಳಿಗೆ ಶಕ್ತಿದೇವತೆಗಳನ್ನೂ ಹೀಗೆ ಹೇಳಿದೆ. ಪ್ರಹ್ಲಾದಿನೀ, ಪ್ರಭಾ, ಸತ್ಯಾ, ವಿಶ್ವಭದ್ರಾ, ವಿಲಾಸಿನೀ, ಪ್ರಭಾವತೀ, ಜಯಾ, ಶಾಂತಾ, ಕಾಂತಾ, ದುರ್ಗಾ, ಸರಸ್ವತೀ, ವಿದ್ರುಮಾ, ವಿಶಾಲಾ, ವ್ಯಾಪಿನೀ, ವಿಮಲಾ, ಈಶಾನೀ, ಬ್ರಾಹ್ಮೀ, ತಮೋಽಪಹಾರಿಣೀ, ಸೂಕ್ಷ್ಮಾ, ವಿಶ್ವಯೋನಿ, ಜಯಾವಹಾ, ಪದ್ಮಾಲಯಾ, ಪದ್ಮಶೋಭಾ, ಪದ್ಮರೂಪಾ ಎಂಬ ಈ ಇಪ್ಪತ್ತುನಾಲ್ಕು ಶಕ್ತಿಗಳನ್ನು ಕ್ರಮವಾಗಿ ಹೇಳಿದೆ.

ಪೃಥಿವ್ಯಾಪಸ್ತಥಾ ತೇಜೋ ವಾಯುರಾಕಾಶ ಏವ ಚ ।
ಗಂಧೋ ರಸಶ್ಚ ರೂಪ (ಂಚ) ಶ್ಚ ಸ್ಪರ್ಶಶ್ಶಬ್ದಸ್ತಥೈವ ಚ ॥
ವಾಕ್ಪಾಣಿಪಾದೌ ವಿಜ್ಞೇಯಾವುಪಸ್ಥಃ ಪಾಯುರೇವ ಚ ।
ಶ್ರೋತ್ರಂ ತ್ವಕ್ಚಾಪಿ ಚಕ್ಷುಶ್ಚ ಜಿಹ್ವಾಘ್ರಾಣಂ ತಥೈವ ಚ ।
ಮನೋ ಬುದ್ಧಿರಹಂಕಾರೋಽಪ್ಯವ್ಯಕ್ತಶ್ಚ ಯಥಾಕ್ರಮಂ ॥

ಇದರಂತೆಯೇ ಇವಕ್ಕೆ ಕೀಲಕಗಳನ್ನೂ ಕ್ರಮವಾಗಿ ಹೀಗೆ ಹೇಳಿದೆ. ಪೃಥಿವೀ, ಜಲ, ತೇಜಸ್, ವಾಯು, ಆಕಾಶ, ಎಂಬ ಪಂಚಭೂತಗಳೂ, ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ಈ ಭೂತಗಳ ಗುಣಗಳೂ ವಾಕ್ ಪಾಣಿ ಪಾದ ಪಾಯು ಉಪ ಸ್ಥಗಳೆಂಬ ಐದು ಕರ್ಮೇಂದ್ರಿಯಗಳೂ, ಕಿವಿ, ತ್ವಕ್ (ಚರ್ಮ), ಕಣ್ಣು, ನಾಲಗೆ, ಮೂಗು ಎಂಬ ಐದು ಜ್ಞಾನೇಂದ್ರಿಯಗಳೂ, ಮನಸ್ಸು ಬುದ್ಧಿ ಅಹಂಕಾರ ಅವ್ಯಕ್ತ ಎಂಬ ಈ ಒಟ್ಟು ಇಪ್ಪತ್ತುನಾಲ್ಕು ತತ್ತ್ವಗಳೂ ಕ್ರಮವಾಗಿ ಈ ಮಂತ್ರಗಳಿಗೆ ಕೀಲಕ ಗಳೆಂದೂ ಹೇಳಿದೆ.

ಸುಮುಖಂ ಸಂಪುಟಂ ಚೈವ ವಿತತಂ ವಿಸ್ತೃತಂ ತಥಾ ।
ದ್ವಿಮುಖಂ ತ್ರಿಮುಖಂ ಚೈವ ಚತುಷ್ಪಂಚಮುಖಂ ತಥಾ ॥
ಷಣ್ಮುಖಾಧೋಮುಖಂ ಚೈವ ವ್ಯಾಪಕಾಂಜಲಿಕಂ ತಥಾ ।
ಶಕಟಂ ಯಮಪಾಶಂ ಚ ಗ್ರಥಿತಂ ಸನ್ಮುಖೋನ್ಮುಖಂ ।
ಪ್ರಲಂಬಂ ಮುಷ್ಟಿಕಂ ಚೈವ ಮತ್ಸ್ಯಂ ಕೂರ್ಮಂ ವರಾಹಕಂ ।
ಸಿಂಹಾಕ್ರಾಂತಂ ಮಹಾಕ್ರಾಂತಂ ಮುದ್ಗರಂ ಪಲ್ಲವಂ ತಥಾ ।
ಏತಾ ಮುದ್ರಾಶ್ಚತುರ್ವಿಂಶದ್ಗಾಯತ್ರ್ಯಾಸ್ಸುಪ್ರತಿಷ್ಠಿತಾಃ ।
ಯದಿ ಮುದ್ರಾಂ ನ ಜಾನಾತಿ ಗಾಯತ್ರೀ ನಿಷ್ಫಲಾ ಭವೇತ್ ॥

ಇನ್ನು ಉಪಾಸನೆಗೆ ಬೇಕಾಗಿರುವ ಮುದ್ರೆಗಳನ್ನೂ ತಿಳಿಸುತ್ತಾರೆ. ಸುಮುಖ ಸಂಪುಟ ವಿತತ ವಿಸ್ತೃತ ದ್ವಿಮುಖ ತ್ರಿಮುಖ ಚತುರ್ಮುಖ ಪಂಚಮುಖ ಷಣ್ಮುಖ ಅಧೋಮುಖ ವ್ಯಾಪಕ ಅಂಜಲಿ ಶಕಟ, ಯಮಪಾಶ ಗ್ರಥಿತ ಸನ್ಮುಖ ಉನ್ಮುಖ ಪ್ರಲಂಬ ಮುಷ್ಟಿಕ ಮತ್ಸ್ಯ ಕೂರ್ಮ ವರಾಹ ಸಿಂಹಾಕ್ರಾಂತ ಮಹಾಕ್ರಾಂತ ಮುದ್ಗರ ಪಲ್ಲವ ಈ ಇಪ್ಪತ್ತುನಾಲ್ಕು ವಿಧವಾದ ಮುದ್ರೆಗಳನ್ನು ಹೇಳಿದೆ. ಈ ಮುದ್ರೆಗಳ ರಚನೆಯ ಸ್ವರೂಪವನ್ನು ತಿಳಿದು ಗಾಯತ್ರೀ ಜಪಧ್ಯಾನಗಳನ್ನು ಮಾಡಿದರೆ ಸಫಲ ವಾಗುತ್ತದೆ. ಇಲ್ಲದಿದ್ದರೆ ನಿಷ್ಫಲವಾಗುತ್ತದೆಂದು ಹೇಳಿದೆ.

ಸುರಭಿಜ್ಞಾನಚಕ್ರೇ (ಕ್ರಂ) ಚ ಯೋನಿಶ್ಶಂಖೋಽಥ ಪಂಕಜಂ |
ಲಿಂಗಂ ನಿರ್ಯಾಣಮುದ್ರಾ ಚಾಪ್ಯಷ್ಟೈತೇ (ತಾ) ಜಪಪೂರ್ತಯೆ||

ಇವಲ್ಲದೆ ಜಪಧ್ಯಾನಗಳು ಸಮಗ್ರವೂ ಸಂಪೂರ್ಣಗಳೂ ಆಗಬೇಕಾದರೆ ಇನ್ನೂ ಎಂಟು ಮುದ್ರೆಗಳನ್ನು ತಿಳಿದು ಆಚರಿಸಬೇಕು. ಅವು ಯಾವುವೆಂದರೆ—ಧೇನುಮುದ್ರಾ ಜ್ಞಾನಮುದ್ರಾ ಚಕ್ರಮುದ್ರಾ ಯೋನಿಮುದ್ರಾ ಶಂಖಮುದ್ರಾ ಪಂಕಜ ಮುದ್ರಾ ಲಿಂಗಮುದ್ರಾ ಮತ್ತು ನಿರ್ಯಾಣಮುದ್ರಾ. ಈ ಮೇಲೆ ವಿವರಿಸಿರುವ ವಿವರಗಳಲ್ಲಿ ಮುಖ್ಯವಾದವುಗಳನ್ನೊಳಗೊಂಡಿರುವಂತೆ ಗಾಯತ್ರೀದೇವತೆಯ ಸಗುಣಸಾಕಾರಮೂರ್ತಿಯನ್ನು ಉಪಾಸನೆಮಾಡಲು ಅನುಕೂಲಿಸುವಂತೆ ಆ ತತ್ತ್ವಗಳನ್ನೂ ದೇವತೆಗಳನ್ನೂ ಆ ದೇವೀಮೂರ್ತಿಯ ಅವಯವಗಳನ್ನಾಗಿ ಧ್ಯಾನಿಸಬೇಕೆಂದು ಹೇಳುತ್ತಾರೆ.

ದ್ಯೌರ್ಮೂರ್ಧ್ನಿ ಶಿರಸಿ ಬ್ರಹ್ಮಾ ವಿಷ್ಣುರ್ಲಲಾಟೇ ರುದ್ರೋ
ಭ್ರುವೋಃ ಚಕ್ಷು (ಷೋ) ಶ್ಚಂದ್ರಾದಿತ್ಯೌಕರ್ಣಯೋರಶ್ವಿನೌ ನಾಸಿಕ
ಯೋರ್ವಾಯುರೋಷ್ಠಯೋರುಭೇ ಸಂಧ್ಯೇ, ಮುಖಮು(ಖೇ)ಗ್ನಿ
ರ್ಜಿಹ್ವಾ (ಯಾಂ) ಸರಸ್ವತೀ ಕಂಠೇ ಚ ಸ್ವಾಧ್ಯಾಯಾ (ಯ) ಸ್ತನಿತಂ
ವಚಸಿ ಬಾಹ್ವೋರ್ಮರುತಃ ಹೃದಯೇ ಪರ್ಜನ್ಯ ಆಕಾಶಮುದರಂ
ನಾಭಿರಂತರಿಕ್ಷಂ ಕಟಿರಿಂದ್ರಾಣೀ ಜಘನಂ ಪ್ರಾಜಾಪತ್ಯಂ
ಕೈಲಾಸಮಲಯಾವೂರೂ ವಿಶ್ವೇದೇವಾ ಜಾನ್ವೋಃ ಕುಶಿಕೋ
ಜಂಘಯೋರಯನದ್ವಯಂ ಕೂರ್ಪರಯೋಃ ಖುರಾಃ ಪಿತರಃ
ಪಾದಯೋಃ ಪೃಥಿವೀ ಅಂಗುಳ್ಯೋ ರೋಮಾಣಿ ನಖಾನಿ
ಭವಂತಿ ಸಂಧ್ಯಾಕಾಲ ತ್ರಯಮಾಚ್ಛಾದನಂ ಸಂವತ್ಸರಾಹೋರಾ
ತ್ರಾದಯೋನಿಮೇಷಃ ಸರ್ವಂ ಗಾಯತ್ರ್ಯಾಂ ಸುಪ್ರತಿಷ್ಠಿತಂ ||

ದ್ಯೌರ್ಲೋಕವು (ಸ್ವರ್ಗವು) ಆ ದೇವಿಯ ತಲೆಯಲ್ಲಿ ನೆತ್ತಿಯು, ಬ್ರಹ್ಮದೇವನು ಆ ದೇವಿಯ ಶಿರಸ್ಸಿನಲ್ಲಿಯೂ, ವಿಷ್ಣುವು ಹಣೆಯಲ್ಲಿಯೂ, ರುದ್ರನು ಹುಬ್ಬುಗಳಲ್ಲೂ, ಚಂದ್ರಸೂರ್ಯರು ಕಣ್ಣುಗಳಲ್ಲೂ, ಅಶ್ವಿನೀದೇವತೆಗಳು ಕಿವಿಗಳಲ್ಲೂ, ವಾಯುವು ಮೂಗಿನಲ್ಲೂ, ಪ್ರಾತಃಕಾಲದ ಮತ್ತು ಸಾಯಂಕಾಲದ ಸಂಧ್ಯಾದೇವಿಯರು ಎರಡು ತುಟಿಗಳಲ್ಲೂ, ಅಗ್ನಿದೇವನು ಆ ದೇವಿಯ ಮುಖದಲ್ಲೂ, ಸರಸ್ವತೀ ದೇವಿಯು ಆ

ಗಾಯತ್ರೀಮಾತೆಯ ನಾಲಗೆಯಲ್ಲಿಯೂ, ವೇದಗಳು ಆಕೆಯ ಕಂಠಪ್ರದೇಶದಲ್ಲೂ, ಮೇಘಧ್ವನಿಯು ಆಕೆಯ ಮಾತಿನಲ್ಲೂ, ಮರುತ್ತುಗಳು ಆ ತಾಯಿಯ ಬಾಹುಗಳಲ್ಲೂ ವೃಷ್ಟಿಗೆ ಅಭಿಮಾನಿದೇವತೆಯಾದ ಪರ್ಜನ್ಯನು ಹೃದಯದಲ್ಲೂ, ಆಕಾಶತತ್ತ್ವವು ಆಕೆಯ ಉದರದಲ್ಲೂ, ಅಂತರಿಕ್ಷಲೋಕವು ಆ ದೇವಿಯ ನಾಭಿಯಲ್ಲೂ, ಇಂದ್ರಾಣೀದೇವಿಯು ಆ ಗಾಯತ್ರೀದೇವಿಯ ಸೊಂಟದಲ್ಲೂ, ಪ್ರಜಾಪತಿದೇವತೆಯು ಆಕೆಯ ಕಿಬ್ಬೊಟ್ಟೆಯ ಪ್ರದೇಶದಲ್ಲೂ, ಕೈಲಾಸಮಲಯಪರ್ವತಗಳು ಆ ತಾಯಿಯ ತೊಡೆಗಳಲ್ಲೂ, ವಿಶ್ವೇದೇವತೆಗಳು ಆ ದೇವಿಯ ಮಂಡಿಗಳಲ್ಲೂ, ಕುಶಿಕನು ಆ ತಾಯಿಯ ಮೊಣಕಾಲುಪ್ರದೇಶಗಳಲ್ಲೂ, ಉತ್ತರಾಯಣ ದಕ್ಷಿಣಾಯನಗಳು ಆಕೆಯ ಹಿಮ್ಮಡಿ ಪ್ರದೇಶಗಳಲ್ಲೂ, ಪಿತೃದೇವತೆಗಳು ಮುಂಗಾಲು ಹೆಜ್ಜೆಗಳಲ್ಲೂ, ಭೂಮಿಯು ಆ ತಾಯಿಯ ಬೆರಳು ರೋಮಗಳು ಉಗುರುಗಳಲ್ಲಿಯೂ ನೆಲಸಿರುತ್ತಾರೆಂದೂ, ಪ್ರಾತಃ ಕಾಲ ಮಧ್ಯಾಹ್ನಕಾಲ ಸಂಧ್ಯಾಕಾಲಗಳು ಆಕೆಯ ಹೊದಿಕೆಗಳಾಗಿಯೂ, ವರ್ಷ, ಹಗಲು, ರಾತ್ರಿ ಮುಂತಾದ ಕಾಲಭಾಗಗಳು ಆ ಗಾಯತ್ರಿಯ ರೆಪ್ಪೆಗಳಾಗಿಯೂ ಇವೆ ಎಂದೂ ಧ್ಯಾನಿಸಬೇಕು. ಹೀಗೆ ಈ ಪ್ರಪಂಚದ ತತ್ತ್ವಗಳೂ ದೇವತೆಗಳೂ ದಿಕ್ಕಾಲಗಳೂ ಎಲ್ಲವೂ ಆ ಗಾಯತ್ರೀದೇವಿಯ ಉಪಾಸನಾರ್ಥವಾದ ಮೂರ್ತರೂಪದಲ್ಲಿ ಹೊಂದುವಂತೆ ಚೆನ್ನಾಗಿ ಸೇರಿಕೊಂಡಿರುತ್ತವೆ. ಈ ಹೊಂದಿಕೆಯಲ್ಲಿ ಕೆಲವು ಭಾವ ವಿಶೇಷಗಳೂ ಸೂಚಿತವಾಗುತ್ತವೆ.

ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಂ ।
ಸಹಸ್ರನೇತ್ರಾಂ ಗಾಯತ್ರೀಂ ಶರಣಮಹಂ ಪ್ರಪದ್ಯೇ ॥

ಹೀಗೆ ಸಹಸ್ರಪಾಲು ಮಿಗಿಲಾದ ಊರ್ಧ್ವಭಾಗವುಳ್ಳ, ನೂರುಪಾಲು ಮಿಗಿಲಾದ ಮಧ್ಯಭಾಗವುಳ್ಳ, ಹತ್ತುಪಾಲುಮೇಲಾದ ಅಧೋಭಾಗವುಳ್ಳ, ಸಾವಿರಕಣ್ಣುಗಳಿಂದ ಕೂಡಿರುವ ಗಾಯತ್ರೀದೇವತೆಯನ್ನು ರಕ್ಷಕಳನ್ನಾಗಿ ಪಡೆದಿರುತ್ತೇನೆ.

ಓಂ ತತ್ಸವಿತುರ್ವರದಾಯ ನಮಃ । ಓಂ ತತ್ಪ್ರಾತರಾದಿತ್ಯಾಯ ನಮಃ । ಓಂ ತತ್ಪೂರ್ವಜಪಾಯ ನಮಃ । ಸಾಯಮಧೀಯಾನೋ ದಿವಸಕೃತಂ ಪಾಪಂ ನಾಶಯತಿ । ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ । ಸಾಯಂಪ್ರಾತಃ ಪ್ರಯುಂಜಾನೋಽಪಾಪೋ ಭವತಿ ।

ಕೋರಿಕೆಗಳನ್ನು ಸಲ್ಲಿಸುವ ಸವಿತೃದೇವನಿಗೂ, ಪ್ರಾತಃಕಾಲದ ಸೂರ್ಯನಿಗೂ ಅದಕ್ಕೂ ಮುಂಚಿನ ಉಷಃಕಾಲದ ಜಪಕ್ಕೂ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ಈ ಉಪನಿಷತ್ತನ್ನು ಸಾಯಂಕಾಲ ಪಾರಾಯಣ ಮಾಡುವವನು ಹಗಲಿನಲ್ಲಿ ಮಾಡಿರ ಬಹುದಾದ ಪಾಪಗಳನ್ನು ನಿವಾರಿಸಿಕೊಳ್ಳುತ್ತಾನೆ. ಬೆಳಿಗ್ಗೆ ಪಾರಾಯಣ ಮಾಡಿದರೆ ರಾತ್ರಿಯಲ್ಲಿ ಮಾಡಿರಬಹುದಾದ ಪಾಪವು ನಾಶವಾಗುತ್ತದೆ. ಈ ಎರಡು ಕಾಲಗಳಲ್ಲೂ ಇದನ್ನು ಪ್ರಯೋಗಮಾಡುವವನು ಪಾಪವಿಲ್ಲದವನಾಗುತ್ತಾನೆ.

ಇದಂ ಗಾಯತ್ರ್ಯುಪನಿಷದಂ ಬ್ರಾಹ್ಮಣಃ ಪ್ರಯತಃ ಪಠೇತ್,
ಚತ್ವಾರೋ ವೇದಾಶ್ಚಾಧೀತಾ ಭವನ್ತಿ, ಸರ್ವೇಷು ತೀರ್ಥೇಷು
ಸ್ನಾತೋ ಭವತಿ, ಸರ್ವೈರ್ದೇವೈರ್ಜ್ಞಾತೋ ಭವತಿ,
ಅಭಕ್ಷ್ಯಭಕ್ಷಣಾತ್ಪೂತೋ ಭವತಿ, ಅಭೋಜ್ಯಭೋಜನಾ
ತ್ಪೂತೋ ಭವತಿ, ಅಪೇಯಪಾನತ್ಪೂತೋ ಭವತಿ,
ಸ್ವರ್ಣಸ್ತೇಯಾತ್ಪೂತೋ ಭವತಿ, ಗುರುದಾರಗಮನಾ
ತ್ಪೂತೋ ಭವತಿ, ಪತಿತಸಂಭಾಷಣಾತ್ಪೂತೋ ಭವತಿ,
ಅಪಂಕ್ತಿಭೋಜನಾತ್ಪೂತೋ ಭವತಿ, ಬ್ರಹ್ಮಹತ್ಯಾ (ಯಾಃ)
ಪೂತೋ ಭವತಿ, ಭ್ರೂಣಹತ್ಯಾ ಪೂತೋ ಭವತಿ, ಸುರಾ
ಪಾನಾತ್ಪೂತೋ ಭವತಿ, ಸರ್ವಪ್ರತಿಗ್ರಹಾತ್ಪೂತೋ ಭವತಿ ।

ಬ್ರಾಹ್ಮಣನು ಈ ಗಾಯತ್ರೀ ಉಪನಿಷತ್ತನ್ನು ಮೇಲೆ ಹೇಳಿದ ನಿಯಮಗಳನ್ನು ಪಾಲಿಸುತ್ತಾ ಪಾರಾಯಣಮಾಡಿದರೆ ನಾಲ್ಕು ವೇದಗಳನ್ನೂ ಪಾರಾಯಣಮಾಡಿದಷ್ಟು ಫಲವನ್ನು ಹೊಂದುತ್ತಾನೆ. ಎಲ್ಲ ತೀರ್ಥಗಳಲ್ಲೂ ಸ್ನಾನಮಾಡಿದ ಫಲವನ್ನು ಪಡೆಯು ತ್ತಾನೆ. ಎಲ್ಲ ದೇವತೆಗಳ ತಿಳಿವಳಿಕೆ ಅನುಗ್ರಹಗಳಿಗೆ ಪಾತ್ರನಾಗುತ್ತಾನೆ. ತಿನ್ನಬಾರದ ಆಹಾರವನ್ನು ತಿಂದುದರಿಂದ ಉಂಟಾಗಿದ್ದ ಪಾಪದಿಂದಲೂ, ಕುಡಿಯಬಾರದ ಪಾನ ಗಳನ್ನು ಕುಡಿದಿದ್ದುದರಿಂದ ಉಂಟಾದ ಪಾಪದಿಂದಲೂ, ಚಿನ್ನವನ್ನು ಕದ್ದುದರಿಂದ ಉಂಟಾಗುವ ಪಾಪದಿಂದಲೂ, ಗುರುಪತ್ನೀಸಮಾಗಮದಿಂದ ಉಂಟಾಗುವ ಪಾಪ ದಿಂದಲೂ, ಕರ್ಮನೀತಿಭ್ರಷ್ಟರೊಡನೆ ಸವ್ಯವಹಾರದಿಂದ ಉಂಟಾಗುವ ಪಾಪದಿಂದ ಲೂ, ಸಹಪಂಕ್ತಿಭೋಜನಕ್ಕೆ ಅನರ್ಹರಾದರೊಡನೆ ಊಟಮಾಡುವುದರಿಂದ ಉಂಟಾ ಗುವ ಪಾಪದಿಂದಲೂ, ಬ್ರಹ್ಮಹತ್ಯೆಯ ಪಾಪದಿಂದಲೂ, ಮದ್ಯಪಾನದಿಂದುಂಟಾಗುವ ಪಾಪದಿಂದಲೂ, ಎಲ್ಲ ಬಗೆಯ ದ್ರವ್ಯಗಳನ್ನೂ ದಕ್ಷಿಣೆಯಾಗಿ ಸ್ವೀಕರಿಸುವುದರಿಂದ ಉಂಟಾಗುವ ಪಾಪದಿಂದಲೂ ಬಿಡುಗಡೆಯನ್ನು ಹೊಂದಿ ಪರಿಶುದ್ಧನಾಗುತ್ತಾನೆ.

ಅಬ್ರಹ್ಮಚಾರೀ ಬಹ್ಮಚಾರೀ ಭವತಿ ಯ ಇದಂ ಗಾಯತ್ರ್ಯುಪನಿಷದಂ ಯುಕ್ತೋ ಬ್ರಾಹ್ಮಣಃ ಪ್ರಯತಃ ಪಠೇತ್ ಸ ಸರ್ವಪಾಪೈಃ ಪ್ರಮುಚ್ಯತೇ, ಬ್ರಹ್ಮಲೋಕೇ ಮಹೀಯತೇ ಬ್ರಹ್ಮಲೋಕೇಮಹೀಯತ ಇತ್ಯಾಹ ಭಗವಾನ್ ಬ್ರಹ್ಮಾ ॥ ಓಂ ಸಹನಾವವತು ॥ ಸಹ ನೌ ಭುನಕ್ತು ॥ ಸಹವೀರ್ಯಂ ಕರವಾವಹೈ ॥ ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ ॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

॥ ಇತಿ ಗಾಯತ್ರ್ಯುಪನಿಷತ್ ॥

॥ ಓಂ ತತ್ಸತ್ ॥

ವೇದಾಧ್ಯಯನದಲ್ಲೂ, ಇಂದ್ರಿಯನಿಗ್ರಹದಲ್ಲೂ ನಿಯಮಗಳನ್ನು ಮೀರಿದವನೂ ಈ ಗಾಯತ್ರೀ ಉಪನಿಷತ್ತಿನ ಪಾರಾಯಣದಿಂದ ಬ್ರಹ್ಮಚರ್ಯವನ್ನು ಕಾಪಾಡಿದವನಂತೆಯೇ ಆಗುತ್ತಾನೆ. ಬ್ರಾಹ್ಮಣನು ಏಕಾಗ್ರಚಿತ್ತವುಳ್ಳವನಾಗಿ ಈ ಉಪನಿಷತ್ತನ್ನು ಪಾರಾಯಣಮಾಡಬೇಕು. ಅಂಥವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಬ್ರಹ್ಮಲೋಕದಲ್ಲಿ ಗೌರವಸತ್ಕಾರಗಳಿಗೆ ಪಾತ್ರನಾಗುತ್ತಾನೆ. ಎಂದು ಮಹಾಮಹಿಮಶಾಲಿಯೂ ಷಡ್ಗುಣೈಶ್ವರ್ಯ ಸಂಪನ್ನನೂ ಆದ ಬ್ರಹ್ಮನು ಯಾಜ್ಞವಲ್ಕ್ಯನಿಗೆ ಉಪದೇಶಿಸಿದನು.

ಈ ಕಡೆಯ ಭಾಗವು ಅರ್ಥವಾದವು. ಈ ಉಪನಿಷತ್ತಿನ ಪಾರಾಯಣದಲ್ಲೂ, ಗಾಯತ್ರೀಮಂತ್ರದ ಜಪ, ಅದರ ಅರ್ಥದ ಧ್ಯಾನ, ಉಪಾಸನೆಗಳಲ್ಲಿ ಉಪಾಸಕರಿಗೆ ಆದರವೂ ಉತ್ಸಾಹವೂ ಉಂಟಾಗಲೆಂದು ಹೊಗಳಿದೆ. ಇಂತಹ ಹೊಗಳಿಕೆಯ ಭಾಗಕ್ಕೆ ಅರ್ಥವಾದವೆಂದು ಹೆಸರು. ಅಲ್ಲದೆ, ಆದರದಿಂದಲೂ ಗುರೂಪದೇಶದಲ್ಲಿಯೂ ಶ್ರುತಿವಾಕ್ಯದಲ್ಲಿಯೂ ಅಚಂಚಲವಾದ ಶ್ರದ್ಧಾಭಕ್ತಿಗಳಿಂದಲೂ ಉಪಾಸನೆ ಮಾಡಿದರೆ ಸಿದ್ಧಿಯು ದೊರೆಯುವುದರಲ್ಲಿ ಸಂದೇಹವಿಲ್ಲವು. ಆಗ ಈ ಅರ್ಥವಾದವೂ ಅತಿಶಯೋಕ್ತಿಯಾಗದೆ ನಿಜವಾದ ಸ್ಥಿತಿಯನ್ನೇ ತಿಳಿಸುತ್ತದೆ ಎಂಬುದೂ ಗೊತ್ತಾಗುತ್ತದೆ. ಆದುದರಿಂದ ಉಪಾಸನಾಸಿದ್ಧಿಯ ಮಹಿಮೆಯನ್ನು ಎಷ್ಟು ಹೆಚ್ಚಿಸಿ ವರ್ಣಿಸಿದರೂ ಮಿತಿಮೀರಿದಂತಾಗುವುದಿಲ್ಲವು ಎಂಬುದು ತಾತ್ಪರ್ಯವು.

ಗುರೂಪದೇಶದಿಂದಲೂ ಗ್ರಂಥಗಳ ವ್ಯಾಸಂಗದಿಂದಲೂ ಪಂಡಿತರೊಡನೆ ವಿಚಾರದಿಂದಲೂ ದೊರೆತ ಸಂಗತಿಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಈ ಅಲ್ಪಕಾಲ ದಲ್ಲೂ ಸ್ಥಳದಲ್ಲೂ ಸಂಗ್ರಹಿಸಲು ಯತ್ನಿಸಿದೇನೆ.

ನಿಯಮಪಾಲನೆಯಲ್ಲಿ ಎಲ್ಲರೂ ಕಟ್ಟುನಿಟ್ಟಾಗಿ ಆಸಕ್ತಿಯುಳ್ಳವರಾಗಿರಬೇಕು. ಬ್ರಾಹ್ಮಣನಾದವನು ಹೆಚ್ಚಾದ ಕಟ್ಟುನಿಟ್ಟಿನಿಂದ ಇರಬೇಕು. ಇತರ ದ್ವಿಜರಿಗೆ ಸ್ವಲ್ಪಮಟ್ಟಿಗೆ ಲಘುಮಾಡಿರುವುದು ನ್ಯಾಯವೆಂಬ ಅಂಶವನ್ನೂ ಸೂಚಿಸಿ ಅಲ್ಲಲ್ಲಿ ಬ್ರಾಹ್ಮಣ ಎಂದು ಉತ್ಕೀರ್ತನೆ ಮಾಡಿದೆ. ಆದುದರಿಂದ ನಿಯಮಪಾಲನೆಯು ಎಲ್ಲರಿಗೂ ವಿಹಿತವಾಗಿದೆ ಎಂದು ತಿಳಿಯಬೇಕು.

॥ ಶ್ರೀರಸ್ತು ॥

ತಿದ್ದುಪಡಿ

ಪುಟ	ಪಂಙ್ತಿ	ಇರುವುದು	ಇರಬೇಕಾದುದು
೬	೧೬	ಅಶ್ವ	ಆಶ್ವ
,,	,,	ಮಷರ್ಷಿ	ಮಹರ್ಷಿ
,,	೧೭	ಅಶ್ವ	ಆಶ್ವ
೨೨	೧೮	ತೃಪರಾ	ತ್ಯಪರಾ
,,	೨೨	ಹೆಚ್ಚುಕ	ಹೆಚ್ಚು
೨೩	೩	ವಾಗಿರುರ	ವಾಗಿರುವ
೨೫	೧೩	ಅಪೇಕ್ಷಿಸೆದೆ	ಅಪೇಕ್ಷಿಸದೆ
೨೬	೨೬	ಸಾಧಿಸುವುವಕ್ಕೆ	ಸಾಧಿಸುವುದಕ್ಕೆ
೩೬	೨೭	ದ್ರ್ವ	ದ್ರ್ವ
೩೮	೨೮	ಚಂದಸ್ಸು	ಛಂದಸ್ಸು
೫೨	೨೬	ಷೂತ್ರಂ	ಮಾತ್ರಂ
೬೫	೧೮	ತಪ್ಪುತ್ತವೆ	ತಪ್ಪುತ್ತದೆ
೭೫	೩	ಪಾಪ	ಪಾಪಿ
೭೬	೩	ಪ್ರಜೋ	ಪ್ರಚೋ
೮೮	೧೫	ಪುಷ್ಟಾ	ಪೃಷ್ಠಾ
೯೭	೧೨	ಪವಳು	ವವಳು
೧೦೨	೩	ಪ್ರಾಚಾ	ಪ್ರಾಜಾ